# –: ಮುನ್ನುಡಿ :–

2010–11 ರಲ್ಲಿ ಪ್ರಾರಂಭವಾಗಿರುವ ಆದರ್ಶ ವಿದ್ಯಾಲಯಗಳ ವಸ್ತುಸ್ಥಿತಿಯನ್ನು ತಿಳಿಯಲು 2019–20 ನೇ ಶೈಕ್ಷಣಿಕ ಸಾಲಿನಲ್ಲಿ DSERT ಬೆಂಗಳೂರು ಮತ್ತು ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ (ಡಯಟ್) ಕಮಲಾಪೂರ, ಕಲಬುರಗಿ ಜಿಲ್ಲೆ ಅವರ ಸಹಯೋಗದಲ್ಲಿ T E ಯೋಜನೆ ಅಡಿಯಲ್ಲಿ ಕೈಗೊಳ್ಳಲಾದ **" ಆದರ್ಶ ಶಾಲೆಗಳ ವಸ್ತುಸ್ಥಿತಿ ಅಧ್ಯಯನ "** ಎಂಬ ವಿಷಯವನ್ನು ಕುರಿತು ಸಂಶೋಧನಾ ಅಧ್ಯಯನ ಕಾರ್ಯವನ್ನು ಕೈಗೆತ್ತಿಕೊಳ್ಳಲಾಗಿದೆ.

ಪ್ರಸ್ತುತ ಸಂಶೋಧನಾ ಅಧ್ಯಯನ ಕಾರ್ಯವನ್ನು ಡಯಟನ ಉಪನ್ಯಾಸಕರಾದ ಕುಮಾರಿ. ವಿಜಯಲಕ್ಷ್ಮಿ ಕಟಕೆ, ಅವರಿಗೆ ವಹಿಸಿಕೊಡಲಾಗಿದ್ದು, ಸದರಿ ಕಾರ್ಯವನ್ನು ಅವರು ಅಚ್ಚುಕಟ್ಟಾಗಿ ಕೈಗೊಂಡು, ಕಲಬುರಗಿ ಜಿಲ್ಲೆಯ ಆದರ್ಶ ವಿದ್ಯಾಲಯಗಳಿಗೆ ಸಂದರ್ಶಿಸಿ ಮುಖ್ಯ ಶಿಕ್ಷಕರು, ಸಹ ಶಿಕ್ಷಕರು, ವಿದ್ಯಾರ್ಥಿಗಳು ಹಾಗೂ ಪಾಲಕರನ್ನು ಸಂದರ್ಶಿಸಿ ಅವರಿಂದ ಮಾಹಿತಿಗಳನ್ನು ಸಂಗ್ರಹ ಮಾಡಿಕೊಂಡು ಆದರ್ಶ ಶಾಲೆಗಳ ವಸ್ತುಸ್ಥಿತಿಯನ್ನು ಕಂಡುಕೊಳ್ಳುವ ಕಾರ್ಯವನ್ನು ಕೈಗೊಂಡಿರುತ್ತಾರೆ.

ಸದರಿ ಸಂಶೋಧನಾ ಕಾರ್ಯದಿಂದ ಕಂಡುಕೊಳ್ಳಲಾದ ಆದರ್ಶ ವಿದ್ಯಾಲಯಗಳ ವಸ್ತುಸ್ಥಿತಿಯನ್ನು ಪರಿಶೀಲಿಸಿ ಅವಶ್ಯಕ ಪರಿಹಾರಗಳನ್ನು ಅಥವಾ ಸುಧಾರಣೆಗಳನ್ನು ಕಂಡುಕೊಳ್ಳುವುದರ ಮೂಲಕ ಆದರ್ಶ ವಿದ್ಯಾಲಯಗಳ ಗುಣಾತ್ಮಕ ಶಿಕ್ಷಣವನ್ನು ಇನ್ನೂ ಉತ್ತಮ ಪಡಿಸಬಹುದು ಎಂದು ಈ ಸಂಶೋಧನಾ ಅಧ್ಯಯನ ವರದಿಯಿಂದ ಕಂಡುಬಂದಿರುತ್ತದೆ.

ಪ್ರಾಚಾರ್ಯರು ಹಾಗೂ ಉಪನಿರ್ದೇಶಕರು(ಅಭಿವೃದ್ಧಿ)
ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ(ಡಯಟ್)
ಕಮಲಾಪೂರ, ಜಿ॥ ಕಲಬುರಗಿ

ಸ್ಥಳ: ಕಮಲಾಪೂರ

## –: ಕೃತಜ್ಞತೆಗಳು :–

ಈ ಸಂಶೋಧನಾ ಕಾರ್ಯವನ್ನು ಕೈಗೊಳ್ಳಲು ಅವಕಾಶವನ್ನು ನೀಡಿ , ಅಮೂಲ್ಯ ಸಲಹೆ ಸೂಚನೆಗಳನ್ನು ನೀಡಿ ಸಹಕರಿಸಿದ ಶ್ರೀ.ಮಜಹರ ಹುಸೇನ , ಉಪನಿರ್ದೇಶಕರು (ಅಭಿವೃದ್ಧಿ) ಹಾಗೂ ಪಾಚಾರ್ಯರು, ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ (ಡಯಟ್) ಕಮಲಾಪೂರ, ಜಿ॥ ಕಲಬುರಗಿ ಇವರಿಗೆ ಹೃದಯ ಪೂರ್ವಕ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ.

ಈ ಸಂಶೋಧನಾ ಕಾರ್ಯಕ್ಕೆ ಸಂಬಂಧಿಸಿದಂತೆ ಪ್ರತಿಹಂತದಲ್ಲಿ ಸೂಕ್ತ ಮಾರ್ಗದರ್ಶನ ನೀಡಿ ಸಹಕರಿಸಿದ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ (ಡಯಟ್) ಕಮಲಾಪೂರ , ಜಿ॥ ಕಲಬುರಗಿಯ ಎಲ್ಲಾ ಹಿರಿಯ ಉಪನ್ಯಾಸಕರು ಹಾಗೂ ಉಪನ್ಯಾಸಕರು ಮತ್ತು ಸಿಬ್ಬಂದಿ ವರ್ಗದವರಿಗೂ ನನ್ನ ಹೃದಯಪೂರ್ವಕ ವಂದನೆಗಳನ್ನು ಸಲ್ಲಿಸುತ್ತೇನೆ.

ಪ್ರಸ್ತುತ ಸಂಶೋಧನಾ ಕಾರ್ಯಕ್ಕೆ ಸಂಬಂಧಿಸಿದಂತೆ ಅಗತ್ಯವಾದಂತ ಮಾಹಿತಿಯನ್ನು ನೀಡಿ ತಮ್ಮ ಅಭಿಪ್ರಾಯಗಳನ್ನು ಮುಕ್ತವಾಗಿ ವ್ಯಕ್ತಪಡಿಸಿದ ಕಲಬುರಗಿ ಜಿಲ್ಲೆಯ ಅಫಜಲಪೂರ, ಆಳಂದ, ಚಿಂಚೋಳಿ, ಚಿತ್ತಾಪೂರ, ಜೇವರ್ಗಿ, ಕಲಬುರಗಿ ದಕ್ಷಿಣ ವಲಯ ಹಾಗೂ ಸೇಡಂ ತಾಲೂಕಿನ ಆದರ್ಶ ವಿದ್ಯಾಲಯಗಳ ಮುಖ್ಯ ಶಿಕ್ಷಕರು, ಸಹ ಶಿಕ್ಷಕರು, ವಿದ್ಯಾರ್ಥಿಗಳು ಮತ್ತು ಪಾಲಕರಿಗೆ ವಂದನೆಗಳು.

ಕುಮಾರಿ. ವಿಜಯಲಕ್ಷ್ಮಿ ಕಟಕೆ
ಉಪನ್ಯಾಸಕಿ, ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ(ಡಯಟ್)
ಕಮಲಾಪೂರ, ಜಿ॥ ಕಲಬುರಗಿ

## –: ಪರಿವಿಡಿ :–

**ಪುಟ ಸಂಖ್ಯೆ**


**ಅಧ್ಯಾಯ - 1 : ಪೀಠಿಕೆ** **5 – 12**

1.1 ಪೀಠಿಕೆ

1.2 ಅಧ್ಯಯನದ ಶೀರ್ಷಿಕೆ

1.3 ಅಧ್ಯಯನದ ಅಗತ್ಯತೆ

1.4 ಅಧ್ಯಯನದ ವ್ಯಾಪ್ತಿ

1.5 ಸಂಶೋಧನಾ ಪ್ರಶ್ನೆಗಳು

1.6 ಅಧ್ಯಯನದ ಉದ್ದೇಶಗಳು

**ಅಧ್ಯಾಯ – 2 : ಸಂಬಂಧಿತ ಸಾಹಿತ್ಯದ ಅವಲೋಕನ** **13 – 17**

2.1 ಪೀಠಿಕೆ

2.2 ಅರ್ಥ ಮತ್ತು ವ್ಯಾಖ್ಯಾನ

2.3 ಸಂಬಂಧಿತ ಸಾಹಿತ್ಯದ ಅವಲೋಕನದ ಅವಶ್ಯಕತೆ

2.4 ಸಂಬಂಧಿತ ಸಾಹಿತ್ಯದ ಅವಲೋಕನದ ಮಹತ್ವ

2.5 ಹಿಂದಿನ ಸಂಶೋಧನೆಗಳ ಸ್ಥೂಲ ಪರಿಚಯ

**ಅಧ್ಯಾಯ - 3 : ಸಂಶೋಧನಾ ವಿನ್ಯಾಸ** **18 – 29**

3.1 ಪೀಠಿಕೆ

3.2 ನಮೂನೆಯ ಆಯ್ಕೆ (ಪ್ರತಿಚಯನ)

3.3 ದತ್ತಾಂಶ ಸಂಗ್ರಹಣೆಗೆ ಬಳಸಿದ ಸಾಧನಗಳು

3.4 ದತ್ತಾಂಶ ಸಂಗ್ರಹಣೆಯ ವಿಧಾನ

3.5 ದತ್ತಾಂಶ ಸಂಗ್ರಹಣೆ

3.6 ಸಂಖ್ಯಾಶಾಸ್ತ್ರೀಯ ತಂತ್ರಗಳು

**ಅಧ್ಯಾಯ - 4 : ದತ್ತಾಂಶ ವಿಶ್ಲೇಷಣೆ ಮತ್ತು ಅರ್ಥೈಸುವಿಕೆ 30 – 65**

4.1 ಪೀಠಿಕೆ

4.2 ದತ್ತಾಂಶ ವಿಶ್ಲೇಷಣೆ ಮತ್ತು ಅರ್ಥೈಸುವಿಕೆ

4.3 ಪ್ರಶ್ನೆವಾರು ವಿಶ್ಲೇಷಣೆ

4.4 ಅಧ್ಯಯನದ ಫಲಿತಾಂಶ

**ಅಧ್ಯಾಯ – 5 : ಸಾರಾಂಶ ಮತ್ತು ಸಮಾರೋಪ 66 – 75**

5.1 ಪೀಠಿಕೆ

5.2 ಸಂಶೋಧನೆಯಲ್ಲಿ ಕಂಡು ಬಂದ ಪ್ರಮುಖ ಅಂಶಗಳು

5.3 ಅಧ್ಯಯನದ ಫಲಿತಾಂಶ

5.4 ತೀರ್ಮಾನಗಳು

5.5 ಶಿಫಾರಸ್ಸುಗಳು / ಸಲಹೆಗಳು

5.6 ಉಪಸಂಹಾರ

**ಅಧ್ಯಾಯ - 6 : ಉಲ್ಲೇಖಗಳು 76 – 101**

6.1 ಗ್ರಂಥ ಸೂಚಿ

6.2 ಅನುಬಂಧಗಳು

ಅ) ಪ್ರಶ್ನಾವಳಿ : ಮುಖ್ಯ ಶಿಕ್ಷಕರು, ಸಹ ಶಿಕ್ಷಕರು, ವಿದ್ಯಾರ್ಥಿಗಳು
ಹಾಗೂ ಪಾಲಕರು

ಆ) ಫೋಟೋಗಳು

# ಅಧ್ಯಾಯ : 1 ಪೀಠಿಕೆ

## 1.1 ಪೀಠಿಕೆ :

ಶಿಕ್ಷಣ ಒಂದು ಅದ್ಭುತ ಅಸ್ತ್ರ. ಇದರಿಂದ ಸರ್ವತೋಮುಖ ಬೆಳವಣಿಗೆ ಸಾಧ್ಯವಾಗುವದು. ಎಲ್ಲ ಸಮಸ್ಯೆಗಳ ಕಾರಣ ಕಂಡುಹಿಡಿಯಲು, ಪರಿಹಾರ ಹುಡುಕಲು ಶಿಕ್ಷಣ ಪ್ರಮುಖ ಪಾತ್ರವಹಿಸುವುದು. ಸಮಾಜದ ಹಾಗೂ ವಯಕ್ತಿಕ ಪ್ರಗತಿಗೂ ಶಿಕ್ಷಣ ಪ್ರಮುಖ ಸಾಧನವಾಗಿದೆ. ಇಂದಿನ ದಿನಗಳಲ್ಲಿ ಶೈಕ್ಷಣಿಕ ಜಾಗೃತಿಯಾಗಿದ್ದು ಪಾಲಕರು ತಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಲು, ಅವರು ಉನ್ನತ ಶಿಕ್ಷಣ ಪಡೆದು ಉಜ್ವಲ ಭವಿಷ್ಯ ಹೊಂದುವಂತೆ ಮಾಡಲು ಕಾಳಜಿ ಹೊಂದಿರುವರು.

ನಗರ ಪ್ರದೇಶದವರು, ಶ್ರೀಮಂತರು, ಸುಶಿಕ್ಷಿತರು, ಅಧಿಕಾರಿ ವರ್ಗದ ಅನೇಕ ಪಾಲಕರು ತಮ್ಮ ಮಕ್ಕಳಿಗೆ ಉತ್ತಮ ಶೈಕ್ಷಣಿಕ ಮತ್ತು ಭೌತಿಕ ಸೌಕರ್ಯಗಳನ್ನು ಹೊಂದಿರುವ ಆಂಗ್ಲ ಮಾಧ್ಯಮದ ಶಾಲೆಗಳಲ್ಲಿ ಶಿಕ್ಷಣ ನೀಡಿ ಅವರು ಉನ್ನತ ಶಿಕ್ಷಣ ಪಡೆದು ಉಜ್ವಲ ಭವಿಷ್ಯ ಕಟ್ಟಿಕೊಳ್ಳುವಂತೆ ಮಾಡುವರು. ಆದರೆ ಗ್ರಾಮೀಣ ಪ್ರದೇಶದ ಹೆಚ್ಚಿನ ಸಂಖ್ಯೆಯಲ್ಲಿರುವ ಅನಕ್ಷರಸ್ಥ, ಕೂಲಿಕಾರ್ಮಿಕ, ರೈತರಂಥ ಬಡ ಪಾಲಕರಿಗೆ ತಮ್ಮ ಕುಟುಂಬ ನಿರ್ವಹಣೆ ಮಾಡುವದೇ ಕಷ್ಟ ಇಂಥದರಲ್ಲಿ ಹಣ ಖರ್ಚು ಮಾಡಿ ಆಂಗ್ಲ ಮಾಧ್ಯಮದಲ್ಲಿ ತಮ್ಮ ಮಕ್ಕಳಿಗೆ ಶಿಕ್ಷಣ ನೀಡಲು ಆಗಲಾರದ್ದು. ಇದರಿಂದ ಅನೇಕ ಬಡ ಪ್ರತಿಭಾವಂತ ಮಕ್ಕಳಿಗೆ ಉನ್ನತ ಶಿಕ್ಷಣ ದೊರಕಲು ಅವರು ಬದುಕಿನಲ್ಲಿ ಪ್ರಗತಿ ಸಾಧಿಸಲು ಆಗುತ್ತಿಲ್ಲ. ಸರ್ಕಾರ ಈ ದಿಶೆಯಲ್ಲಿ ಗ್ರಾಮೀಣ ಬಡ ಪ್ರತಿಭಾವಂತ ವಿದ್ಯಾರ್ಥಿಗಳು ಕೂಡಾ ಆಂಗ್ಲ ಮಾಧ್ಯಮದಲ್ಲಿ ಶಿಕ್ಷಣ ಪಡೆದು ಅವರೂ ಸಹ ಉನ್ನತ ವ್ಯಾಸಂಗ ಮಾಡಿ ಉಜ್ವಲ ಭವಿಷ್ಯ ಹೊಂದಲಿ ಎಂಬ ಉದ್ದೇಶದೊಂದಿಗೆ ಆದರ್ಶ ವಿದ್ಯಾಲಯಗಳನ್ನು ಪ್ರಾರಂಭಿಸಿರುತ್ತದೆ.

ಪ್ರೌಢಶಿಕ್ಷಣದ ಸಾರ್ವತ್ರೀಕರಣಕ್ಕಾಗಿ ಸಪ್ಟೆಂಬರ್ 2004 ರಲ್ಲಿ ಸ್ಥಾಪನೆಯಾದ ಕೇಂದ್ರ ಶಿಕ್ಷಣ ಸಲಹಾ ಮಂಡಳಿ (ಸಿಎಬಿಇ – ಸೇಂಟ್ರಲ್ ಅಡ್ವೈಸರಿ ಬೋರ್ಡ್ ಆಫ್ ಎಜುಕೇಷನ್) ಜೂನ 2005 ರಲ್ಲಿ ಅಧ್ಯಯನ ನಡೆಸಿ ಸಪ್ಟೆಂಬರ್ 2005 ರಲ್ಲಿ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿರುತ್ತದೆ. ಸದರಿ ವರದಿಯಲ್ಲಿ ಪ್ರೌಢಶಿಕ್ಷಣ ಸಾರ್ವತ್ರೀಕರಣದಲ್ಲಿ ಕೇಂದ್ರೀಯ ವಿದ್ಯಾಲಯಗಳ ಮಾದರಿಯಲ್ಲಿ ಮೂಲಭೂತ ಸೌಕರ್ಯಗಳನ್ನು ಮತ್ತು ಪಠ್ಯಕ್ರಮವನ್ನು ಒದಗಿಸಲು ಶಿಫಾರಸ್ಸು ಮಾಡಿತ್ತು. ದಿನಾಂಕ : 13–09–2007 ರಂದು ನಡೆದ ಯೋಜನಾ ಆಯೋಗದ ಸಭೆಯ ಪ್ರಕಾರ, ಕೇಂದ್ರೀಯ ವಿದ್ಯಾಲಯಗಳಲ್ಲಿರುವ ಗೂಣಮಟ್ಟಕ್ಕೆ ಅನುಗುಣವಾದ ಮೂಲ ಸೌಕರ್ಯ ಹಾಗೂ ಸೌಲಭ್ಯಗಳನ್ನು, ನಿರ್ದಿಷ್ಟ ಶಿಕ್ಷಕ–ವಿದ್ಯಾರ್ಥಿ ಅನುಪಾತವನ್ನು, ಕಂಪ್ಯೂಟರ್, ಮಾಹಿತಿ

ತಂತ್ರಜ್ಞಾನ, ಉತ್ತಮ ಫಲಿತಾಂಶವನ್ನು, ವಿದ್ಯಾರ್ಥಿಗಳ ಬೌದ್ಧಿಕ ಬೆಳವಣಿಗೆಗೆ ಪೂರಕವಾದ ಪಠ್ಯಕ್ರಮ ಮತ್ತು ಶೈಕ್ಷಣಿಕ ವಾತಾವರಣವನ್ನು ಹೊಂದಿದ್ದಲ್ಲಿ ತನ್ನ ಕಾರ್ಯಕ್ಷೇತ್ರದ ವ್ಯಾಪ್ತಿಯಲ್ಲಿ ಬೇರೆ ಶಾಲೆಗಳಿಗೆ ಮಾದರಿಯಾಗಬೇಕು.

ಮಕ್ಕಳಿಗೆ ಸಮಗ್ರ ಶಿಕ್ಷಣ ನೀಡುವುದರೊಂದಿಗೆ ಅವರು ಸರಿಯಾದ ಆಯ್ಕೆ ಮಾಡಿ ಉನ್ನತ ಶೈಕ್ಷಣಿಕ ಮತ್ತು ವೈಯಕ್ತಿಕ ಶ್ರೇಷ್ಠತೆಯನ್ನು ಸಾಧಿಸುವಂತೆ ಮಾಡುವುದು ಮಾದರಿ ಶಾಲೆಗಳ ದೃಷ್ಟಿಯಾಗಿದೆ. ಶೈಕ್ಷಣಿಕವಾಗಿ ಹಿಂದುಳಿದಿರುವ 6000 ತಾಲೂಕುಗಳಲ್ಲಿ ತಾಲೂಕಿಗೆ ಒಂದರಂತೆ ಶೈಕ್ಷಣಿಕವಾಗಿ ಶ್ರೇಷ್ಠತೆಯ ಮಾನದಂಡವನ್ನು ಸಾಧಿಸಿರುವ ಮಾದರಿ ಶಾಲೆಯನ್ನು ಪ್ರಾರಂಭಿಸಿ ಪ್ರತಿಭಾವಂತ ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳನ್ನು ಗುರುತಿಸಿ ಅವರಿಗೆ ಗುಣಮಟ್ಟದ ಶಿಕ್ಷಣವನ್ನು ನೀಡುವುದು ಆದರ್ಶ ವಿದ್ಯಾಲಯ ಗುರಿ ಹೊಂದಿದೆ.

ಆದರ್ಶ ವಿದ್ಯಾಲಯ ಈ ಕೆಳಗಿನ ಕೆಲವು ಉದ್ದೇಶಗಳನ್ನು ಹೊಂದಿದ್ದು ಪ್ರಾರಂಭ ಗೊಂಡಿರುತ್ತದೆ.

i ಪ್ರತಿಯೊಂದು ಹಿಂದುಳಿದ ತಾಲೂಕಿನಲ್ಲಿ ಕನಿಷ್ಠ ಒಂದು ಅತ್ಯುತ್ತಮ ಗುಣಮಟ್ಟವುಳ್ಳ ಹಿರಿಯ ಪ್ರೌಢ ಶಾಲೆಯನ್ನು ಹೊಂದುವುದು.

ii ಶೈಕ್ಷಣಿಕವಾಗಿ ಮುನ್ನಡೆಸುವ ಪಾತ್ರ ವಹಿಸುವುದು.

iii ನವೀನ ಪಠ್ಯಕ್ರಮ ಹಾಗೂ ಶಿಕ್ಷಣ ಕಲೆಗಳನ್ನು ಅನುಷ್ಠಾನಗೊಳಿಸುವುದು.

iv ಮೂಲ ಸೌಕಯ, ಪಠ್ಯಕ್ರಮು, ಮೌಲ್ಯಮಾಪನ ಮತ್ತು ಶಾಲೆಯ ಆಡಳಿತಗಳಲ್ಲಿ ಮಾದರಿಯಾಗುವುದು.

ಈ ಉದ್ದೇಶಗಳೊಂದಿಗೆ ಪ್ರಾರಂಭವಾದ ಆದರ್ಶವಿದ್ಯಾಲಯ ಕೆಲವೊಂದು ವೈಶಿಷ್ಟ್ಯಗಳನ್ನು ಹೊಂದಿದೆ.

i ಕೇಂದ್ರೀಯ ಶಾಲೆಗಳ ಮಾದರಿಯಲ್ಲಿ ಅನುಷ್ಠಾನ.

ii ಆಂಗ್ಲ ಭಾಷೆ ಬೋಧನಾ ಮಾಧ್ಯವಾಗಿರುವದು.

iii ಪ್ರತಿ ತರಗತಿಗೂ ಎರಡು ವಿಭಾಗಗಳಿದ್ದು ಪ್ರತಿ ತರಗತಿಗೆ 80 ವಿದ್ಯಾರ್ಥಿಗಳಿಗೆ ಅವಕಾಶವಿರುತ್ತದೆ. 6 ರಿಂದ 10ನೇ ತರಗತಿಗೆ ವಾರ್ಷಿಕವಾಗಿ 400 ವಿದ್ಯಾರ್ಥಿಗಳು ದಾಖಲಾಗುತ್ತಾರೆ.

iv ಸುಸಜ್ಜಿತವಾದ 32 ಕೊಠಡಿಗಳನ್ನೊಳಗೊಡ ಪೂರ್ಣಪ್ರಮಾಣದ ಶಾಲಾ ಕಟ್ಟಡ ಹೊಂದಿರುವದು.

v ಶಾಲಾ ಕಟ್ಟಡವು ತರಗತಿ ಕೋಣೆಗಳು, ಪ್ರಯೋಗಾಲಯ, ಕಂಪ್ಯೂಟರ್ ಲ್ಯಾಬ್ ಇತರೆ ಕೊಠಡಿಗಳನ್ನು ಹೊಂದಿರುವದು.

vi ಪ್ರತಿ ವಿದ್ಯಾರ್ಥಿಯ ಸಂಖ್ಯೆಗನುಗುಣವಾಗಿ ವಾರ್ಷಿಕ ನಿರ್ವಹಣಾ ಅನುದಾನ ಬಿಡುಗಡೆಯಾಗುವದು.

vii 6ನೇ ತರಗತಿಗೆ ಮಕ್ಕಳನ್ನು ಪ್ರವೇಶ ಪರೀಕ್ಷೆ ಮೂಲಕ ಆಯ್ಕೆ ಮಾಡಲಾಗುವದು.

ಈ ಶಾಲೆಗಳು ಕೇಂದ್ರ ಮಾದರಿ ಸಿ.ಬಿ.ಎಸ್.ಇ ಪಠ್ಯಕ್ರಮ ಅಳವಡಿಸುವ ಜೊತೆಗೆ ಮಗುವಿನ ಬೌದ್ಧಿಕ ವಿಕಸನಕ್ಕೆ ಒತ್ತು ನೀಡುವ ಅನೇಕ ಕಾರ್ಯ ತಂತ್ರಗಳನ್ನು ಒಳಗೊಂಡು ಸೂಕ್ತ ಕಟ್ಟಡ, ಊಟ, ವಸತಿ ವ್ಯವಸ್ಥೆಯೊಂದಿಗೆ ಗುಣಮಟ್ಟದ ಶಿಕ್ಷಣ ನೀಡುವ ಉದ್ದೇಶಗಳನ್ನು ಹೊಂದಿವೆ. ಅದರಲ್ಲೂ ಗ್ರಾಮೀಣ ಪ್ರತಿಭಾವಂತ ವಿದ್ಯಾರ್ಥಿ, ವಿದ್ಯಾರ್ಥಿನಿಯರಿಗೆ ಆಂಗ್ಲ ಮಾಧ್ಯಮದಲ್ಲಿ ಉಚಿತ ಶಿಕ್ಷಣ ಒದಗಿಸಿ ಅವರನ್ನು ಕೂಡ ಉನ್ನತ ವ್ಯಾಸಂಗದತ್ತ ಕೊಂಡೊಯ್ಯುವುದು.

ಸರ್ಕಾರಿ, ಅನುದಾನಿತ, ಅನುದಾನರಹಿತ ಶಾಲೆಗಳ 5ನೇ ತರಗತಿಯ ವಿದ್ಯಾರ್ಥಿ ಆಯಾ ತಾಲೂಕ ಹಂತದಲ್ಲಿ ಅರ್ಜಿ ಹಾಕಲು ಅವಕಾಶ ಕಲ್ಪಿಸಲಾಗಿರುತ್ತದೆ. ಇವರಿಗೆ ಪ್ರವೇಶ ಪರೀಕ್ಷೆ ನಡೆಯಲಿದ್ದು 3 ರಿಂದ 5ನೇ ತರಗತಿಯ ಪಠ್ಯ ಆಧರಿಸಿ ಇಂಗ್ಲಿಷ, ಗಣಿತ, ವಿಜ್ಞಾನ, ಸಮಾಜವಿಜ್ಞಾನ ಹಾಗೂ ಸಾಮಾನ್ಯ ಜ್ಞಾನವನ್ನು ಪರೀಕ್ಷಿಸುವ ಕನ್ನಡ ಹಾಗೂ ಆಂಗ್ಲ ಮಾಧ್ಯಮದ ಪ್ರಶ್ನೆಪತ್ರಿಕೆ ಇರುತ್ತದೆ.

ಈ ಶಾಲೆಗಳು ಪದವಿ ಹಾಗೂ ಸ್ನಾತಕೋತ್ತರ ಪದವಿಯೊಂದಿಗೆ ತರಬೇತಿ ಪಡೆದ ಶಿಕ್ಷಕರನ್ನೊಳಗೊಂಡಿರುತ್ತದೆ.

ಶೈಕ್ಷಣಿಕವಾಗಿ ಹಿಂದುಳಿದ ಆಯ್ದ ಬ್ಲಾಕಗಳಿಗೆ ಮಾತ್ರ ಈ ಶಾಲೆ ಸೀಮಿತವಾಗಿದ್ದು ಆಯ್ಕೆಯಲ್ಲಿ ಆಯಾ ತಾಲೂಕಿನ ಮಕ್ಕಳಿಗೆ ಪ್ರಥಮ ಆದ್ಯತೆ ನೀಡಲಾಗುವದು. ಈ ಶಾಲೆಗಳ ವಿದ್ಯಾರ್ಥಿಗಳಿಗೆ ಉಚಿತ ಪಠ್ಯಪುಸ್ತಕ, ಸಮವಸ್ತ್ರ, ಮಧ್ಯಾಹ್ನದ ಬಿಸಿಯೂಟವನ್ನು ಸಹ ಪೂರೈಸ ಲಾಗುತ್ತಿದೆ. ಈ ಶಾಲೆಗಳ ವಿದ್ಯಾರ್ಥಿಗಳು ಕನ್ನಡ ಮಾಧ್ಯಮದಿಂದ ಆಯ್ಕೆಯಾಗಿ ಬಂದಂಥವರು. ಅಂಥ ವಿದ್ಯಾರ್ಥಿಗಳ ಬೋಧನೆಯಲ್ಲಿ ಇಂಗ್ಲೀಷ್ ಮಾಧ್ಯಮದ ಮೂಲಕ ಕಲಿಕೆ ಅಷ್ಟು ಸುಲಭವೇನಲ್ಲ. ಇಲ್ಲಿ ಚಟುವಟಿಕೆ ಆಧಾರಿತ ಬೋಧನೆಗೆ ಒತ್ತು ನೀಡಲಾಗಿದೆ. ಅಲ್ಲದೇ ಮಕ್ಕಳ ಸರ್ವಾಂಗೀಣ ವ್ಯಕ್ತಿತ್ವ ರೂಪಿಸುವಲ್ಲಿ ಆರ್.ಎಮ್.ಎಸ್,ಎ ಚಟುವಟಿಕೆಗಳನ್ನು ಕೂಡ ಶಾಲೆಗಳಲ್ಲಿ ರಾಜ್ಯ ಸರ್ಕಾರದವರು ಅಳವಡಿಸುವ ಮೂಲಕ ಗುಣಾತ್ಮಕ ಶಿಕ್ಷಣಕ್ಕೆ ಒತ್ತು ನೀಡಿದೆ.

ಈ ದಿಶೆಯಲ್ಲಿ 2010–11 ನೇ ಶೈಕ್ಷಣಿಕ ವರ್ಷದಲ್ಲಿ ಆರಂಭವಾದ ಆದರ್ಶ ವಿದ್ಯಾಲಯಗಳು 2019–20 ನೇ ಶೈಕ್ಷಣಿಕ ವರ್ಷಕ್ಕೆ 10 ವರ್ಷಗಳಾಗಿದ್ದು ಅವುಗಳ ವಸ್ತುಸ್ಥಿತಿಯನ್ನು ಕಂಡುಕೊಂಡು ಮುಂದಿನ ದಿನಗಳಲ್ಲಿ ಆದರ್ಶ ವಿದ್ಯಾಲಯಗಳಲ್ಲಿಯ ಕೊರತೆಗಳನ್ನು, ಅವಶ್ಯಕತೆಗಳನ್ನು ಪೂರ್ಣಗೊಳಿಸಿ ಆದರ್ಶ ವಿದ್ಯಾಲಯಗಳನ್ನು ಶೈಕ್ಷಣಿಕವಾಗಿ ಮತ್ತು ಆಡಳಿತಾತ್ಮಕವಾಗಿ ಇನ್ನೂ ಉತ್ತಮ ಪಡಿಸಲು ಸಹಾಯಕವಾಗುತ್ತದೆ.

## 1.2 ಅಧ್ಯಯನದ ಶೀರ್ಷಿಕೆ :

**" ಆದರ್ಶ ಶಾಲೆಗಳ ವಸ್ತುಸ್ಥಿತಿ ಅಧ್ಯಯನ "**

## 1.3 ಅಧ್ಯಯನದ ಅಗತ್ಯತೆ :

ಪ್ರೌಢಶಿಕ್ಷಣದ ಸಾರ್ವತ್ರೀಕರಣಕ್ಕಾಗಿ ಸಪ್ಟೆಂಬರ್ 2004ರಲ್ಲಿ ಸ್ಥಾಪನೆಯಾದ ಕೇಂದ್ರ ಶಿಕ್ಷಣ ಸಲಹಾ ಮಂಡಳಿಯು ಸಪ್ಟೆಂಬರ್ 2005 ರ ವರದಿಯಲ್ಲಿ ಕೇಂದ್ರೀಯ ವಿದ್ಯಾಲಯಗಳ ಮಾದರಿಯಲ್ಲಿ ಪ್ರೌಢಶಾಲೆಗಳಿಗೆ ಸೌಲಭ್ಯಗಳನ್ನು ಒದಗಿಸಲು ಶಿಫಾರಸ್ಸು ಮಾಡಿತ್ತು. ದಿನಾಂಕ: 13–09–2007 ರಂದು ನಡೆದ ಯೋಜನಾ ಆಯೋಗದ ಸಭೆಯು ಮಾದರಿ ಶಾಲೆಗಳ ಬಗೆ, ಕೇಂದ್ರೀಯ ವಿದ್ಯಾಲಯಗಳಲ್ಲಿರುವ ಗುಣಮಟ್ಟಕ್ಕೆ ಅನುಗುಣವಾದ ಮೂಲಸೌಕರ್ಯ ಹಾಗೂ ಸೌಲಭ್ಯಗಳು, ಶಿಕ್ಷಕ – ಮಕ್ಕಳ ಅನುಪಾತ, ಐ.ಸಿ.ಟಿ ಬಳಕೆ, ಸಮಗ್ರ ಶೈಕ್ಷಣಿಕ ವಾತಾವರಣ, ಸೂಕ್ತ ಪಠ್ಯಕ್ರಮ ಮತ್ತು ಫಲಿತಾಂಶಕ್ಕೆ ಒತ್ತು ನೀಡುವ ಪರಿಕಲ್ಪನೆಯನ್ನು ವ್ಯಕ್ತಪಡಿಸಿತು.

ಮಕ್ಕಳಿಗೆ ಸಮಗ್ರ ಶಿಕ್ಷಣ ನೀಡುವುದರೊಂದಿಗೆ ಅವರು ಸರಿಯಾದ ಆಯ್ಕೆ ಮಾಡಿ ಉನ್ನತ ಶೈಕ್ಷಣಿಕ ಮತ್ತು ವ್ಯಯಕ್ತಿಕ ಶ್ರೇಷ್ಠತೆಯನ್ನು ಸಾಧಿಸುವಂತೆ ಮಾಡುವ ದೃಷ್ಟಿಯನ್ನು ಇದು ಹೊಂದಿರುತ್ತದೆ. ವಿದ್ಯಾರ್ಥಿ–ವಿದ್ಯಾರ್ಥಿನೀಯರು ಉಚಿತವಾಗಿ ಆಂಗ್ಲ ಮಾಧ್ಯಮದಲ್ಲಿ ಶಿಕ್ಷಣ ಪಡೆದು ಅವರೂ ಕೂಡ ಉನ್ನತ ಹಂತದ ವ್ಯಾಸಂಗ ಪಡೆದು ಪ್ರಗತಿ ಸಾಧಿಸಬೇಕೆಂದು 6 ರಿಂದ 10ನೇ ತರಗತಿವರೆಗೆ ಉಚಿತವಾಗಿ ಆಂಗ್ಲ ಮಾಧ್ಯಮದಲ್ಲಿ ಶಿಕ್ಷಣ ನೀಡುವ ಸಲುವಾಗಿ ಆದರ್ಶ ವಿದ್ಯಾಲಯಗಳನ್ನು ಪ್ರಾರಂಭಿಸಲು ಯೋಜಿಸಿತು.

ಈ ಆದರ್ಶ ವಿದ್ಯಾಲಯಗಳು Day School ಆಗಿದ್ದು ತಾಲೂಕಿನ ಎಲ್ಲಾ ಕಡೆ ಯಿಂದ ವಿದ್ಯಾರ್ಥಿಗಳು ದಾಖಲಾಗುತ್ತಾರೆ. ಇವರು ಪ್ರತಿದಿನ ಶಾಲೆಗೆ ಬಂದು ಹೋಗಬೇಕಾಗಿರುವುದರಿಂದ ಇದಕ್ಕೆ ಅನುಕೂಲವಾಗುವಂತಹ ಸೂಕ್ತವಾದ ಸ್ಥಳವನ್ನು ಗುರುತಿಸ ಬೇಕಾಗಿರುತ್ತದೆ. ಇದೊಂದು ಕೇಂದ್ರೀಯ ವಿದ್ಯಾಲಯ ಮಾದರಿಯಲ್ಲಿ ಪ್ರಾರಂಭಿಸಬೇಕಾಗಿರುವುದರಿಂದ ಇತರ ಭೌತಿಕ ಸೌಲಭ್ಯಗಳು ಇರಬೇಕಾಗಿರುತ್ತದೆ. ಶೈಕ್ಷಣಿಕ ಪ್ರಗತಿಗಾಗಿ ಆಂಗ್ಲ ಮಾಧ್ಯಮದ ಶಿಕ್ಷಕರ ನೇಮಕ ಮಾಡಬೇಕಾಗಿರುತ್ತದೆ. ಪ್ರಯುಕ್ತ ದಿನಾಂಕ : 12–04–2010 ಮತ್ತು 13–04–2010 ರಂದು ಮಾಡೆಲ್ (ಆದರ್ಶ) ಶಾಲೆ ಕುರಿತಂತೆ ಕೇತ್ರ ಶಿಕ್ಷಣಾಧಿಕಾರಿಗಳ ಸಭೆ ನಡೆಸಿ ಪರಿಶೀಲಿಸಲಾಯಿತು. ಈ ಸಭೆ ಯಲ್ಲಿ ಪಡೆದ ವಿವರಗಳ ಆಧಾರದ ಮೇಲೆ ಕೆಳಗಿನ ಅಂಶಗಳನ್ನು ಗಮನಿಸಲಾಯಿತು.

i ಮಾಡೆಲ್ ಶಾಲೆ ಪ್ರಾರಂಭಿಸಲು ಸೂಕ್ತವಾದ ಸ್ಥಳವನ್ನು ಆಯ್ಕೆ ಮಾಡಿರುವುದಿಲ್ಲ.

ii ಈಗ ಆಯ್ಕೆ ಮಾಡಿರುವ ಸ್ಥಳಗಳಿಗೆ ತಾಲೂಕಿನ ಎಲ್ಲಾ ಮಕ್ಕಳು ಪ್ರತಿದಿನ ಬಂದು ಹೋಗಲು ಸಾರಿಗೆ ಸೌಲಭ್ಯ ಇರುವುದಿಲ್ಲ.

iii ಬಹುತೇಕ ಸ್ಥಳಗಳು ತಾಲೂಕು ಕೇಂದ್ರದಿಂದ 5 ಕಿ.ಮೀ.ಗಿಂತ ದೂರವಿದ್ದು ಕೆಲವು ಸ್ಥಳಗಳು 20 ಕಿ.ಮೀ. ದೂರ ಇರುತ್ತವೆ.

iv ಕೆಲವು ಪ್ರದೇಶಗಳು ಅರಣ್ಯ ಪ್ರದೇಶವಾಗಿದ್ದು ಇಲ್ಲಿ ಶಾಲೆ ಪ್ರಾರಂಭಿಸಲು ಸೂಕ್ತವಾಗಿ ಇರುವುದಿಲ್ಲ.

v ಈ ಸ್ಥಳಗಳಲ್ಲಿ ಪೂರಕ ಸೌಲಭ್ಯಗಳಾದ ಆಸ್ಪತ್ರೆ, ನೀರು, ಮಾರ್ಕೇಟ ಮುಂತಾದವುಗಳು ಇರುವುದಿಲ್ಲ.

ಈ ಮೇಲಿನ ಎಲ್ಲ ಕೊರತೆಗಳನ್ನು ಪರಿಹರಿಸಲು ಕ್ರಮಕೈಗೊಂಡು ಉನ್ನತ ಉದ್ದೇಶದೊಂದಿಗೆ 2010–11 ರಲ್ಲಿ ಆರಂಭಗೊಂಡ ಆದರ್ಶ ವಿದ್ಯಾಲಯಗಳು ಈ 10 ವರ್ಷಗಳಲ್ಲಿ ಇದರ ಉದ್ದೇಶಗಳು ಎಷ್ಟರ ಮಟ್ಟಿಗೆ ಯಶಸ್ವಿಯಾಗಿದೆ ಎಂಬುದನ್ನು ಕಂಡುಕೊಂಡು ಅವಶ್ಯಕ ಪರಿಹಾರಗಳನ್ನು ಮತ್ತು ಸುಧಾರಣೆಗಳನ್ನು ಕೈಗೊಳ್ಳುವುದು ಅವಶ್ಯಕವಾಗಿರುವದು. ಪ್ರಯುಕ್ತ 2010–11 ನೇ ಸಾಲಿನಲ್ಲಿ 6 ನೇ ತರಗತಿಯೊಂದಿಗೆ ಪ್ರಾರಂಭವಾದ ಆದರ್ಶ ವಿದ್ಯಾಲಯಗಳ ವಸ್ತುಸ್ಥಿತಿಯನ್ನು ತಿಳಿಯಲು, ಈ ಕೆಳಗಿನ ಅಂಶಗಳನ್ನು ತಿಳಿದುಕೊಳ್ಳಲು ಅಧ್ಯಯನವು ಅಗತ್ಯವಾಗಿರುತ್ತದೆ.

1 ಆದರ್ಶ ವಿದ್ಯಾಲಯಕ್ಕೆ ಆಯ್ಕೆ ಮಾಡಿಕೊಂಡ ಸ್ಥಳ ಸೂಕ್ತವಾಗಿದೆಯೇ ?

2 ಆದರ್ಶ ವಿದ್ಯಾಲಯಗಳು ತಾಲೂಕು ಕೇಂದ್ರದಿಂದ 5 ಕಿ. ಮೀ. ವ್ಯಾಪ್ತಿಯೊಳಗೆ ಇವೆಯೇ ?

3 ಆದರ್ಶ ವಿದ್ಯಾಲಯಗಳಲ್ಲಿ ಎಲ್ಲ ಮೂಲಭೂತ ಸೌಕರ್ಯಗಳು ಲಭ್ಯ ಇವೆಯೇ ?

4 ಶಿಕ್ಷಕರು, ವಿದ್ಯಾರ್ಥಿಗಳು ಹಾಗೂ ಸಿಬ್ಬಂದಿಗೆ ಸುಸಜ್ಜಿತವಾದ ಪೀಠೋಪಕರಣಗಳು ಹಾಗೂ ಪಾಠೋಪಕರಣಗಳು ಲಭ್ಯ ಇವೆಯೇ ?

5 ಅರ್ಹ ವಿದ್ಯಾರ್ಹತೆ ಹೊಂದಿದ ಶಿಕ್ಷಕರ ನೇಮಕಾತಿ ಆಗಿದೆಯೇ ?

6 ತಾಲೂಕಿನ ಎಲ್ಲಾ ಮಕ್ಕಳು ಪ್ರತಿದಿನ ಬಂದು ಹೋಗಲು ಸಾರಿಗೆ ಸೌಲಭ್ಯ ಇರುತ್ತದೆಯೇ ?

7 ಪ್ರತಿದಿನ ಬಸ್ಸು ಪ್ರಯಾಣ ಮಾಡುವುದರಿಂದ ಮಕ್ಕಳ ಶಿಕ್ಷಣದ ಮೇಲೆ ಪ್ರಭಾವ ಬೀರುತ್ತಿದೆಯೇ?

8 ಬೋಧನೆ ಮತ್ತು ಕಲಿಕೆಯಲ್ಲಿ ಗಣಕ ಯಂತ್ರ ( ಐ.ಸಿ.ಟಿ ) ಬಳಸಲಾಗುತ್ತಿದೆಯೇ ?

9 ಆದರ್ಶ ವಿದ್ಯಾಲಯಗಳಲ್ಲಿ ಪ್ರಯೋಗಾಲಯ ಹಾಗೂ ಪ್ರಯೋಗಾಲಯ ಸಾಮಗ್ರಿಗಳು ಲಭ್ಯ ಇವೆಯೇ ? ಹಾಗೂ ಅವುಗಳನ್ನು ಸಮರ್ಪಕವಾಗಿ ಬಳಸಿಕೊಳ್ಳಲಾಗುತ್ತಿದೆಯೇ ?

10 ಆದರ್ಶ ವಿದ್ಯಾಲಯಗಳಲ್ಲಿ ಸುಸಜ್ಜಿತವಾದ ಗ್ರಂಥಾಲಯ ಲಭ್ಯ ಇವೆಯೇ ?

11 ವಿಷಯವಾರು ಲ್ಯಾಬ್‌ಗಳನ್ನು ರಚಿಸಿ ಸೃಜನಾತ್ಮಕವಾಗಿ ಅವುಗಳನ್ನು ಬಳಸಿಕೊಳ್ಳಲಾಗುತ್ತಿದೆಯೇ?

12 ವೃತ್ತಿ ಶಿಕ್ಷಣ ಸಾಮಗ್ರಿ ಮತ್ತು ಶಿಕ್ಷಕರು ಲಭ್ಯ ಇರುವರೇ ಹಾಗೂ ಮಕ್ಕಳಿಗೆ ವೃತ್ತಿ ಶಿಕ್ಷಣ ನೀಡಲಾಗುತ್ತಿದೆಯೇ ?

13 ಒಳಾಂಗಣ ಮತ್ತು ಹೊರಾಂಗಣ ಕ್ರೀಡಾ ಚಟುವಟಿಕೆಗಳಿಗೆ ಉತ್ತಮ ಆಟದ ಮೈದಾನವಿದೆಯೇ? ಹಾಗೂ ಸಹಪಠ್ಯ ಚಟುವಟಿಕೆಗಳಿಗೆ ವ್ಯವಸ್ಥೆ ಇದೆಯೇ ?

14 ಎಸ್.ಎಸ್.ಎಲ್.ಸಿ ಫಲಿತಾಂಶದಲ್ಲಿ ಪ್ರಗತಿ ಇದೆಯೇ ?

## 1.4 ಅಧ್ಯಯನದ ವ್ಯಾಪ್ತಿ :

ಪ್ರಸ್ತುತ ಸಂಶೋಧನಾ ಅಧ್ಯಯನದ ವ್ಯಾಪ್ತಿಯು ಕಲಬುರಗಿ ಜಿಲ್ಲೆಯ 7 ತಾಲೂಕಗಳಾದ ಅಫಜಲಪೂರ, ಆಳಂದ, ಚಿಂಚೋಳಿ, ಚಿತ್ತಾಪೂರ, ಜೇವರ್ಗಿ, ಕಲಬುರಗಿ ದಕ್ಷಿಣ ವಲಯ ಹಾಗೂ ಸೇಡಂ ತಾಲೂಕುಗಳಲ್ಲಿ ಇರುವ ಆದರ್ಶ ವಿದ್ಯಾಲಯಗಳು ಮಾತ್ರ ಒಳಗೊಂಡಿವೆ. ಅಧ್ಯಯನಕ್ಕೆ ಆದರ್ಶ ವಿದ್ಯಾಲಯಗಳ ಮುಖ್ಯ ಶಿಕ್ಷಕರು, ಸಹ ಶಿಕ್ಷಕರು, ವಿದ್ಯಾರ್ಥಿಗಳು, ಹಾಗೂ ಪಾಲಕರು ಒಳಗೊಂಡಿರುತ್ತಾರೆ.

## 1.5 ಸಂಶೋಧನಾ ಪ್ರಶ್ನೆಗಳು :

ಪ್ರೌಢಶಿಕ್ಷಣದ ಸಾರ್ವತ್ರೀಕರಣಕ್ಕಾಗಿ ಸಪ್ಟೆಂಬರ್ 2004 ರಲ್ಲಿ ಸ್ಥಾಪನೆಯಾದ ಕೇಂದ್ರ ಶಿಕ್ಷಣ ಸಲಹಾ ಮಂಡಳಿ ಸಪ್ಟೆಂಬರ್ 2005 ರಲ್ಲಿ ಸರ್ಕಾರಕ್ಕೆ ಸಲ್ಲಿಸಿದ ವರದಿಯಲ್ಲಿ ಪ್ರೌಢಶಿಕ್ಷಣ ಸಾರ್ವತ್ರೀಕರಣದಲ್ಲಿ ಕೇಂದ್ರೀಯ ವಿದ್ಯಾಲಯಗಳ ಮಾದರಿಯಲ್ಲಿ ಮೂಲಭೂತ ಸೌಕರ್ಯಗಳನ್ನು ಮತ್ತು ಪಠ್ಯಕ್ರಮವನ್ನು ಒದಗಿಸಲು ಶಿಫಾರಸ್ಸು ಮಾಡಿತ್ತು. ಯೋಜನಾ ಆಯೋಗದ ಪ್ರಕಾರ ಮಾದರಿ ಶಾಲೆಗಳು ಕೇಂದ್ರೀಯ ವಿದ್ಯಾಲಯಗಳಲ್ಲಿರುವ ಗೂಣಮಟ್ಟಕ್ಕೆ ಅನುಗುಣವಾದ ಮೂಲ ಸೌಕರ್ಯ ಹಾಗೂ ಸೌಲಭ್ಯಗಳನ್ನು, ನಿರ್ದಿಷ್ಟ ಶಿಕ್ಷಕ–ವಿದ್ಯಾರ್ಥಿ ಅನುಪಾತವನ್ನು, ಕಂಪ್ಯೂಟರ್, ಮಾಹಿತಿ ತಂತ್ರಜ್ಞಾನ, ಉತ್ತಮ ಫಲಿತಾಂಶವನ್ನು, ವಿದ್ಯಾರ್ಥಿಗಳ ಬೌದ್ಧಿಕ ಬೆಳವಣಿಗೆಗೆ ಪೂರಕವಾದ ಪಠ್ಯಕ್ರಮ ಮತ್ತು ಶೈಕ್ಷಣಿಕ ವಾತಾವರಣವನ್ನು ಹೊಂದಿದ್ದಲ್ಲಿ ತನ್ನ ಕಾರ್ಯಕ್ಷೇತ್ರದ ವ್ಯಾಪ್ತಿಯಲ್ಲಿ ಬೇರೆ ಶಾಲೆಗಳಿಗೆ ಮಾದರಿಯಾಗಬೇಕು.

ಈ ಆದರ್ಶ ವಿದ್ಯಾಲಯಗಳು Day School ಆಗಿದ್ದು ತಾಲೂಕಿನ ಎಲ್ಲಾ ಕಡೆ ಯಿಂದ ವಿದ್ಯಾರ್ಥಿಗಳು ದಾಖಲಾಗುತ್ತಾರೆ. ಇವರು ಪ್ರತಿದಿನ ಶಾಲೆಗೆ ಬಂದು ಹೋಗಬೇಕಾಗಿರು ವುದರಿಂದ ಇದಕ್ಕೆ ಅನುಕೂಲವಾಗುವಂತಹ ಸೂಕ್ತವಾದ ಸ್ಥಳವನ್ನು ಗುರುತಿಸ ಬೇಕಾಗಿರುತ್ತದೆ. ಇದೊಂದು ಕೇಂದ್ರೀಯ ವಿದ್ಯಾಲಯ

ಮಾದರಿಯಲ್ಲಿ ಪ್ರಾರಂಭಿಸಬೇಕಾಗಿರುವುದರಿಂದ ಇತರ ಬೌತಿಕ ಸೌಲಭ್ಯಗಳು ಇರಬೇಕಾಗಿರುತ್ತದೆ. ಶೈಕ್ಷಣಿಕ ಪ್ರಗತಿಗಾಗಿ ಆಂಗ್ಲ ಮಾಧ್ಯಮದ ಶಿಕ್ಷಕರ ನೇಮಕ ಮಾಡಬೇಕಾಗಿರುತ್ತದೆ.

ಮಗುವಿನ ಬೌದ್ಧಿಕ ವಿಕಸನಕ್ಕೆ ಒತ್ತು ನೀಡುವ ಅನೇಕ ಕಾರ್ಯ ತಂತ್ರಗಳನ್ನು ಒಳಗೊಂಡು ಸೂಕ್ತ ಕಟ್ಟಡ, ಊಟ, ವಸತಿ ವ್ಯವಸ್ಥೆಯೊಂದಿಗೆ ಗುಣಮಟ್ಟದ ಶಿಕ್ಷಣ ನೀಡುವ ಉದ್ದೇಶಗಳನ್ನು ಹೊಂದಿವೆ. ಅದರಲ್ಲೂ ಗ್ರಾಮೀಣ ಪ್ರತಿಭಾವಂತ ವಿದ್ಯಾರ್ಥಿ, ವಿದ್ಯಾರ್ಥಿನಿಯರಿಗೆ ಆಂಗ್ಲ ಮಾಧ್ಯಮದಲ್ಲಿ ಉಚಿತ ಶಿಕ್ಷಣ ಒದಗಿಸಿ ಅವರನ್ನು ಕೂಡ ಉನ್ನತ ವ್ಯಾಸಂಗದತ್ತ ಕೊಂಡೊಯ್ಯುವುದು ಇದರ ಗುರಿ ಆಗಿರುತ್ತದೆ.

ಪ್ರಯುಕ್ತ ಈ ಕೇಳಗಿನ ಪ್ರಶ್ನೆಗಳಿಗೆ ಉತ್ತರವನ್ನು ಕಂಡುಕೊಳ್ಳಲು ಅಧ್ಯಯನವನ್ನು ಕೈಗೊಳ್ಳಲಾಯಿತು.

1 ಆದರ್ಶ ವಿದ್ಯಾಲಯಗಳಿಗೆ ಮೂಲಭೂತ ಸೌಕರ್ಯಗಳು ಪೂರೈಕೆ ಆಗಿವೆಯೇ ?

2 ಆದರ್ಶ ವಿದ್ಯಾಲಯಗಳಿಗೆ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳ ನೇಮಕ ಆಗಿದೆಯೇ?

3 ಆದರ್ಶ ವಿದ್ಯಾಲಯಗಳ ಉದ್ದೇಶಕ್ಕನುಗುಣವಾಗಿ ಅರ್ಹ ಆಂಗ್ಲ ಮಾಧ್ಯಮ ಶಿಕ್ಷಕರ ನೇಮಕಾತಿ ಆಗಿರುವದೇ ? ಹಾಗೂ ಶಿಕ್ಷಕರು ತರಬೇತಿ ಹೊಂದಿರುವರೇ ?

4 ವಿದ್ಯಾರ್ಥಿಗಳಿಗೆ ಸನಿವಾಸ ಇರಲಾರದ್ದು ಅವರ ಶಿಕ್ಷಣದ ಮೇಲೆ ಪರಿಣಾಮ ಬೀರುತ್ತಿದೆಯೇ ?

5 ವಿಷಯವಾರು ಲ್ಯಾಬ್‌ಗಳ ರಚನೆ ಆಗಿರುವದೇ ಹಾಗೂ ಸಾಮಗ್ರಿಗಳ ಬಳಕೆ ಸಮರ್ಪಕವಾಗಿ ಮಾಡಿಕೊಳ್ಳಲಾಗುತ್ತಿದೆಯೇ ?

6 ಬೋಧನೆ ಮತ್ತು ಕಲಿಕೆಯಲ್ಲಿ ಗಣಕಯಂತ್ರವನ್ನು ಬಳಸಲಾಗುತ್ತಿದೆಯೇ ?

7 ವೃತ್ತಿ ಶಿಕ್ಷಣ ಶಿಕ್ಷಕರ ನೇಮಕಾತಿ ಆಗಿದೆಯೇ ಹಾಗೂ ವೃತ್ತಿ ಶಿಕ್ಷಣ ಸಾಮಗ್ರಿಗಳನ್ನು ಬಳಸಲಾಗುತ್ತಿದೆಯೇ ?

8 ಎಸ್.ಎಸ್.ಎಲ್.ಸಿ ಫಲಿತಾಂಶದಲ್ಲಿ ಪ್ರಗತಿ ಇದೆಯೇ ?

## 1.6 ಅಧ್ಯಯನದ ಉದ್ದೇಶಗಳು :

ಪ್ರಸ್ತುತ ಅಧ್ಯಯನವು ಈ ಕೆಳಗಿನ ಅಂಶಗಳನ್ನು ತಿಳಿದುಕೊಳ್ಳುವ ಉದ್ದೇಶವನ್ನು ಹೊಂದಿದೆ.

1 ಕೇಂದ್ರೀಯ ಮಾದರಿಯಲ್ಲಿ ಸುಸಜ್ಜಿತವಾದ ಕಟ್ಟಡವನ್ನು ಹೊಂದಿರುವುದು.

2 ಆದರ್ಶ ವಿದ್ಯಾಲಯ ಮೂಲಭೂತ ಸೌಕರ್ಯ ಹಾಗೂ ಸೌಲಭ್ಯಗಳನ್ನು ಹೊಂದಿರುವುದು.

3 ಬೋಧಕ ಮತ್ತು ಬೋಧಕೇತರ ಸಿಬ್ಬಂದಿಯ ನೇಮಕ ರೋಸ್ಟರ್ ಪ್ರಕಾರ ಆಗಿರುವುದು.

4 ಪ್ರತಿ ತರಗತಿಗೆ 80 ರಂತೆ 6 ರಿಂದ 10 ನೇ ತರಗತಿಗೆ ಒಟ್ಟು ವಾರ್ಷಿಕ 400 ವಿದ್ಯಾರ್ಥಿಗಳ ದಾಖಲಾತಿ ಆಗಿರುವುದು.

5 ವಿಷಯವಾರು ಲ್ಯಾಬ್‌ಗಳು ಹೊಂದಿರುವದು ಹಾಗೂ ಲ್ಯಾಬ್ ಸಾಮಗ್ರಿಗಳನ್ನು ಸಮರ್ಪಕ ವಾಗಿ ಬಳಸಿಕೊಳ್ಳುವುದು.

6 ವೃತ್ತಿಶಿಕ್ಷಣ ಶಿಕ್ಷಕ ಮತ್ತು ಸಾಮಗ್ರಿಗಳನ್ನು ಹೊಂದಿರುವದು, ಅವುಗಳನ್ನು ಬಳಸುವುದು.

7 ಗಣಕ ಯಂತ್ರದ ಲ್ಯಾಬ್ ಹೊಂದಿರುವದು ಹಾಗೂ ಗಣಕಯಂತ್ರದ ಮೂಲಕ ಬೋಧನೆ ಮತ್ತು ಕಲಿಕೆ ಮಾಡುವುದು.

8 ಸುಸಜ್ಜಿತವಾದ ಗ್ರಂಥಾಲಯ ಮಕ್ಕಳ ಮತ್ತು ಶಿಕ್ಷಕರ ಜ್ಞಾನದಾಹಕ್ಕೆ ಪೂರಕವಾಗಿರವುದು.

9 ಕ್ರೀಡೆ ಮತ್ತು ಸಹಪಠ್ಯ ಚಟುವಟಿಕೆಗಳಿಗೆ ಒಳಾಂಗಣ ಮತ್ತು ಹೊರಾಂಗಣ ವ್ಯವಸ್ಥೆ ಹೊಂದಿರುವುದು.

10 ಕ್ರೀಡಾ ಹಾಗೂ ದೈಹಿಕ ಶಿಕ್ಷಣ ಸಾಮಗ್ರಿಗಳನ್ನು ಹೊಂದಿರುವದು ಹಾಗೂ ಸಮರ್ಪಕವಾಗಿ ಅವುಗಳನ್ನು ಬಳಸಿಕೊಳ್ಳುವುದು.

11 ಎಸ್.ಎಸ್.ಎಲ್.ಸಿ ಫಲಿತಾಂಶ ಉತ್ತಮವಾಗಿರುವುದು.

12 ಸುಸಜ್ಜಿತವಾದ ಪೀಠೋಪಕರಣಗಳನ್ನು ಹೊಂದಿರುವುದು.

13 ಹಸಿರಿನಿಂದ ಕಂಗೋಳಿಸುವ ಸುಂದರ ಶಾಲಾ ಆವರಣ ಹೊಂದಿರುವುದು.

# ಅಧ್ಯಾಯ : 2 ಸಂಬಂಧಿತ ಸಾಹಿತ್ಯದ ಅವಲೋಕನ

## 2.1 ಪೀಠಿಕೆ :

ಸಂಬಂಧಿಸಿದ ಸಾಹಿತ್ಯದ ಅವಲೋಕನ ಸಂಶೋಧಕನಲ್ಲಿ ಸಂಶೋಧನೆಗೆ ಬೇಕಾಗುವ ಹೆಚ್ಚಿನ ಮಾಹಿತಿಯನ್ನು, ಜ್ಞಾನವನ್ನು, ಸಮಸ್ಯೆಯನ್ನು ಬಿಡಿಸುವ ಕೌಶಲ್ಯವನ್ನು ಹಲವಾರು ರೀತಿ ಯಿಂದಲೂ ವಿಚಾರ ಮಾಡುವ ಗುಣವನ್ನು ಬೆಳೆಸುತ್ತದೆ. ಸಂಬಂಧಿಸಿದ ಸಾಹಿತ್ಯದ ಅವಲೋಕನ ಮಾಡುವುದು ಸಂಶೋಧಕನಿಗೆ ತುಂಬಾ ಅವಶ್ಯಕವಾಗಿರುವಂಥದ್ದು. ಕಾರಣ ಸಮಸ್ಯೆಯನ್ನು ವಿವರಿಸಿದ ನಂತರ ಉದ್ದೇಶ ತಿಳಿದು ಸಮಸ್ಯೆಗೆ ಸಂಬಂಧಿಸಿದಂತೆ ಸಾಹಿತ್ಯದ ಅವಲೋಕನ ಮಾಡುವುದು ಸಂಶೋಧಕನಿಗೆ ಅತ್ಯಂತ ಸಹಾಯಕಾರಿಯಾಗಿದೆ.

## 2.2 ಅರ್ಥ ಮತ್ತು ವ್ಯಾಖ್ಯಾನ :

ನಾವು ಕೈಗೊಳ್ಳುವ ಸಂಶೋಧನಾ ವಿಷಯಕ್ಕೆ ಸಂಬಂಧಿತ ಸಾಹಿತ್ಯದ ಅಧ್ಯಯನವು ನಮ್ಮ ಸಂಶೋಧನಾ ಕಾರ್ಯಕ್ಕೆ ಸಂಬಂಧಿಸಿದಂತೆ ಪೂರ್ವಜ್ಞಾನವು ತಿಳುವಳಿಕೆಯನ್ನು ಪಡೆಯಲು ಸಹಾಯಕವಾಗಿದೆ. ಈ ರೀತಿಯ ಅಧ್ಯಯನವು ನೈಜ ಯೋಜನೆ ಕೈಗೊಳ್ಳಲು ಹಾಗೂ ಅಧ್ಯಯನದ ನಿರ್ವಹಣೆಗೆ ಅಗತ್ಯವಾದ ಪೂರ್ವ ಅವಶ್ಯಕತೆಯಾಗಿದೆ.

**ಅರ್ಥ :–**

ಸಾಹಿತ್ಯವೆಂದರೆ, ನಮ್ಮ ಸಂಶೋಧನಾ ವಿಷಯಕ್ಕೆ ಸಂಬಂಧಿಸಿದಂತೆ ನಾವು ಹಾಕಿಕೊಂಡಿರುವ ನಿರ್ದಿಷ್ಟ ಉದ್ದೇಶಗಳಿಗೆ ಅನುಗುಣವಾಗಿ ನಿರ್ದಿಷ್ಟ ಕ್ಷೇತ್ರದಲ್ಲಿ ಸಂಶೋಧನೆಯನ್ನು ನಡೆಸುವುದರ ಮೂಲಕ ಮಾಹಿತಿಯನ್ನು ಪಡೆದುಕೊಳ್ಳುವುದರ ಮೂಲಕ ವಿಷಯವನ್ನು ಅರ್ಥೈಸಿಕೊಳ್ಳುವ ಒಂದು ಜ್ಞಾನಕ್ಕೆ ಸಾಹಿತ್ಯ ಎನ್ನುವರು.

**ಪುನರಾವಲೋಕನ :–**

ಪಡೆದಂತಹ ಮಾಹಿತಿಯನ್ನು ಸಂಘಟಿಸುವುದು ಮತ್ತು ಸಂಶ್ಲೇಷಿಸುತ್ತಾ ತನ್ನ ಪ್ರಶ್ನೆಗಳಿಗೆ ಸ್ವತ: ಉತ್ತರ ಕಂಡುಕೊಳ್ಳುವುದರ ಮೂಲಕ ತಾನು ಅಧ್ಯಯನ ಮಾಡುವ ವಿಷಯ ಹೊಸದು ಎಂದು ತೋರಿಸುವದು.

**ವ್ಯಾಖೆಗಳು :–**

ಅ) ಚಾರ್ಟರ್. ದಿ. ಗುಡ್‌ರ ಪ್ರಕಾರ " ಇದು ಸಂಶೋಧಕನಿಗೆ ಜ್ಞಾನದ ಉಗ್ರಾಣವನ್ನು ತೆಗೆಯುವ ಒಂದು ಬೀಗದ ಕೈ ಇದ್ದಂತೆ. ಇದರಿಂದ ಪ್ರಾಕಲ್ಪನೆ ರಚನೆ , ಸಮಸ್ಯೆಯ ವ್ಯಾಖ್ಯಾನ, ಸಮಸ್ಯೆಯ ಪರಿಹಾರ ಇದನ್ನು ಕಂಡುಕೊಳ್ಳಲು ಅನುಸರಿಸಬೇಕಾದ ವಿಧಾನದ ಹಿನ್ನಲೆ ಇವುಗಳನ್ನು ಒದಗಿಸುತ್ತವೆ. ದೊರೆತಂತಹ ಫಲಿತಾಂಶದ ಅರ್ಥೈಸುವಿಕೆ ಹಾಗೂ ವಿಷಯದ ಬಗ್ಗೆ ಇತರರು ನಡೆಸಿದ ಸಂಶೋಧನೆಯ ಫಲಿತಾಂಶವನ್ನು ಹೋಲಿಸಿ ತರ್ಕಬದ್ಧ ಮಾಹಿತಿ ಒದಗಿಸುತ್ತದೆ. "

ಆ) ಸ್ಕಾಟರ್ ಮತ್ತು ಗುಡ್ ಎಚ್.ಎಲ್ ಪ್ರಕಾರ " ಸಾಹಿತ್ಯಕ್ಕೆ ಸಂಬಂಧಪಟ್ಟ ಪುನರಾವಲೋಕನ ಎಂದರೆ ಒಬ್ಬ ಉತ್ತಮ ವೈದ್ಯನು ಹೇಗೆ ಹೊಸಹೊಸ ಔಷಧಿಗಳನ್ನು ಕಾಯಿಲೆಗೆ ಕಂಡುಹಿಡಿಯುತ್ತಾನೋ ಹಾಗೆಯೇ ಶಿಕ್ಷಣದ ಸಮಸ್ಯೆಗಳಿಗೆ ವಿದ್ಯಾರ್ಥಿ ಸಂಶೋಧಕನು ಸಹ ತಮ್ಮ ಸಮಸ್ಯೆಯ ಕುರಿತು ಮಾಹಿತಿಯು ಎಲ್ಲಿ ಲಭ್ಯವಿದೆ ಎಂಬುದನ್ನು ತಿಳಿದು ಅದನ್ನು ಉಪಯೋಗಿಸಿಕೊಳ್ಳುವುದಾಗಿದೆ."

ಇ) ಬ್ಲೂಮ್ ಪ್ರಕಾರ " ಯಾವದೇ ಕ್ಷೇತ್ರದಲ್ಲಿ ತಳಹದಿಯಿಂದ ಮೇಲೆ ಮುಂದಿನ ಎಲ್ಲಾ ಕಾರ್ಯಗಳು ರೂಪುಗೊಳ್ಳುತ್ತವೆ. ಇಂಥಹ ತಳಹದಿಯನ್ನು ರೂಪಿಸುವಲ್ಲಿ ವಿಫಲತೆಯನ್ನು ಹೊಂದಿದ್ದರೆ ಈ ಸಂಶೋಧನೆಯು ವ್ಯರ್ಥ ಮತ್ತು ನಕಲು ಮಾಡಿದಂತಾಗುತ್ತದೆ. "

## 2.3 ಸಂಬಂಧಿತ ಸಾಹಿತ್ಯದ ಅವಲೋಕನದ ಅವಶ್ಯಕತೆ :

ಒಬ್ಬ ಸಂಶೋಧಕನು ತಾನು ಸಂಶೋಧನೆಯನ್ನು ಮಾಡಲು ಒಂದು ವಿಷಯ ವಸ್ತುವನ್ನು ಆಯ್ಕೆ ಮಾಡಿಕೊಂಡಾಗ ಸಂಶೋದನೆಗೆ ಸಂಬಂಧಿಸಿದ ಸಾಮಗ್ರಿಗಳು , ಆಕರಗಳು ಎಲ್ಲೆಲ್ಲಿ ಸಿಗುತ್ತವೆ ಎಂದು ಹುಡುಕಲು ಪ್ರಾರಂಭಿಸಿ ಮಾಹಿತಿ ಸಂಗ್ರಹಿಸುವನು. ಇದಕ್ಕೆ ಪೂರಕ ಸಾಹಿತ್ಯದ ಅವಲೋಕನ ಎನ್ನುವರು. ಹಿಂದಿನ ಜ್ಞಾನದ ತಳಹದಿಯ ಮೇಲೆ ಹೊಸ ಜ್ಞಾನವನ್ನು ನೀಡುವುದು ಸಂಶೋಧನೆಯ ಕಾರ್ಯವಾಗಿದೆ.

ಪ್ರಯುಕ್ತ ಸಂಶೋಧಕನು ಅನೇಕ ಕಡೆಗಳಿಂದ ಮಾಹಿತಿಯನ್ನು ಸಂಗ್ರಹಿಸಿ ಅದರಲ್ಲಿಯ ಮುಖ್ಯ ವಿಷಯಗಳನ್ನು ಮಾತ್ರ ಆಯ್ದು ತಮ್ಮ ಸಂಶೋಧನೆಗೆ ಒಳಪಡಿಸುವುದು ಇಲ್ಲಿ ಮುಖ್ಯವಾಗಿರುತ್ತದೆ. ಸಂಶೋಧಕನು ಆಯ್ಕೆ ಮಾಡಿಕೊಂಡಿರುವ ವಿಷಯಕ್ಕೆ ಆಧಾರವಾಗಿ ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಆ ವಿಷಯದ ಮೇಲೆ ಬೆಳಕು ಚೆಲ್ಲುವಂತಹ ಅನೇಕ ಗ್ರಂಥಗಳು , ದಾಖಲೆಗಳು , ನಿಯತಕಾಲಿಕಗಳು , ವಿಶ್ವಕೋಶ ನಿಘಂಟುಗಳು ಗ್ರಂಥಾಲಯ ದಲ್ಲಿ ಹಾಗೂ ಅಂತರಜಾಲದಲ್ಲಿ ದೊರೆಯುತ್ತವೆ.

## 2.4 ಸಂಬಂಧಿತ ಸಾಹಿತ್ಯದ ಅವಲೋಕನದ ಮಹತ್ವ :

ಪ್ರತಿ ಸಂಶೋಧನೆಗೆ ಸಂಬಂಧಿತ ಸಾಹಿತ್ಯದ ಅವಲೋಕನವು ಮಾರ್ಗದರ್ಶಿಯಾಗಿ ಸಹಾಯ ಮಾಡುತ್ತದೆ. ಹೀಗಾಗಿ ಸಂಶೋಧನೆಯ ವಿವಿಧ ಹಂತಗಳಲ್ಲಿ ಸಂಬಂಧಿತ ಸಾಹಿತ್ಯದ ಅವಲೋಕನದ ಮಹತ್ವವನ್ನು ಈ ಕೆಳಗಿನಂತೆ ಕಾಣಬಹುದು.

1. ಸಂಶೋಧಕನಿಗೆ ದೊರಕಿರುವ ಸಮಯಾವಧಿಗೆ ಪೂರಕವಾಗಿ ತನ್ನ ಸಮಸ್ಯೆ ಕುರಿತು ಒಂದು ನಿರ್ದಿಷ್ಟ ಯೋಜನೆ ತಯಾರಿಸಲು ಹಾಗೂ ಉತ್ತಮವಾಗಿ ವ್ಯಾಖ್ಯಾನಿಸಲು ಸಹಾಯಕವಾಗುತ್ತದೆ.
2. ಸಂಶೋಧನಾಕಾರರು ಸಮಸ್ಯೆಯನ್ನು ಕುರಿತು ಏಕೆ , ಹೇಗೆ ಎಂಬುದನ್ನು ಕಂಡುಕೊಳ್ಳಲು ಸಹಾಯ ಮಾಡುತ್ತದೆ.
3. ಸಂಶೋಧಕನು ಸಂಬಂಧಿತ ಸಾಹಿತ್ಯದ ಅವಲೋಕನ ಮಾಡುವುದರಿಂದ ಹಿಂದಿನ ಸಂಶೋಧನೆಗಳಲ್ಲಿ ಯಾವ ಅಂಶಗಳನ್ನು ಕೈಬಿಟ್ಟಿದ್ದಾರೆ ಎಂದು ಗಮನಿಸಿ, ತನ್ನ ಸಂಶೋಧನೆಯಲ್ಲಿ ಉತ್ತಮ, ಸಾಧಾರಣ ಮತ್ತು ಸೃಜನಾತ್ಮಕವಾದ ವಿಚಾರಗಳನ್ನು ಹೊರಹೊಮ್ಮಿಸಲು ಸಹಾಯಕವಾಗಿದೆ.
4. ಇದು ಸಮಸ್ಯೆಯ ಕುರಿತು ವಿಚಾರಗಳನ್ನು , ಸಿದ್ಧಾಂತಗಳನ್ನು ಮತ್ತು ಪರಿಕಲ್ಪನೆಗಳನ್ನು ದೊರಕಿಸಿಕೊಡುತ್ತದೆ.
5. ಸಂಬಂಧಿತ ಸಾಹಿತ್ಯದ ಅವಲೋಕನವು ಸಂಶೋಧಕನು ತಾನು ಮಾಡುವ ಸಂಶೋಧನೆಯ ವಿಧಾನ , ವ್ಯಾಪ್ತಿ, ವಿಷಯ ಮತ್ತು ಬಳಸುವ ಹೊಸ ಕ್ರಮಗಳ ಕಡೆಗೆ ಒಳನೋಟ ಬಿಡಲು ಸಹಾಯಕವಾಗುತ್ತದೆ. ಹಾಗೂ ಇದು ಸಂಶೋಧನಾ ವಿಧಾನಗಳನ್ನು ಬಳಸಿಕೊಂಡು ಸಮಸ್ಯೆಗೆ ತಕ್ಕಂತೆ ಪರಿಹಾರವನ್ನು ಹುಡುಕಲು ಸಹಾಯ ಮಾಡುತ್ತದೆ.
6. ಇದು ಯಾವ ಸಂಖ್ಯಾಶಾಸ್ತ್ರದ ತಂತ್ರವನ್ನು ಬಳಸಿಕೊಂಡು ದತ್ತಾಂಶಗಳನ್ನು ಸಂಗ್ರಹಿಸಬೇಕು ಎಂಬುದನ್ನು ತಿಳಿಸುತ್ತದೆ.
7. ಸಂಶೋಧನಾ ತಂತ್ರಗಳ ತಯಾರಿಕೆ ಹಾಗೂ ಬಳಕೆ, ಕ್ಷೇತ್ರ ಕಾರ್ಯದ ಸಮಯದಲ್ಲಿ ವಹಿಸಬೇಕಾದ ಎಚ್ಚರಿಕೆ ಗಳು, ಅನುಸರಿಸಬೇಕಾದ ಕ್ರಮಗಳ ಬಗ್ಗೆ ಮಾರ್ಗದರ್ಶನ ಹಾಗೂ ಸೂಚನೆಗಳು ದೊರೆಯುತ್ತವೆ.
8. ಸಂಶೋಧಕನು ತನ್ನ ಸಂಶೋಧನಾ ಲೇಖನದಲ್ಲಿ ನಿಗದಿತ ಕ್ಷೇತ್ರದಲ್ಲಿ ಕೈಗೆತ್ತಿಕೊಳ್ಳಬಹುದಾದ ಸಂಶೋಧನೆಯ ಕುರಿತು ಸಲಹೆ , ಶಿಫಾರಸ್ಸು ನೀಡುವುದರಿಂದ ಮುಂದಿನ ಸಂಶೋಧನೆಗೆ ಸಹಾಯಕವಾಗುತ್ತದೆ.

## 2.5 ಹಿಂದಿನ ಸಂಶೋಧನೆಗಳ ಸ್ಥೂಲ ಪರಿಚಯ :

**1** ಕರ್ನಾಟಕ ಸರ್ಕಾರದ ಶಿಕ್ಷಣ ಇಲಾಖೆಯ ವೆಬ್‌ಸೈಟ್ (Department Of Public Intruction) ನಲ್ಲಿ ದೊರೆತ್ತಿರುವ ಮಾಹಿತಿಗಳು,

ಅ) **ಸರ್ವ ಶಿಕ್ಷಾ ಅಭಿಯಾನ ಮತ್ತು ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಾ ಅಭಿಯಾನ ಕರ್ನಾಟಕ** ವೆಬ್ ಪೇಜ್‌ನಲ್ಲಿ : ಶಿರೋನಾಮೆ : **"ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಾ ಅಭಿಯಾನ–ಆದರ್ಶ ವಿದ್ಯಾಲಯಗಳು "** – ಆದರ್ಶ ವಿದ್ಯಾಲಯಗಳ ಪ್ರಾರಂಭದ ಹಿನ್ನಲೆ , ಮಾದರಿ ಶಾಲೆಗಳ ದೃಷ್ಟಿಕೋನ , ಗುರಿ , ಉದ್ದೇಶ , ಆಯವ್ಯಯ , ಯೋಜನೆ , ಆದರ್ಶ ವಿದ್ಯಾಲಯಗಳ ವೈಶಿಷ್ಟ್ಯತೆಗಳು , ಅನುಕೂಲತೆಗಳು, ಬೋಧಕ ಮತ್ತು ಬೋಧಕೇತರ ಹುದ್ದೆಗಳ ಮಂಜೂರಾತಿ ವಿವರ , ಕಟ್ಟಡ ಕಾಮಗಾರಿಗಳ ವಿವರ , ಶಿಕ್ಷಕರ ಲಭ್ಯತೆ , ಶಿಕ್ಷಕರ ನಿರ್ವಹಣೆ , ಶಾಲೆಗಳ ನಿರ್ವಹಣೆ , ಅನುದಾನ ಬಿಡುಗಡೆ ವಿವರಗಳು , ಸಾಧನೆ , ಸವಲತ್ತುಗಳು ಇತ್ಯಾದಿ ಆದರ್ಶ ವಿದ್ಯಾಲಯಗಳ ಬಗ್ಗೆ ಮಾಹಿತಿ ದೊರಕುತ್ತದೆ.

ಆ) **ಸರ್ವ ಶಿಕ್ಷಾ ಅಭಿಯಾನ ಮತ್ತು ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಾ ಅಭಿಯಾನ ಕರ್ನಾಟಕ** ವೆಬ್ ಪೇಜ್‌ನಲ್ಲಿ : ಶಿರೋನಾಮೆ : **" VIDYA VAHINI – Adarsha Vidyalaya Application – List Of Adarsh Vidyalas " -** ತಾಲೂಕವಾರು ಆದರ್ಶ ವಿದ್ಯಾಲಯಗಳ ಮಾಹಿತಿ , ರೋಸ್ಟರ್ ಪ್ರಕಾರ ಶಿಕ್ಷಕರ ವಿವರ ಹಾಗೂ ಮಕ್ಕಳ ತರಗತಿವಾರು ದಾಖಲಾತಿ ವಿವರ
ದೊರಕುತ್ತದೆ.

**2** ಅಂತರ್ ಜಾಲದ Google App ನಲ್ಲಿ ದೊರೆತ್ತಿರುವ ಮಾಹಿತಿಗಳು,

ಅ) https://kannadamma.net ವೆಬ್ ಪೇಜ್‌ನಲ್ಲಿ ದಿನಾಂಕ : **27/ಮಾರ್ಚ/2012** ರಂದು ಪೋಸ್ಟವಾದ **Rajeev Topannavar** ಇವರ ಲೇಖನ : **" ಗ್ರಾಮೀಣ ಆಂಗ್ಲ ಮಾಧ್ಯಮ ಶಿಕ್ಷಣಕ್ಕೆ ಆದರ್ಶ ವಿದ್ಯಾಲಯ " –** ಲೇಖಕರು ಕರ್ನಾಟಕ ಸರ್ಕಾರವು 2010–11 ನೇ ಸಾಲಿನಲ್ಲಿ ಗ್ರಾಮೀಣ ವಿದ್ಯಾರ್ಥಿ–ವಿದ್ಯಾರ್ಥಿನೀಯರಿಗಾಗಿ 6 ರಿಂದ 10ನೇ ತರಗತಿವರೆಗೆ ಉಚಿತವಾಗಿ ಆಂಗ್ಲ ಮಾಧ್ಯಮ ದಲ್ಲಿ ಶಿಕ್ಷಣ ನೀಡುವ ಸಲುವಾಗಿ ಡಾ. ನಂಜುಂಡಪ್ಪ ವರದಿಯಂತೆ ಅತ್ಯಂತ ಹಿಂದುಳಿದ ತಾಲೂಕು ಗಳಲ್ಲಿ ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನದ 74 ಆದರ್ಶ ವಿದ್ಯಾಲಯಗಳನ್ನು ಪ್ರಾರಂಭಿಸ ಲಾಯಿತು ಎಂದು ತಿಳಿಸುತ್ತ ಆದರ್ಶ ವಿದ್ಯಾಲಯಗಳ ಗುರಿ, ಉದ್ದೇಶ, ಪರೀಕ್ಷೆ, ಮೌಲ್ಯಮಾಪನ, ಮೂಲಭೂತ ಸೌಲಭ್ಯಗಳು, ಮಕ್ಕಳ ದಾಖಲಾತಿ ಇತ್ಯಾದಿ ಮಾಹಿತಿಯನ್ನು ನೀಡುವರು.

ಆ) **" ಆದರ್ಶ ವಿದ್ಯಾಲಯ ಮಾದರಿ ಶಾಲೆ ಕರ್ನಾಟಕ " –** ಶಿರೋನಾಮೆಯಲ್ಲಿ ಪ್ರಕಟವಾದ ಲೇಖನವು ಆದರ್ಶ ವಿದ್ಯಾಲಯದ ಹಿನ್ನಲೆ, ದೂರದೃಷ್ಟಿ, ಗುರಿ, ಉದ್ದೇಶಗಳು, ಲಕ್ಷಣಗಳು, ಸಂಕ್ಷಿಪ್ತ ವಿವರ ಇತ್ಯಾದಿ ಆದರ್ಶ ವಿದ್ಯಾಲಯ ಕುರಿತು ಮಾಹಿತಿ ನೀಡುವದು.

3 **ಮಾನ್ಯ ಸಹನಿರ್ದೇಶಕರು, ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ – ಕರ್ನಾಟಕ ,** ರಾಜ್ಯ ಯೋಜನಾ ನಿರ್ದೇಶಕರ ಕಛೇರಿ, ಬೆಂಗಳೂರು ಇವರು **ದಿನಾಂಕ : 16–04–2010** ರಂದು ಹೊರಡಿಸಿದ ಜ್ಞಾಪನ ಪತ್ರದ ಸಂಖ್ಯೆ : **RMSA/Model Schools/1/2010-11** – ವಿಷಯ: **"ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನದಡಿಯಲ್ಲಿ ಮಾಡೆಲ್ ಶಾಲೆಗಳನ್ನು ಪ್ರಾರಂಭಿಸುವ ಬಗ್ಗೆ"** – ಈ ಮಾಡೆಲ್ ಶಾಲೆಗಳು Day School ಆಗಿರುವ ಪ್ರಯುಕ್ತ ವಿದ್ಯಾರ್ಥಿಗಳು ಪ್ರತಿದಿನ ಬಂದು ಹೋಗಲು ಅನುಕೂಲವಾಗುವಂತಹ ಸೂಕ್ತ ಸ್ಥಳವನ್ನು ಗುರುತಿಸುವದು, ತಾಲೂಕು ಕೇಂದ್ರ ಸ್ಥಾನದಿಂದ 3 ಕಿ.ಮೀ. ವ್ಯಾಪ್ತಿಯೊಳಗೆ ಹಾಗೂ ಸಾರಿಗೆ ವ್ಯವಸ್ಥೆ ಇರುವಂತಹ ಸ್ಥಳವನ್ನು ಗುರುತಿಸುವುದು, ತರಬೇತಿ ಹೊಂದಿದ ಪದವೀಧರ ಶಿಕ್ಷಕರ ನಿಯೋಜನೆ ಮಾಡುವುದು, ಕನಿಷ್ಟ 2 ಎಕರೆ ಗರಿಷ್ಟ 5 ಎಕರೆ ಜಾಗವನ್ನು ಗುರ್ತಿಸುವುದು ಇತ್ಯಾದಿಗಳನ್ನು ಕುರಿತು ರಾಜ್ಯದ ಉಪನಿರ್ದೇಶಕರು (ಆಡಳಿತ) ಇವರಿಗೆ ಆದೇಶಿಸಲಾಗಿರುವದು.

# ಅಧ್ಯಾಯ : 3 ಸಂಶೋಧನಾ ವಿನ್ಯಾಸ

## 3.1 ಪೀಠಿಕೆ :

ಯಾವುದೇ ಒಂದು ವಿಷಯದ ಸಂಶೋಧನೆಯಲ್ಲಿ ಬರುವ ಒಂದು ಮುಖ್ಯವಾದ ಹಂತವೆಂದರೆ ಅದು ಸಂಶೋಧನಾ ವಿನ್ಯಾಸ. ಸಂಶೋಧನೆಯ ಉದ್ದೇಶ ಪೂರೈಸಲು ಸಂಶೋಧಕನು ತನ್ನ ಸಂಶೋಧನಾ ಕಾರ್ಯವನ್ನು ಸಮಗ್ರವಾಗಿ ಅವಲೋಕಿಸಿ ತಯಾರಿಸಿದ ಯೋಜನೆಯನ್ನು ಸಂಶೋಧನಾ ಕಾರ್ಯಕ್ಕೆ ಸಂಬಂಧಿಸಿದಂತೆ ಬೇರೆ ಬೇರೆ ಹಂತಗಳಲ್ಲಿ ಸಂಶೋಧಕನು ಯಾವ ಯಾವ ಕಾರ್ಯವನ್ನು ಕೈಗೆತ್ತಿಕೊಳ್ಳುತ್ತಾನೆಂಬುದನ್ನು ಸೂಚಿಸುವುದೇ ಮುಖ್ಯ ಕಾರ್ಯವಾಗಿದೆ.

ಶೈಕ್ಷಣಿಕ ಸಂಶೋಧನೆಗಳ ಕ್ಷೇತ್ರವು ಅತ್ಯಂತ ವ್ಯಾಪಕವು ಮತ್ತು ವಿಶಾಲವು ಆಗಿದೆ. ಸಂಶೋಧನೆಯಲ್ಲಿ ಸೂಕ್ತವಾದ ಪದ್ಧತಿಯನ್ನು ಬಳಸುವುದರಿಂದ ಸಂಶೋಧನಾ ಕಾರ್ಯದಲ್ಲಿ ಆಗುವ ಕಾಲ ಹಾಗೂ ಹಣದ ವ್ಯಯವನ್ನು ತಪ್ಪಿಸಬಹುದು. ಅಲ್ಲದೇ ಸೂಕ್ತ ತಂತ್ರವನ್ನು ಬಳಸಲು ನೆರವಾಗುವುದು. ಈ ಸಂಶೋಧನೆಯ ಅಧ್ಯಯನದಲ್ಲಿ ದತ್ತಾಂಶ ಸಂಗ್ರಹಿಸಲು ಬಳಸಿದ ವಿಧಾನಗಳು , ಪ್ರಶ್ನಾವಳಿ ಮುಂತಾದ ವಿವರಗಳನ್ನು ಒದಗಿಸಲಾಗಿದೆ. ದತ್ತಾಂಶ ಸಂಗ್ರಹಣೆಗಾಗಿ ನಮೂನೆಯನ್ನು ಆಯ್ಕೆ ಮಾಡಿ ಅದರಿಂದ ಮಾಹಿತಿ ಸಂಗ್ರಹಿಸಿರುತ್ತಾರೆ.

## 3.2 ನಮೂನೆಯ ಆಯ್ಕೆ (ಪ್ರತಿಚಯನ) :

ಮಾದರಿ ಎಂದರೆ ದೊಡ್ಡ ವಸ್ತುವಿನ ಸಣ್ಣ ಪ್ರತಿರೂಪ ಎಂದರ್ಥ. ಸಂಶೋಧನಾ ಕ್ಷೇತ್ರವನ್ನು ಯಥೋಚಿತ್ತವಾಗಿ ಪ್ರತಿನಿಧಿಸುವ ಮಾದರಿಯನ್ನು ಸಂಶೋಧಕ ಆಯ್ಕೆ ಮಾಡುವುದರಿಂದ ತನ್ನ ಸಂಶೋಧನಾ ಕ್ಷೇತ್ರದ ಬಗ್ಗೆ ಸ್ಪಷ್ಟವಾದ ಒಂದು ಚಿತ್ರಣವನ್ನು ಪಡೆಯಬಹುದು.

**ಪ್ರಸ್ತುತ ಅಧ್ಯಯನಕ್ಕೆ ಮಾದರಿಯ ಆಯ್ಕೆ ಈ ಕೆಳಗಿನಂತಿರುವದು ;**

ಈ ಅಧ್ಯಯನದಲ್ಲಿ ಕಲಬುರಗಿ ಜಿಲ್ಲೆಯ 7 ತಾಲೂಕಗಳಾದ ಅಫಜಲಪೂರ, ಆಳಂದ, ಚಿಂಚೋಳಿ, ಚಿತ್ತಾಪೂರ, ಜೇವರ್ಗಿ, ಕಲಬುರಗಿ ದಕ್ಷಿಣ ವಲಯ ಹಾಗೂ ಸೇಡಂ ತಾಲೂಕುಗಳಲ್ಲಿರುವ ಆದರ್ಶ ವಿದ್ಯಾಲಯಗಳನ್ನು (7) ಆಯ್ಕೆ ಮಾಡಿಕೊಂಡು ಪ್ರತಿ ಆದರ್ಶ ವಿದ್ಯಾಲಯದ ಮುಖ್ಯ ಶಿಕ್ಷಕರು, 2 ಸಹ ಶಿಕ್ಷಕರು(ವಿಜ್ಞಾನ/ಗಣಿತ–1, ದೈಹಿಕ/ಕಲಾ–1), 2 ವಿದ್ಯಾರ್ಥಿಗಳು (ಗಂಡು–1, ಹೆಣ್ಣು–1), ಹಾಗೂ 2 ಪಾಲಕರು

ಇವರಿಂದ ಸಿದ್ಧ ಪ್ರಶ್ನೆಗಳಿಗೆ ಇಲ್ಲ, ಹೌದು, ಭಾಗಶ: ಎಂಬ ಪ್ರತಿಕ್ರಿಯೆಯನ್ನು ಪಡೆಯುವ ಮೂಲಕ ಹಾಗೂ ಮುಖ್ಯ ಶಿಕ್ಷಕರು ಮತ್ತು 2 ಸಹ ಶಿಕ್ಷಕರಿಗೆ ಸರ್ವೇ ಮಾದರಿಯ ಪ್ರಶ್ನಾವಳಿ ನೀಡಿ ಲಿಖಿತ ಅಭಿಪ್ರಾಯವನ್ನು ಪಡೆಯುವ ಮೂಲಕ ವಿಶ್ಲೇಷಿಸಲಾಗಿದೆ.

**ಕಲಬುರಗಿ ಜಿಲ್ಲೆಯ 8 ತಾಲೂಕುಗಳ ಒಟ್ಟು ಆದರ್ಶ ವಿದ್ಯಾಲಯಗಳು : 7**

**ಸಂಶೋಧನೆಗೆ ಆಯ್ಕೆ ಮಾಡಿಕೊಂಡ ಆದರ್ಶ ವಿದ್ಯಾಲಯಗಳು : 7**

## 3.3 ದತ್ತಾಂಶ ಸಂಗ್ರಹಣೆಗೆ ಬಳಸಿದ ಸಾಧನಗಳು :

### ಅ) ಮುದ್ರಿತ ಚೆಕ್‌ಲಿಸ್ಟ್ ಮಾದರಿ ಪ್ರಶ್ನಾವಳಿ :

ಅಧ್ಯಯನಕ್ಕಾಗಿ ನಾನು, ಅಧ್ಯಯನಕ್ಕೆ ಅರ್ಹವಾದ ವಿವಿಧ ಅಂಶಗಳನ್ನು ಒಳಗೊಂಡ ಇಲ್ಲ, ಹೌದು, ಭಾಗಶ: ಎಂಬ ಉತ್ತರಗಳನ್ನು ನಿರೀಕ್ಷಿಸುವ ಅರ್ಥಪೂರ್ಣ ಪ್ರಶ್ನಾವಳಿಯನ್ನು ಬಳಸಿಕೊಂಡಿರುತ್ತೇನೆ. ಅಧ್ಯಯನ ವಿಷಯಕ್ಕೆ ಸಂಬಂಧಿಸಿದಂತೆ ಪ್ರಶ್ನೆಗಳನ್ನು ರೂಪಿಸಿ ಅವುಗಳನ್ನು ಈ ಕೆಳಗಿನಂತೆ 4 ಗುಂಪುಗಳಾಗಿ ವಿಂಗಡಿಸಿ, ಮುದ್ರಿತ ಪ್ರತಿಗಳನ್ನು ನೀಡಲಾಗಿದೆ. ಎಂದರೆ,

1. ಮುಖ್ಯ ಶಿಕ್ಷಕರಿಗೆ ಪ್ರಶ್ನಾವಳಿ
2. ಸಹ ಶಿಕ್ಷಕರಿಗೆ ಪ್ರಶ್ನಾವಳಿ
3. ವಿದ್ಯಾರ್ಥಿಗಳಿಗೆ ಪ್ರಶ್ನಾವಳಿ
4. ಪಾಲಕರಿಗೆ ಪ್ರಶ್ನಾವಳಿ

**ದತ್ತಾಂಶ ನಮೂನೆ :**

**–: ಮುಖ್ಯ ಶಿಕ್ಷಕರಿಗೆ ಪ್ರಶ್ನೆಗಳು :–**

| ಕ್ರ. ಸಂ | ಪ್ರಶ್ನೆಗಳು | ಇಲ್ಲ | ಹೌದು | ಭಾಗಶ: |
|---|---|---|---|---|
| 1 | ನಿಮ್ಮ ಆದರ್ಶ ವಿದ್ಯಾಲಯಕ್ಕೆ ಸ್ವಂತ ಹಾಗೂ ಪೂರ್ಣ ಪ್ರಮಾಣದ ಕಟ್ಟಡ ಇದೆಯೇ ? | | | |
| 2 | ನೀರಿನ ಸ್ವಂತ ಮೂಲ ಇದೆಯೇ ? | | | |
| 3 | ಮಕ್ಕಳ ಸಂಖ್ಯೆಗೆ ಅನುಗುಣವಾಗಿ ಶೌಚಾಲಯ ಇದೆಯೇ ? | | | |
| 4 | ಕುರ್ಚಿ, ಟೇಬಲ, ಅಲಮಾರಾ ಇತ್ಯಾದಿ ಪೀಠೋಪಕರಣಗಳು ಅವಶ್ಯಕತೆಗೆ ಅನುಗುಣವಾಗಿ ಇವೆಯೇ ? | | | |
| 5 | ಅವಶ್ಯಕ ಪ್ರಯೋಗಾಲಯ ಸಾಮಗ್ರಿಗಳು, ಸಲಕರಣೆಗಳು ಹಾಗೂ ರಾಸಾಯನಿಕಗಳು ಲಭ್ಯ ಇವೆಯೇ ? | | | |
| 6 | ಕಲಿಕೋಪಕರಣಗಳನ್ನು ಸಮರ್ಪಕವಾಗಿ ಬಳಕೆ ಮಾಡಿಕೊಳ್ಳಲಾಗುತ್ತಿದೆಯೇ ? | | | |
| 7 | ಸುಸಜ್ಜಿತವಾದ ಒಳಾಂಗಣ ಹಾಗೂ ಹೊರಾಂಗಣ ಕ್ರೀಡಾ ಸೌಕರ್ಯ ಇದೆಯೇ ? | | | |
| 8 | ಆಂಗ್ಲ ಮಾಧ್ಯಮದಲ್ಲಿ ಬೋಧಿಸುವ ಶಿಕ್ಷಕರ ನೇಮಕಾತಿ ಆಗಿದೆಯೇ ? | | | |
| 9 | ರೋಸ್ಟರ ಪ್ರಕಾರ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿಗಳ ನೇಮಕಾತಿ ಆಗಿದೆಯೇ ? | | | |
| 10 | ಗ್ರಾಮೀಣ ಪ್ರತಿಭಾವಂತ ವಿದ್ಯಾರ್ಥಿಗಳಲ್ಲದೆ ಇತರ ಭಾಗದ ವಿದ್ಯಾರ್ಥಿಗಳಿಗೂ ದಾಖಲಾತಿ ನೀಡಲಾಗಿದೆಯೇ ? | | | |
| 11 | ನೀಡಿರುವ ಅನುದಾನವನ್ನು ಸಮರ್ಪಕವಾಗಿ ಬಳಸಲು ಎಸ್.ಡಿ.ಎಮ್.ಸಿ ಸಹಕರಿಸುವದೇ ? | | | |
| 12 | ವೃತ್ತಿ ಶಿಕ್ಷಣ ಸಾಮಗ್ರಿಗಳು ಪೂರೈಕೆ ಆಗಿವೆಯೇ ? | | | |
| 13 | ವಿಷಯಾಧಾರಿತ ಲ್ಯಾಬ್‌ಗಳ ರಚನೆ ಮಾಡಲಾಗಿದೆಯೇ ? | | | |
| 14 | ಪ್ರತಿ ತರಗತಿಗೆ 80 ರಂತೆ ಗರಿಷ್ಟ 400 ಮಕ್ಕಳ ದಾಖಲಾತಿ ಆಗಿರುವದೇ ? | | | |
| 15 | ಎಸ್.ಎಸ್.ಎಲ್.ಸಿ ಪರೀಕ್ಷೆಯ ಫಲಿತಾಂಶದಲ್ಲಿ ಪ್ರಗತಿ ಆಗಿರುತ್ತದೆಯೇ ? | | | |

ಸಹಿ ಮತ್ತು ಶೀಲು :

ಹೆಸರು :

ಫೋನ ನಂಬರ್ :

ಇ ಮೇಲ್ ವಿಳಾಸ :

## –: ಶಿಕ್ಷಕರಿಗೆ ಪ್ರಶ್ನೆಗಳು :–

| ಕ್ರ. ಸಂ | ಪ್ರಶ್ನೆಗಳು | ಇಲ್ಲ | ಹೌದು | ಭಾಗಶ: |
|---|---|---|---|---|
| 1 | ನೀರಿನ ವ್ಯವಸ್ಥೆ ಇದೆಯೇ ? | | | |
| 2 | ಹೆಣ್ಣು ಮತ್ತು ಗಂಡು ಮಕ್ಕಳಿಗೆ ಪ್ರತ್ಯೇಕ ಶೌಚಾಲಯ ಇದೆಯೇ? | | | |
| 3 | ಸಾಕಷ್ಟು ಗಿಡಮರಗಳನ್ನು ಹಚ್ಚಿ ಬೆಳೆಸಿ ಶಾಲಾ ಪರಿಸರ ಹಸಿರಾಗಿರುವದೇ ? | | | |
| 4 | ವಿಜ್ಞಾನ ಲ್ಯಾಬ್‌ನಲ್ಲಿನ ಸಲಕರಣೆಗಳು ಬಳಕೆಗೆ ಯೋಗ್ಯ ಆಗಿವೆಯೇ ? | | | |
| 5 | ವಿಷಯಾಧಾರಿತ ಕಲಿಕೋಪಕರಣಗಳು ಸಾಕಷ್ಟು ಸಂಖ್ಯೆಯಲ್ಲಿ ಇವೆಯೇ ? | | | |
| 6 | ದೈಹಿಕ ಶಿಕ್ಷಣ ಸಾಮಗ್ರಿಗಳು/ಕ್ರೀಡಾ ಸಾಮಗ್ರಿಗಳು ಸಾಕಷ್ಟು ಸಂಖ್ಯೆಯಲ್ಲಿ ಇವೆಯೇ ? | | | |
| 7 | ಆಂಗ್ಲ ಮಾಧ್ಯಮ ಇರದ ಶಿಕ್ಷಕರಿಗೆ ಆಂಗ್ಲ (ಇಂಗ್ಲಿಷ) ತರಬೇತಿ ನೀಡಲಾಗಿದೆಯೇ ? | | | |
| 8 | ಗ್ರಾಮೀಣ ಪ್ರತಿಭಾವಂತ ವಿದ್ಯಾರ್ಥಿಗಳಲ್ಲದೆ ನಗರ ವಿದ್ಯಾರ್ಥಿಗಳಿಗೂ ದಾಖಲಾತಿ ನೀಡಲಾಗಿದೆಯೇ ? | | | |
| 9 | ವಿದ್ಯಾರ್ಥಿಗಳಿಗೆ ಸನಿವಾಸ ಇರಲಾರದ್ದು ಅವರ ಶಿಕ್ಷಣದ ಮೇಲೆ ಪರಿಣಾಮ ಬೀರುತ್ತಿದೆಯೇ ? | | | |
| 10 | ಕೊಠಡಿಗಳಲ್ಲಿಯ ಫ್ಯಾನ & ವಿದ್ಯುತ್ ದ್ವೀಪಗಳು ಸರಿಯಾಗಿ ಕಾರ್ಯನಿರ್ವಹಿಸುತ್ತವೆಯೇ ? | | | |
| 11 | ವೃತಿ ಶಿಕ್ಷಣದ ಸಾಮಗ್ರಿಗಳು ಅವಶ್ಯಕತೆಯಷ್ಟು ಇವೆಯೇ ? | | | |
| 12 | ಗ್ರಂಥಾಲಯದ ವಾತಾವರಣ ವಿದ್ಯಾರ್ಥಿಗಳಲ್ಲಿ ಅನ್ವೇಷಣೆಗೆ ಸಹಾಯಕವಾಗುವಂತೆ ಇದೆಯೇ ? | | | |
| 13 | ಪಠ್ಯ ಬೋಧನೆಯಲ್ಲಿ ಕಂಪ್ಯೂಟರ್ ತಂತ್ರಜ್ಞಾನವನ್ನು ಬಳಸುತ್ತಿರಾ ? | | | |
| 14 | ಪ್ರೋಜೆಕ್ಟರ್, ಪ್ರಿಂಟರ್, ಇಂಟರ್‌ನೆಟ್ ಕನೆಕ್ಷನ್ ಇದೆಯೇ ? | | | |
| 15 | ವಿಷಯಾಧಾರಿತ ಲ್ಯಾಬ್ ಗಳು ಕಾರ್ಯನಿರ್ವಹಿಸುತ್ತಿವೆಯೇ ? | | | |

ಶಿಕ್ಷಕರ ಸಹಿ :

ಹೆಸರು :

ಶಾಲೆಯ ಹೆಸರು :

ಫೋನ ನಂಬರ್ :

## –: ವಿದ್ಯಾಥಿಗಳಿಗೆ ಪ್ರಶ್ನೆಗಳು :–

| ಕ್ರ. ಸಂ | ಪ್ರಶ್ನೆಗಳು | ಇಲ್ಲ | ಹೌದು | ಭಾಗಶ: |
|---|---|---|---|---|
| 1 | ನಿಮ್ಮ ಆದರ್ಶ ವಿದ್ಯಾಲಯಕ್ಕೆ ಕಂಪೌಂಡ ಇದೆಯೇ ? | | | |
| 2 | ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಇದೆಯೇ ? | | | |
| 3 | ಶಾಲೆಯ ಶೌಚಾಲಯವನ್ನು ಬಳಸುತ್ತಿದ್ದಿರಾ ? | | | |
| 4 | ವಿಜ್ಞಾನ ಲ್ಯಾಬ್‌ನ್ನು ಕಲಿಕೆಗಾಗಿ ಬಳಸಲಾಗುತ್ತಿದೆಯಾ ? | | | |
| 5 | ಮ್ಯಾಪ್, ಗ್ಲೋಬ್, ಚಾರ್ಟ್ಸ್ ಇತ್ಯಾದಿ ಸಮಾಜ ವಿಜ್ಞಾನ ವಿಷಯಕ್ಕೆ ಸಂಬಂಧಿಸಿದ ಕಲಿಕೋಪಕರಣಗಳು ಇವೆಯೇ ? | | | |
| 6 | ಕ್ರೀಡೆ ಮತ್ತು ಒಳಾಂಗಣ(ಸಹಪಠ್ಯ) ಚಟುವಟಿಕೆಗಳು ನಡೆಯುತ್ತವೆಯೇ ? | | | |
| 7 | ವಿಷಯಾಧಾರಿತ ಶಿಕ್ಷಕರು ಇದ್ದಾರೆಯೇ ? | | | |
| 8 | ಶಿಕ್ಷಕರು ಆಂಗ್ಲ ಮಾಧ್ಯಮದಲ್ಲಿ ಬೋಧಿಸುವರೇ ? | | | |
| 9 | ಉಚಿತ ಪಠ್ಯಪುಸ್ತಕ, ಸಮವಸ್ತ್ರ, ಮಧ್ಯಾಹ್ನದ ಬಿಸಿಯೂಟವನ್ನು ಪೂರೈಸಲಾಗುತ್ತಿದೆಯೇ ? | | | |
| 10 | ಸರಿಯಾದ ಸಮಯಕ್ಕೆ ಶಾಲೆಗೆ ಪ್ರತಿದಿನ ಬಂದು ಹೋಗಲು ಸಾರಿಗೆ ಸೌಲಭ್ಯ ಇದೆಯೇ ? | | | |
| 11 | ವೃತ್ತಿ ಶಿಕ್ಷಣದ ಸಾಮಗ್ರಿಗಳ ಬಳಕೆ ಆಗುತ್ತಿದೆಯೇ ? | | | |
| 12 | ಗ್ರಂಥಾಲಯದಲ್ಲಿಯ ಪುಸ್ತಕಗಳನ್ನು ಬಳಸಲು/ಓದಲು ಕೊಡಲಾಗುತ್ತಿದೆಯೇ ? | | | |
| 13 | ಮಕ್ಕಳಿಗೆ, ಶಿಕ್ಷಕರಿಗೆ ಮತ್ತು ಸಿಬ್ಬಂದಿಗೆ ಎಲ್ಲರಿಗೂ ಆಸನ ವ್ಯವಸ್ಥೆ ಇದೆಯೇ ? | | | |
| 14 | ಶಿಕ್ಷಕರು ತಮ್ಮ ವಿಷಯ ಬೋಧನೆಯಲ್ಲಿ ಕಂಪ್ಯೂಟರ್ ತಂತ್ರಜ್ಞಾನವನ್ನು ಬಳಸುವರೇ ? | | | |
| 15 | ವಿದ್ಯುತ್ ವ್ಯವಸ್ಥೆ ಇದೆಯೇ ? | | | |

ವಿದ್ಯಾರ್ಥಿಯ ಸಹಿ :

ಹೆಸರು :

ತರಗತಿ :

ಶಾಲೆಯ ಹೆಸರು :

**–: ಪಾಲಕರಿಗೆ ಪ್ರಶ್ನೆಗಳು :–**

| ಕ್ರ. ಸಂ | ಪ್ರಶ್ನೆಗಳು | ಇಲ್ಲ | ಹೌದು | ಭಾಗಶ: |
|---|---|---|---|---|
| 1 | ಸರ್ಕಾರದ ಯೋಜನೆಯಂತೆ 32 ಸುಸಜ್ಜಿತವಾದ ಕೊಠಡಿಗಳು ಇವೆಯೇ ? | | | |
| 2 | ನೀರಿನ ಸ್ವಂತ ಮೂಲ ಇದೆಯೇ ? | | | |
| 3 | ಹೆಣ್ಣು ಮತ್ತು ಗಂಡು ಮಕ್ಕಳಿಗೆ ಪ್ರತ್ಯೇಕ ಶೌಚಾಲಯ ಇದೆಯೇ? | | | |
| 4 | ಪೀಠೋಪಕರಣಗಳು ಬಳಸಲು ಯೋಗ್ಯವಾಗಿವೆಯೇ ? | | | |
| 5 | ವಿಷಯಾಧಾರಿತ ಲ್ಯಾಬ್‌ಗಳಲ್ಲಿ ಅವಶ್ಯಕ ಸಾಮಗ್ರಿಗಳು, ಸಲಕರಣೆಗಳು ಇತ್ಯಾದಿ ಅವಶ್ಯಕತೆಯಷ್ಟು ಇವೆಯೇ ? | | | |
| 6 | ಒಳಾಂಗಣ(ಸಹಪಠ್ಯ) ಹಾಗೂ ಹೊರಾಂಗಣ ಕ್ರೀಡಾ ಆಯೋಜನೆಗೆ ಸೌಕರ್ಯಗಳಿವೆಯೇ ? | | | |
| 7 | ಶಿಕ್ಷಕರು ಸಮರ್ಪಣಾ ಮನೋಭಾವದಿಂದ ಕೆಲಸ ಮಾಡುವರೇ ? | | | |
| 8 | ವಿದ್ಯಾರ್ಥಿಗಳಿಗೆ ಉಚಿತ ಪಠ್ಯಪುಸ್ತಕ, ಸಮವಸ್ತ್ರ, ಮಧ್ಯಾಹ್ನದ ಬಿಸಿಯೂಟವನ್ನು ಪೂರೈಸಲಾಗುತ್ತಿದೆಯೇ ? | | | |
| 9 | ವಿದ್ಯಾರ್ಥಿ ಮತ್ತು ಶಿಕ್ಷಕ, ಸಿಬ್ಬಂದಿ ಬರಲು ಸಾರಿಗೆ ವ್ಯವಸ್ಥೆ ಇದೆಯೇ? | | | |
| 10 | ನೀಡಿರುವ ಅನುದಾನವನ್ನು ಸಮರ್ಪಕವಾಗಿ ಬಳಸಲಾಗುತ್ತಿದೆಯೇ ? | | | |
| 11 | ಸುಸಜ್ಜಿತವಾದ ಕಂಪ್ಯೂಟರ್ ಲ್ಯಾಬ್ ಇದೆಯೇ ? | | | |
| 12 | ವೃತ್ತಿ ಶಿಕ್ಷಣ ಸಾಮಗ್ರಿಗಳನ್ನು ಸಮರ್ಪಕವಾಗಿ ಬಳಸಲಾಗುತ್ತಿದೆಯೇ? | | | |
| 13 | ಮೂಲಭೂತ ಸೌಕರ್ಯಗಳು ಉತ್ತಮವಾಗಿವೆಯೇ ? | | | |
| 14 | ವಿದ್ಯಾರ್ಥಿಗಳ ಆಯ್ಕೆಯಲ್ಲಿ ನಿಮ್ಮ ತಾಲೂಕಿನ ಮಕ್ಕಳಿಗೆ ಪ್ರಥಮ ಆದ್ಯತೆ ನೀಡಲಾಗಿದೆಯೇ ? | | | |
| 15 | ಆದರ್ಶ ವಿದ್ಯಾಲಯ ತಾಲೂಕು ಕೇಂದ್ರದಲ್ಲಿ ಅಥವಾ ತಾಲೂಕು ಕೇಂದ್ರದಿಂದ 5 ಕಿ.ಮೀ. ವ್ಯಾಪ್ತಿಯೊಳಗಿದೆಯೇ ? | | | |

ಸಹಿ ಮತ್ತು ಹೆಸರು :

ವಿಳಾಸ :

ಫೋನ ನಂಬರ್ :

ಸಹಾಯಕರ ಹೆಸರು & ವಿಳಾಸ :

**ಆ) ಲಿಖಿತ ಉತ್ತರ ಬಯಸುವ ಸರ್ವೇ ಮಾದರಿ ಪ್ರಶ್ನಾವಳಿ :**

ಅಧ್ಯಯನ ವಿಷಯಕ್ಕೆ ಸಂಬಂಧಿಸಿದಂತೆ ಲಿಖಿತ ಉತ್ತರಗಳನ್ನು ಬಯಸುವ ಸರ್ವೇ ಮಾದರಿ ಪ್ರಶ್ನೆಗಳನ್ನು ರೂಪಿಸಿ ಅವುಗಳನ್ನು ಈ ಕೆಳಗಿನಂತೆ 2 ಗುಂಪುಗಳಾಗಿ ವಿಂಗಡಿಸಿ, ಮುದ್ರಿತ ಪ್ರತಿಗಳನ್ನು ನೀಡಲಾಗಿದೆ. ಎಂದರೆ,

1. ಮುಖ್ಯ ಶಿಕ್ಷಕರಿಗೆ ಪ್ರಶ್ನಾವಳಿ
2. ಸಹ ಶಿಕ್ಷಕರಿಗೆ ಪ್ರಶ್ನಾವಳಿ

**ಇ) ವಿಡೀಯೋ ರೀಕಾರ್ಡಿಂಗ ಮಾಡಿದ ಸಿಡಿ.**

# ದತ್ತಾಂಶ ನಮೂನೆ :

## –: ಮುಖ್ಯ ಶಿಕ್ಷಕರ ಪ್ರಶ್ನೆಗಳು :–

**ಕರ್ನಾಟಕ ಸರಕಾರ**
**ಸಾರ್ವಜನಿಕ ಶಿಕ್ಷಣ ಇಲಾಖೆ, ಕಲಬುರಗಿ**

**ಮುಖ್ಯ ಶಿಕ್ಷಕರ ಹೆಸರು: – – – – – – – – – – –** **ಫೋನ ಸಂಖ್ಯೆ:– – – – – – – – –**

**ಶಾಲೆಯ ಹೆಸರು:– – – – – – – – – – – – – –** **ಡೈಸ್ ಸಂಖ್ಯೆ:– – – – – – – – –**

**ಸೇವೆಗೆ ಸೇರಿದ ದಿನಾಂಕ:– – – – – – – – – – –** **ಈ ಶಾಲೆಗೆ ಬಂದ ದಿನಾಂಕ:– – – – – – –**

**ನೇಮಕಾತಿಯಾದ ವಿಷಯ:– – – – – – – – – – –** **ಬೋಧಿಸುವ ವಿಷಯ :– – – – – – – –**

**ವಯಸ್ಸು (ವರ್ಷಗಳಲ್ಲಿ): – – – – – – – – – – –**

**ಆದರ್ಶ ಶಾಲೆಗಳ ವಸ್ತುಸ್ಥಿತಿ ತಿಳಿದುಕೊಳ್ಳಲು ಪ್ರಶ್ನೆಗಳನ್ನು ನೀಡಲಾಗಿದೆ. ಅವುಗಳಿಗೆ ನಿಮ್ಮ ಅಭಿಪ್ರಾಯ ನೀಡುವ ಮೂಲಕ ಉತ್ತರಿಸಿ. [ ಅಭಿಪ್ರಾಯ = ಅಭಿ]**

1. ಆದರ್ಶ ಶಾಲೆಗಳನ್ನು ಯಾವ ಉದ್ದೇಶಕ್ಕಾಗಿ ಆರಂಭಿಸಲಾಗಿದೆಯೋ ಆ ಉದ್ದೇಶಗಳು ಎಷ್ಟರ ಮಟ್ಟಿಗೆ ಈಡೇರಿವೆ?

**ಅಭಿ :**

2. ಮೂಲಭೂತ ಸೌಕರ್ಯಗಳು ಪೂರೈಕೆ ಆಗಿವೆಯೇ ?

**ಅಭಿ :**

3. ಅವುಗಳನ್ನು ಹೇಗೆ ಬಳಸಿಕೊಳ್ಳಲಾಗುತ್ತಿದೆ ?

**ಅಭಿ :**

4. 2014–15 ರಿಂದ 2018–19 ರವರೆಗೆ ಎಸ್.ಎಸ್.ಎಲ್.ಸಿ ಪರೀಕ್ಷೆಯ ಫಲಿತಾಂಶದಲ್ಲಿ ಪ್ರಗತಿಯಾಗಿದೆಯಾ ? ಫಲಿತಾಂಶದೊಂದಿಗೆ ತಿಳಿಸಿ.

**ಅಭಿ :**

| ವರ್ಷ | ಪರೀಕ್ಷೆಗೆ ಕುಳಿತವರು | | | ಪರೀಕ್ಷೆ ಪಾಸಾದವರು | | | ಪ್ರತಿಶತ ಫಲಿತಾಂಶ |
|---|---|---|---|---|---|---|---|
| | ಗಂಡು | ಹೆಣ್ಣು | ಒಟ್ಟು | ಗಂಡು | ಹೆಣ್ಣು | ಒಟ್ಟು | |
| 2014–15 | | | | | | | |
| 2015–16 | | | | | | | |
| 2016–17 | | | | | | | |
| 2017–18 | | | | | | | |
| 2018–19 | | | | | | | |

ಮುಖ್ಯ ಶಿಕ್ಷಕರ ಸಹಿ ಮತ್ತು ಶೀಲ

## –: ಶಿಕ್ಷಕರ ಪ್ರಶ್ನೆಗಳು :–

**ಕರ್ನಾಟಕ ಸರಕಾರ**
**ಸಾರ್ವಜನಿಕ ಶಿಕ್ಷಣ ಇಲಾಖೆ, ಕಲಬುರಗಿ**

**ಶಿಕ್ಷಕರ ಹೆಸರು: – – – – – – – – – – –** **ಫೋನ ಸಂಖ್ಯೆ:– – – – – – – – – –**

**ಶಾಲೆಯ ಹೆಸರು:– – – – – – – – – – – – – –** **ಡೈಸ್ ಸಂಖ್ಯೆ:– – – – – – – – –**

**ಸೇವೆಗೆ ಸೇರಿದ ದಿನಾಂಕ:– – – – – – – – – – –** **ಈ ಶಾಲೆಗೆ ಬಂದ ದಿನಾಂಕ:– – – – – – –**

**ನೇಮಕಾತಿಯಾದ ವಿಷಯ:– – – – – – – – – – –** **ಬೋಧಿಸುವ ವಿಷಯ :– – – – – – – –**

**ವಯಸ್ಸು (ವರ್ಷಗಳಲ್ಲಿ): – – – – – – – – – – –**

**ಆದರ್ಶ ಶಾಲೆಗಳ ವಸ್ತುಸ್ಥಿತಿ ತಿಳಿದುಕೊಳ್ಳಲು ಪ್ರಶ್ನೆಗಳನ್ನು ನೀಡಲಾಗಿದೆ. ಅವುಗಳಿಗೆ ನಿಮ್ಮ ಅಭಿಪ್ರಾಯ ನೀಡುವ ಮೂಲಕ ಉತ್ತರಿಸಿ. [ ಅಭಿಪ್ರಾಯ = ಅಭಿ]**

| | |
|---|---|
| 1.<br>**ಅಭಿ :** | ವಿಷಯವಾರು ಲ್ಯಾಬ್‌ಗಳ ರಚನೆ ಮಾಡಲಾಗಿದೆಯೇ ? |
| 2.<br>**ಅಭಿ :** | ಅವುಗಳನ್ನು ಹೇಗೆ ಅರ್ಥಪೂರ್ಣವಾಗಿ ಬಳಸಿಕೊಳ್ಳಲಾಗುತ್ತಿದೆ ? |
| 3.<br>**ಅಭಿ :** | ಎಷ್ಟು ಪ್ರಕಾರದ ವೃತಿ ಶಿಕ್ಷಣ ನೀಡಲಾಗುತ್ತಿದೆ ? |
| 4.<br>**ಅಭಿ :** | ಅವುಗಳಿಗೆ ಸಂಬಂಧಿಸಿದ ಸಾಮಗ್ರಿಗಳ ಪೂರೈಕೆ ಎಷ್ಟರ ಮಟ್ಟಿಗೆಯಾಗಿದ್ದು ಅವುಗಳನ್ನು ಬಳಸಲಾಗುತ್ತಿದೆಯೇ ? |
| 5.<br>**ಅಭಿ :** | ಮೂಲಭೂತ ಸೌಕರ್ಯಗಳು ಪೂರೈಕೆ ಆಗಿವೆಯೇ ? |
| 6.<br>**ಅಭಿ :** | ಅವುಗಳನ್ನು ಹೇಗೆ ಬಳಸಿಕೊಳ್ಳಲಾಗುತ್ತಿದೆ ? |

ಶಿಕ್ಷಕರ ಸಹಿ ಮತ್ತು ಹೆಸರು

### 3.4 ದತ್ತಾಂಶ ಸಂಗ್ರಹಣೆಯ ವಿಧಾನ :

ಪ್ರಸ್ತುತ ಅಧ್ಯಯನಕ್ಕೆ ಇಲ್ಲ, ಹೌದು, ಭಾಗಶ: ಉತ್ತರವನ್ನು ಬಯಸುವ ಚೆಕ್‌ಲಿಸ್ಟ್ ವಿಧಾನವನ್ನು ಹಾಗೂ ಲಿಖಿತ ಉತ್ತರ ಬಯಸುವ ಸರ್ವೇ ಮಾದರಿ ವಿಧಾನವನ್ನು ಬಳಸಿಕೊಳ್ಳಲಾಗಿದೆ.

ಇಲ್ಲಿ ಆದರ್ಶ ವಿದ್ಯಾಲಯಗಳ ವಸ್ತುಸ್ಥಿತಿಯನ್ನು ಗಮನದಲ್ಲಿರಿಸಿಕೊಂಡು ಇಲ್ಲ, ಹೌದು, ಭಾಗಶ: ಎಂಬ ಉತ್ತರಗಳನ್ನು ಅಪೇಕ್ಷಿಸುವ ಪ್ರಶ್ನಾವಳಿಯನ್ನು ಸಿದ್ಧಪಡಿಸಿಕೊಂಡು ಹಾಗೂ ಲಿಖಿತ ಉತ್ತರಗಳನ್ನು ಅಪೇಕ್ಷಿಸುವ ಪ್ರಶ್ನಾವಳಿಯನ್ನು ಸಿದ್ಧಪಡಿಸಿಕೊಂಡು ಕಲಬುರಗಿ ಜಿಲ್ಲೆಯ ಅಫಜಲಪೂರ, ಆಳಂದ, ಚಿಂಚೋಳಿ, ಚಿತ್ತಾಪೂರ, ಜೇವರ್ಗಿ, ಕಲಬುರಗಿ ದಕ್ಷಿಣ ವಲಯ ಹಾಗೂ ಸೇಡಂ (7) ತಾಲೂಕುಗಳಲ್ಲಿರುವ 7 ಆದರ್ಶ ವಿದ್ಯಾಲಯಗಳಿಗೆ ನಾನು ಸ್ವತ: ಭೇಟಿ ನೀಡಿ ಮುಖ್ಯ ಶಿಕ್ಷಕ, 2 ಸಹ ಶಿಕ್ಷಕರು(ವಿಜ್ಞಾನ/ಗಣಿತ–1, ದೈಹಿಕ/ಕಲಾ–1), 2 ವಿದ್ಯಾರ್ಥಿಗಳು(ಗಂಡು–1, ಹೆಣ್ಣು–1), 2 ಪಾಲಕರುಗಳನ್ನು ಭೇಟಿಯಾಗಿ ಮುದ್ರಿತ ಪ್ರಶ್ನಾವಳಿಯನ್ನು ನೀಡಲಾಯಿತು ಹಾಗೂ ಅದರಲ್ಲಿ ಟಿಕ್ ಹಾಕುವುದರ ಮೂಲಕ ಅವರಿಂದ ಪ್ರತಿಕ್ರಿಯೆಯನ್ನು ಪಡೆಯಲಾಯಿತು.

ಜೊತೆಗೆ ಆದರ್ಶ ವಿದ್ಯಾಲಯಗಳ ಇಂದಿನ ವಸ್ತುಸ್ಥಿತಿಯ ಬಗ್ಗೆ ಮುಕ್ತ ಅಭಿಪ್ರಾಯವನ್ನು ಪಡೆಯಲು ಮುಖ್ಯ ಶಿಕ್ಷಕರು ಹಾಗೂ 2 ಸಹ ಶಿಕ್ಷಕರಿಗೆ(ವಿಜ್ಞಾನ/ಗಣಿತ–1, ದೈಹಿಕ/ ಕಲಾ–1) ಲಿಖಿತ ಉತ್ತರವನ್ನು ಬಯಸುವ ಪ್ರಶ್ನಾವಳಿಯನ್ನು ನೀಡಲಾಯಿತು ಹಾಗೂ ಅವರಿಂದ ಲಿಖಿತ ರೂಪದಲ್ಲಿ ಅವರ ಅಭಿಪ್ರಾಯವನ್ನು ಪಡೆಯಲಾಯಿತು.

ಸ್ವತ: ಆದರ್ಶ ವಿದ್ಯಾಲಯಗಳಿಗೆ ಭೇಟಿ ನೀಡಿ ಪ್ರತಿ ಆದರ್ಶ ವಿದ್ಯಾಲಯಗಳ ಇಂದಿನ ವಸ್ತುಸ್ಥಿತಿಯನ್ನು ವಿಡೀಯೋ ರೀಕಾರ್ಡಿಂಗ ಮಾಡಲಾಯಿತು.

### 3.5 ದತ್ತಾಂಶ ಸಂಗ್ರಹಣೆ :

ನಾನು ಇಲ್ಲ, ಹೌದು, ಭಾಗಶ: ಎಂಬ ಪ್ರತಿಕ್ರಿಯೆಯನ್ನು ಟಿಕ್ ಮಾಡುವುದರ ಮೂಲಕ ವ್ಯಕ್ತ ಪಡಿಸುವ ಚೆಕ್‌ಲಿಸ್ಟ್ ಮಾದರಿಯ ಮುಖ್ಯ ಶಿಕ್ಷಕರು, ಸಹ ಶಿಕ್ಷಕರು, ವಿದ್ಯಾರ್ಥಿಗಳು,

ಹಾಗೂ ಪಾಲಕರುಗಳಿಗಾಗಿ 4 ವಿಧದ ಪ್ರಶ್ನಾವಳಿಗಳನ್ನು ಹಾಗೂ ಸರ್ವೇ ಮಾದರಿಯ ಲಿಖಿತ ಅಭಿಪ್ರಾಯವನ್ನು ಬಯಸುವ ಮುಖ್ಯ ಶಿಕ್ಷಕರು ಮತ್ತು ಸಹ ಶಿಕ್ಷಕರಿಗಾಗಿ 2 ವಿಧದ ಪ್ರಶ್ನಾವಳಿಗಳನ್ನು ಸಿದ್ಧಪಡಿಸಿಕೊಂಡು ಅವುಗಳ ಅವಶ್ಯವಿದ್ದಷ್ಟು ಪ್ರತಿಗಳನ್ನು ತಯಾರಿಸಿಕೊಂಡು ದತ್ತಾಂಶ ಸಂಗ್ರಹಣೆಗಾಗಿ ಕಲಬುರಗಿ ಜಿಲ್ಲೆಯ ಅಫಜಲಪೂರ,

ಆಳಂದ, ಚಿಂಚೋಳಿ, ಚಿತ್ತಾಪೂರ, ಜೇವರ್ಗಿ, ಕಲಬುರಗಿ ದಕ್ಷಿಣ ವಲಯ ಹಾಗೂ ಸೇಡಂ (7) ತಾಲೂಕುಗಳಲ್ಲಿರುವ 7 ಆದರ್ಶ ವಿದ್ಯಾಲಯಗಳಿಗೆ ಭೇಟಿ ನೀಡಿ ಅವರಿಂದ ಮಾಹಿತಿಯನ್ನು ಪಡೆದುಕೊಂಡು ಬಂದಿರುತ್ತೇನೆ.

**ಅಧ್ಯಯನಕ್ಕೆ ಒಳಪಟ್ಟ ಕಲಬುರಗಿ ಜಿಲ್ಲೆಯ 7 ಆದರ್ಶ ವಿದ್ಯಾಲಯಗಳು :**

| ಕ್ರ.ಸಂ. | **ಆದರ್ಶ ವಿದ್ಯಾಲಯ ಹೆಸರು** | **ಶಾಲಾ ಡೈಸ್ ಸಂಖ್ಯೆ** | **ತಾಲೂಕ ಹೆಸರು** |
|---|---|---|---|
| 1 | ಆದರ್ಶ ವಿದ್ಯಾಲಯ ಅತನೂರ | 29040210005 | ಅಫಜಲಪೂರ |
| 2 | ಆದರ್ಶ ವಿದ್ಯಾಲಯ ಆಳಂದ | 29040116413 | ಆಳಂದ |
| 3 | ಆದರ್ಶ ವಿದ್ಯಾಲಯ ಪೋಲಕಪಳ್ಳಿ | 29040302236 | ಚಿಂಚೋಳಿ |
| 4 | ಆದರ್ಶ ವಿದ್ಯಾಲಯ ಚಿತ್ತಾಪೂರ | 29040423308 | ಚಿತ್ತಾಪೂರ |
| 5 | ಆದರ್ಶ ವಿದ್ಯಾಲಯ ಜೇವರ್ಗಿ | 29040619304 | ಜೇವರ್ಗಿ |
| 6 | ಆದರ್ಶ ವಿದ್ಯಾಲಯ ಭೀಮಳ್ಳಿ | 29041108526 | ಕಲಬುರಗಿ ದಕ್ಷಿಣ ವಲಯ |
| 7 | ಆದರ್ಶ ವಿದ್ಯಾಲಯ ಬಿಬ್ಬಳ್ಳಿ | 29040901302 | ಸೇಡಂ |

## 3.6 ಸಂಖ್ಯಾಶಾಸ್ತ್ರೀಯ ತಂತ್ರಗಳು :

ಸಂಗ್ರಹಿಸಿದ ದತ್ತಾಂಶಗಳ ವಿಶ್ಲೇಷಣೆಯನ್ನು ಸೂಕ್ತ ಸಂಖ್ಯಾಶಾಸ್ತ್ರೀಯ ತಂತ್ರಗಳನ್ನು ಬಳಸಿಕೊಂಡು ಅರ್ಥೈಸಲಾಗಿದೆ. ಶೇಕಡಾವಾರು ಮತ್ತು ಸರಾಸರಿ ಬೆಲೆಗಳು ಹಾಗೂ ಆಲೇಖಗಳನ್ನು ಉಪಯೋಗಿಸಿಕೊಳ್ಳಲಾಗಿದೆ.

# ಅಧ್ಯಾಯ : 4 ದತ್ತಾಂಶಗಳ ವಿಶ್ಲೇಷಣೆ ಮತ್ತು ಅರ್ಥೈಸುವಿಕೆ

## 4.1 ಪೀಠಿಕೆ :

ಸಂಶೋಧಕನು ಸಂಶೋಧನಾ ಕ್ಷೇತ್ರವನ್ನು ಆರಿಸಿದ ನಂತರ ಬರುವ ಮಹತ್ವಪೂರ್ಣವಾದ ಘಟ್ಟವೇ ದತ್ತಾಂಶಗಳ ಸಂಗ್ರಹಣೆ. ಅದಕ್ಕೆ ಸಂಬಂಧಿಸಿದಂತೆ ಸಂಶೋಧನೆಯ ಯೋಜನೆ ತಯಾರಿಸಿ ಸಂಶೋಧನಾ ವಿಷಯದ ಬಗ್ಗೆ ವಿವಿಧ ಮೂಲಗಳಿಂದ ಮಾಹಿತಿಯನ್ನು ಸಂಗ್ರಹಿಸಲಾಗುತ್ತದೆ. ಈ ಕ್ರಮಕ್ಕೆ **ದತ್ತಾಂಶಗಳ ಸಂಗ್ರಹಣೆ** ಎಂದು ಹೆಸರು. ನಾನು

Googleನಿಂದ ಹಾಗೂ ಸಾರ್ವಜನಿಕ ಶಿಕ್ಷಣ ಇಲಾಖೆ ವೆಬ್‌ಸೈಟ್‌ನಿಂದ ಮಾಹಿತಿಯನ್ನು ಸಂಗ್ರಹಿಸಿದೆನು. ಇದಲ್ಲದೆ ನನ್ನ ಸಂಶೋಧನಾ ವಿಷಯವಾದ **"ಆದರ್ಶ ಶಾಲೆಗಳ ವಸ್ತುಸ್ಥಿತಿ ಅಧ್ಯಯನ "** ಕುರಿತು ಪ್ರಶ್ನಾವಳಿಯನ್ನು ಮಾಹಿತಿ ಸಂಗ್ರಹಣಾ ತಂತ್ರವನ್ನಾಗಿ ಬಳಸಿ ನೇರವಾಗಿ ಮುಖ್ಯ ಶಿಕ್ಷಕರು, ಸಹ ಶಿಕ್ಷಕರು, ವಿದ್ಯಾರ್ಥಿ, ಹಾಗೂ ಪಾಲಕರಿಂದಲೇ ಮಾಹಿತಿಯನ್ನು ಸಂಗ್ರಹಿಸಿದೇನು.

ಸಂಶೋಧನಾ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಸಂಶೋಧನೆಯ ಯೋಜನೆಯನ್ನು ರೂಪುಗೊಳಿಸಿ ಅದರಂತೆ ದತ್ತಾಂಶಗಳ ಸಂಗ್ರಹಣಾ ಕಾರ್ಯವು ಯಶಸ್ವಿಯಾಗಿ ಮುಕ್ತಾಯಗೊಂಡರೆ ಸಂಶೋಧನಾ ಕಾರ್ಯವು ಬಹಳಷ್ಟು ಮಟ್ಟಿಗೆ ಪೂರ್ಣಗೊಂಡಿತು ಎಂದು ಭಾವಿಸಬಹುದು. ಮುಂದಿನ ಹಂತವಾಗಿ ಸಂಗ್ರಹಿಸಿದ ದತ್ತಾಂಶವನ್ನು ವಿಶ್ಲೇಷಣೆಗೆ ಒಳಪಡಿಸಲಾಗುತ್ತದೆ.

## 4.2 ದತ್ತಾಂಶ ವಿಶ್ಲೇಷಣೆ ಮತ್ತು ಅರ್ಥೈಸುವಿಕೆ :

ವಿಶ್ಲೇಷಣೆ ಎಂದರೆ ಸಂಶೋಧನೆಯ ಸಂದರ್ಭದಲ್ಲಿ ಸಂಶೋಧಕನು ಸಂಗ್ರಹಿಸಿದ ದತ್ತಾಂಶಗಳನ್ನು ಕ್ರಮಬದ್ಧ ರೀತಿಯಲ್ಲಿ ಜೋಡಿಸಿ ಪಟ್ಟಿ ಮಾಡಿದ ದತ್ತಾಂಶಗಳನ್ನು ಅಧ್ಯಯನ

ಮಾಡಿ ಅದರ ಒಳಗಿನ ಅರ್ಥಗಳನ್ನು ತಿಳಿಯುವ ಕಾರ್ಯಕ್ಕೆ **ದತ್ತಾಂಶ ವಿಶ್ಲೇಷಣೆ** ಎನ್ನುವರು.

ಕ್ಷೇತ್ರ ಅಧ್ಯಯನದಿಂದ ಸಂಗ್ರಹಿಸಲ್ಪಟ್ಟ ಮಾಹಿತಿಯನ್ನು ವಿಂಗಡಿಸಿ ವರ್ಗೀಕರಿಸಿ ಅದಕ್ಕೊಂದು ನಿಶ್ಚಿತವಾದ ರೂಪವನ್ನು ಕೊಡಬೇಕು. ಆಗ ಸಂಶೋಧನಾ ಮಾಹಿತಿಗೆ ಒಂದು ಅರ್ಥ ಬರುವದು. ಆದ್ದರಿಂದ ಸಂಶೋಧನಾ ಕಾರ್ಯದಲ್ಲಿ ಮಾಹಿತಿ ವಿಶ್ಲೇಷಣೆ ಅತ್ಯಂತ ಮಹತ್ವ ಪಡೆದುಕೊಂಡಿದೆ. ಸಂಶೋಧನಾ ಅಧ್ಯಯನಕ್ಕೆ ಅಂತಿಮ ರೂಪ ನೀಡುವ ಹಂತವೇ ಈ ವಿಶೇಷಣೆ ಹಂತವಾಗಿದೆ.

ಅವು ಯಾವುವೇಂದರ,

1) **ಪರಿಷ್ಕರಣ :–** ಪ್ರಶ್ನಾವಳಿಯಲ್ಲಿನ ಉತ್ತರಗಳ ಸಮಂಜಸತೆ, ಪೂರ್ಣತೆ ಮತ್ತು ಯಥಾರ್ಥತೆಗಳನ್ನು ಪರಿಶೀಲಿಸುವ ಒಂದು ಕ್ರಮವೇ ಮಾಹಿತಿಯ ಪರಿಷ್ಕರಣ.

2) **ಸಂಕೇತಿಕರಣ :–** ಪ್ರಶ್ನಾವಳಿಯ ಪ್ರಶ್ನೆಗಳಿಗೆ ಬರುವ ಪ್ರತಿಯೊಂದು ಪ್ರತಿಕ್ರಿಯೆಗೂ ಒಂದೊಂದು ಸಂಕೇತ ಸಂಖ್ಯೆ ಯನ್ನು ಕೊಡುವ ಕ್ರಮವೇ ಸಂಕೇತಿಕರಣವಾಗಿದೆ.

3) **ಪಟ್ಟಿ ಮಾಡುವಿಕೆ :–** ಮಾಹಿತಿಯ ಸಂಕೇತಿಕರಣದ ನಂತರ ಅದನ್ನು ಪಟ್ಟಿಯ ರೂಪದಲ್ಲಿ ಪ್ರಸ್ತುತ ಪಡಿಸುವ ಕ್ರಮಕ್ಕೆ ಪಟ್ಟಿ ಮಾಡುವಿಕೆ ಎನ್ನುವರು.

ಆದರ್ಶ ವಿದ್ಯಾಲಯಗಳ ಮುಖ್ಯ ಶಿಕ್ಷಕರು, ಸಹ ಶಿಕ್ಷಕರು, ವಿದ್ಯಾರ್ಥಿಗಳು, ಹಾಗೂ ಪಾಲಕರಿಂದ ಮಾಹಿತಿಯನ್ನು ಪಡೆದುಕೊಂಡು ಪ್ರಸ್ತುತ ಅಧ್ಯಯನದಲ್ಲಿ ಸಂಶೋಧನಾ ಉದ್ದೇಶಕ್ಕೆ ತಕ್ಕಂತೆ ಆಯಾ ಅಂಕಿಅಂಶಗಳನ್ನು ಬೇರ್ಪಡಿಸಿ ಅವುಗಳ ಸಹಾಯದಿಂದ ಪ್ರಶ್ನಾವಳಿಯ ಆಧಾರದ ಮೇಲೆ ಉದ್ದೇಶಗಳ ಸಾಧನಾಕ್ರಿಯೆ ಕೈಗೊಳ್ಳಲಾಗಿದೆ.

## 4.3 ಪ್ರಶ್ನೆವಾರು ವಿಶ್ಲೇಷಣೆ :

## I. ಚೆಕ್‌ಲಿಸ್ಟ್ ಮಾದರಿ ಪ್ರಶ್ನಾವಳಿ ವಿಶ್ಲೇಷಣೆ :

### : ಮುಖ್ಯ ಶಿಕ್ಷಕರ ಪ್ರತಿಕ್ರಿಯೆಗಳ ವಿಶ್ಲೇಷಣೆ :

ಮುಖ್ಯ ಶಿಕ್ಷಕರು ಒಂದು ಶಾಲೆಯ ಮುಖ್ಯಸ್ಥರಾಗಿದ್ದು ಆ ಶಾಲೆಯ ಶೈಕ್ಷಣಿಕ ಹಾಗೂ ಆಡಳಿತಾತ್ಮಕ ಎಲ್ಲ ಕಾರ್ಯಗಳನ್ನು ನೋಡಿಕೊಳ್ಳುವರು. ಅವರು ತಮ್ಮ ಪ್ರೌಢಶಾಲೆಯ ಅಭಿವೃದ್ಧಿಯ ದೃಷ್ಟಿಯಿಂದ ಅನೇಕರ ಸಂಪರ್ಕದಲ್ಲಿರುವರು. ಈ ಹಿನ್ನೆಲೆಯಲ್ಲಿ ಆಯಾ ಆದರ್ಶ ವಿದ್ಯಾಲಯಗಳ ಮುಖ್ಯ ಶಿಕ್ಷಕರು ತಮ್ಮ ಆದರ್ಶ ವಿದ್ಯಾಲಯಗಳ ಪ್ರಗತಿಗೆ, ಇಂದಿನ ವಸ್ತುಸ್ಥಿತಿಗೆ ಜವಾಬ್ದಾರರಾಗಿರುವರು.

ಪ್ರಯುಕ್ತ ಆದರ್ಶ ವಿದ್ಯಾಲಯಗಳ ವಸ್ತುಸ್ಥಿತಿಯನ್ನು ಅರಿಯಲು ಅಧ್ಯಯನದ ಉದ್ದೇಶಗಳನ್ನು ಆಧರಿಸಿ 15 ಪ್ರಶ್ನೆಗಳ ಹೇಳಿಕೆಗಳನ್ನು ಒಳಗೊಂಡ ಇಲ್ಲ, ಹೌದು, ಭಾಗಶ: ಎಂಬ ಉತ್ತರವನ್ನು ನಿರೀಕ್ಷಿಸಿ ಪ್ರಶ್ನಾವಳಿಯನ್ನು ನೀಡಿ ಅವುಗಳಲ್ಲಿ ತಮ್ಮ ಅನಿಸಿಕೆಗಳನ್ನು ಟಿಕ್ ಮಾಡುವ ಮೂಲಕ ನೀಡಲು ತಿಳಿಸಲಾಗಿತ್ತು. ಅದರಂತೆ ಕಲಬುರಗಿ ಜಿಲ್ಲೆಯ ಅಫಜಲಪೂರ, ಆಳಂದ, ಚಿಂಚೋಳಿ, ಚಿತ್ತಾಪೂರ, ಜೇವರ್ಗಿ, ಕಲಬುರಗಿ ದಕ್ಷಿಣ ವಲಯ ಹಾಗೂ ಸೇಡಂ ಈ 7 ತಾಲೂಕಿನಲ್ಲಿರುವ ಆದರ್ಶ ವಿದ್ಯಾಲಯಗಳ ಮುಖ್ಯ ಶಿಕ್ಷಕರು ಪ್ರತಿಯೊಂದು ಪ್ರಶ್ನೆ ಹೇಳಿಕೆಗೆ ನೀಡಿದ್ದ ಉತ್ತರವನ್ನು ಕ್ರೋಢಿಕರಿಸಿ ಈ ಕೆಳಗಿನಂತೆ ವಿಶ್ಲೇಷಿಸಲಾಗಿದೆ.

| ಮುಖ್ಯ ಶಿಕ್ಷಕರ ಅಭಿಪ್ರಾಯಗಳ ಪಟ್ಟಿ | | | | | | |
|---|---|---|---|---|---|---|
| ಕ್ರ.ಸಂ. | ನೀಡಿರುವ ಅಂಕಗಳು | | | ಪ್ರತಿಶತ | | |
| | ಇಲ್ಲ | ಹೌದು | ಭಾಗಶ: | ಇಲ್ಲ | ಹೌದು | ಭಾಗಶ: |
| 1 | -- | 7 | -- | -- | 100% | -- |
| 2 | -- | 6 | 1 | -- | 85.7% | 14.3% |
| 3 | -- | 7 | -- | -- | 100% | -- |
| 4 | -- | 6 | 1 | -- | 85.7% | 14.3% |
| 5 | -- | 5 | 2 | -- | 71.4% | 28.6% |
| 6 | -- | 5 | 2 | -- | 71.4% | 28.6% |
| 7 | 3 | 1 | 3 | 42.8% | 14.4% | 42.8% |
| 8 | -- | 5 | 2 | -- | 71.4% | 28.6% |
| 9 | -- | 5 | 2 | -- | 71.4% | 28.6% |
| 10 | -- | 5 | 2 | -- | 71.4% | 28.6% |
| 11 | -- | 6 | 1 | -- | 85.7% | 14.3% |
| 12 | 3 | 4 | -- | 42.8% | 57.2% | -- |
| 13 | -- | 6 | 1 | -- | 85.7% | 14.3% |
| 14 | 1 | 3 | 3 | 14.4% | 42.8% | 42.8% |
| 15 | -- | 7 | -- | -- | 100% | -- |

**1. ನಿಮ್ಮ ಆದರ್ಶ ವಿದ್ಯಾಲಯಕ್ಕೆ ಸ್ವಂತ ಹಾಗೂ ಪೂರ್ಣ ಪ್ರಮಾಣದ ಕಟ್ಟಡ ಇದೆಯೇ ?**

ಕೇಂದ್ರ ಶಿಕ್ಷಣ ಸಲಹಾ ಮಂಡಳಿ(ಸಿಎಬಿಇ – ಸೆಂಟ್ರಲ್ ಅಡ್ವೈಸರಿಬೋರ್ಡ ಆಫೆಜುಕೇಷನ್) ಯು ಸೆಪ್ಟಂಬರ್ 2005 ರ ವರದಿಯಲ್ಲಿ ಹಾಗೂ ಯೋಜನಾ ಆಯೋಗ ಮಾದರಿ ಶಾಲೆಗಳ ಬಗ್ಗೆ ಕೇಂದ್ರೀಯ ವಿದ್ಯಾಲಯಗಳಲ್ಲಿರುವ ಗುಣಮಟ್ಟಕ್ಕೆ ಅನುಗುಣವಾಗಿ ಮೂಲಭೂತ ಸೌಕರ್ಯ ಹಾಗೂ ಸೌಲಭ್ಯಗಳು ಒದಗಿಸಲು ಶಿಫಾರಸ್ಸು ಮಾಡಿರುವಂತೆ **ಶೇ. 100% ಪ್ರತಿಶತ** ಆದರ್ಶ ವಿದ್ಯಾಲಯಗಳು 32 ಕೊಠಡಿಗಳನ್ನು ಹೊಂದಿದ ಸ್ವಂತ ಹಾಗೂ ಪೂರ್ಣ ಪ್ರಮಾಣದ ಕಟ್ಟಡವನ್ನು ಹೊಂದಿರುವದು ಈ ಅಧ್ಯಯನದಿಂದ ಕಂಡು ಬರುತ್ತದೆ.

**2. ನೀರಿನ ಸ್ವಂತ ಮೂಲ ಇದೆಯೇ ?**

ವಿಶಾಲವಾದ ಕಟ್ಟಡ ಹಾಗೂ ಬೃಹತ ಸಂಖ್ಯೆಯ ವಿದ್ಯಾರ್ಥಿ, ಶಿಕ್ಷಕರು ಮತ್ತು ಸಿಬ್ಬಂದಿ ಹೊಂದಿರುವ ಆದರ್ಶ ವಿದ್ಯಾಲಯಗಳಿಗೆ ನೀರಿನ ಅವಶ್ಯಕತೆ ಹೆಚ್ಚಾಗಿರುತ್ತದೆ. ಪ್ರಯುಕ್ತ ನೀರಿನ ಸ್ವಂತ ಮೂಲದ ಅವಶ್ಯಕತೆ ಇದ್ದು, **ಶೇ. 85.7% ಪ್ರತಿಶತ** ಆದರ್ಶ ವಿದ್ಯಾಲಯಗಳಿಗೆ ಪೂರ್ಣ ಪ್ರಮಾಣದ ನೀರಿನ ಸ್ವಂತ ಮೂಲ ಇರುವದು ಅಧ್ಯಯನದಿಂದ ಕಂಡುಬರುತ್ತದೆ.

**3. ಮಕ್ಕಳ ಸಂಖ್ಯೆಗೆ ಅನುಗುಣವಾಗಿ ಶೌಚಾಲಯ ಇದೆಯೇ ?**

ಕೇಂದ್ರ ಶಿಕ್ಷಣ ಸಲಹಾ ಮಂಡಳಿಯ ಮೂಲಭೂತ ಸೌಕರ್ಯಗಳನ್ನು ಒದಗಿಸುವ ಶಿಫಾರಸ್ಸಿನಂತೆ ಆದರ್ಶ ವಿದ್ಯಾಲಯಗಳಲ್ಲಿ **ಶೇ. 100% ಪ್ರತಿಶತ** ಹೆಣ್ಣು ಮತ್ತು ಗಂಡು ಮಕ್ಕಳ ಸಂಖ್ಯೆಗೆ ಅನುಗುಣವಾಗಿ ಶೌಚಾಲಯ ಒದಗಿಸಲಾಗಿದೆ ಎಂಬುದು ಈ ಅಧ್ಯಯನದಿಂದ ಕಂಡುಬರುತ್ತದೆ.

**4. ಕುರ್ಚಿ, ಟೇಬಲ, ಅಲಮಾರಾ ಇತ್ಯಾದಿ ಪೀಠೋಪಕರಣಗಳು ಅವಶ್ಯಕತೆಗೆ ಅನುಗುಣವಾಗಿ ಇವೆಯೇ ?**

ಆದರ್ಶ ವಿದ್ಯಾಲಯಗಳಲ್ಲಿ ದೊಡ್ಡ ಸಂಖ್ಯೆಯ ವಿದ್ಯಾರ್ಥಿಗಳು, ಶಿಕ್ಷಕರು ಮತ್ತು ಸಿಬ್ಬಂದಿ ಇರುವುದರಿಂದ ಹಾಗೂ ಕೇಂದ್ರೀಯ ವಿದ್ಯಾಲಯದಂತ ಮಾದರಿ ಶಾಲೆಯ ಪರಿಕಲ್ಪನೆ ಹೊಂದಿರುವುದರಿಂದ ಎಲ್ಲರ ಅವಶ್ಯಕತೆಗೆ ಅನುಗುಣವಾಗಿ ಪೀಠೋಪಕರಣಗಳು ಇವೆಯೇ ಎಂಬುದನ್ನು ಗಮನದಲ್ಲಿಟ್ಟು ಈ ಪ್ರಶ್ನೆ ಹೇಳಿಕೆಯನ್ನು ಕೇಳಲಾಗಿ, **ಶೇ. 85.7% ಪ್ರತಿಶತ** ಆದರ್ಶ ವಿದ್ಯಾಲಯಗಳಲ್ಲಿ ಪೀಠೋಪಕರಣಗಳು ಅವಶ್ಯಕತೆಗೆ ಅನುಗುಣವಾಗಿ ಇರುವದು ಕಂಡುಬಂತು.

**5. ಅವಶ್ಯಕ ಪ್ರಯೋಗಾಲಯ ಸಾಮಗ್ರಿಗಳು, ಸಲಕರಣೆಗಳು ಹಾಗೂ ರಾಸಾಯನಿಕಗಳು ಲಭ್ಯ ಇವೆಯೇ ?**

ಗ್ರಾಮೀಣ ಪ್ರದೇಶದ ಪ್ರತಿಭಾವಂತ ಮಕ್ಕಳು ಗುಣಾತ್ಮಕ ಶಿಕ್ಷಣವನ್ನು ಪಡೆದು ಉನ್ನತ ಶಿಕ್ಷಣವನ್ನು ಹೊಂದಿ ಉಜ್ವಲ ಭವಿಷ್ಯವನ್ನು ಹೊಂದುವ ಉದ್ದೇಶದೊಂದಿಗೆ ಪ್ರಾರಂಭವಾದ ಆದರ್ಶ ವಿದ್ಯಾಲಯಗಳಲ್ಲಿ ಪ್ರಾಯೋಗಿಕ ಬೋಧನೆ ಮತ್ತು ಕಲಿಕೆಗೆ ಅವಶ್ಯಕ ಪ್ರಯೋಗಾಲಯ ಸಾಮಗ್ರಿಗಳು, ಸಲಕರಣೆಗಳು ಹಾಗೂ ರಸಾಯನಿಕಗಳು **ಶೇ. 71.4% ಪ್ರತಿಶತ** ಆದರ್ಶ ವಿದ್ಯಾಲಯ ಗಳಲ್ಲಿ **ಪೂರ್ಣ ಪ್ರಮಾಣದಲ್ಲಿ** ಹಾಗೂ **ಶೇ.28.6% ಪ್ರತಿಶತ** ಆದರ್ಶ ವಿದ್ಯಾಲಯಗಳಲ್ಲಿ **ಭಾಗಶ:** ಹೊಂದಿರುವುದು ಈ ಅಧ್ಯಯನದಿಂದ ಕಂಡುಬರುತ್ತದೆ.

**6. ಕಲಿಕೋಪಕರಣಗಳನ್ನು ಸಮರ್ಪಕವಾಗಿ ಬಳಕೆ ಮಾಡಿಕೊಳ್ಳಲಾಗುತ್ತಿದೆಯೇ ?**

ಗ್ರಾಮೀಣ ಬಡ ಪ್ರತಿಭಾವಂತ ಮಕ್ಕಳಿಗೆ ಉತ್ತಮ ಶಿಕ್ಷಣವನ್ನು ನೀಡಿ ಅವರು ಉನ್ನತ ಶಿಕ್ಷಣ ಪಡೆದು ಉತ್ತಮ ಭವಿಷ್ಯ ಹೊಂದುವಂತಾಗಬೇಕೆಂಬ ಉದ್ದೇಶ ಹೊಂದಿದ ಆದರ್ಶ ವಿದ್ಯಾಲಯಗಳಲ್ಲಿ ಬೋಧನೆ ಮತ್ತು ಕಲಿಕೆಗೆ ಕಲಿಕೋಪಕರಣಗಳನ್ನು **ಶೇ. 71.4% ಪ್ರತಿಶತ** ಆದರ್ಶ ವಿದ್ಯಾಲಯಗಳಲ್ಲಿ **ಪೂರ್ಣಪ್ರಮಾಣದಲ್ಲಿ** ಹಾಗೂ **28.6% ಪ್ರತಿಶತ** ಆದರ್ಶ ವಿದ್ಯಾಲಯಗಳಲ್ಲಿ **ಭಾಗಶ:** ಬಳಕೆ ಮಾಡಿಕೊಳ್ಳಲಾಗುತ್ತಿದೆ ಎಂದು ಅಧ್ಯಯನದಿಂದ ಕಂಡುಬಂತು.

**7. ಸುಸಜ್ಜಿತವಾದ ಒಳಾಂಗಣ ಹಾಗೂ ಹೊರಾಂಗಣ ಕ್ರೀಡಾ ಸೌಕರ್ಯ ಇದೆಯೇ ?**

ಕೇಂದ್ರ ಶಿಕ್ಷಣ ಸಲಹಾ ಮಂಡಳಿಯು ಮಗುವಿನ ಬೌದ್ಧಿಕ ಬೆಳವಣಿಗೆಯ ಜೊತೆಗೆ ದೈಹಿಕ ಮತ್ತು ಮಾನಸಿಕ ಬೆಳವಣಿಗೆಗೆ ಅವಶ್ಯಕ ಕ್ರೀಡಾ ಚಟುವಟಿಕೆಗೆ ಸುಸಜ್ಜಿತವಾದ ಒಳಾಂಗಣ ಹಾಗೂ ಹೊರಾಂಗಣ ಕ್ರೀಡಾ ಸೌಕರ್ಯಗಳನ್ನು ಒದಗಿಸಲು ಶಿಫಾರಸ್ಸು ಮಾಡಿರುವದನ್ನು ಗಮನದಲ್ಲಿಟ್ಟು ಈ ಪ್ರಶ್ನೆ ಹೇಳಿಕೆಯನ್ನು ಕೇಳಲಾಗಿದ್ದು, **ಶೇ.14.4% ಪ್ರತಿಶತ** ಆದರ್ಶ ವಿದ್ಯಾಲಯ ಗಳಲ್ಲಿ ಕ್ರೀಡಾ ಸೌಕರ್ಯ ಹೊಂದಿರುವದಾಗಿ ಹಾಗೂ **ಶೇ. 42.8% ಪ್ರತಿಶತ** ಆದರ್ಶ ವಿದ್ಯಾಲಯ ಗಳಲ್ಲಿ **ಭಾಗಶ:** ಹೊಂದಿರುವದಾಗಿ ಅಧ್ಯಯನದಿಂದ ಕಂಡುಬರುತ್ತದೆ.

**8. ಆಂಗ್ಲ ಮಾಧ್ಯಮದಲ್ಲಿ ಬೋಧಿಸುವ ಶಿಕ್ಷಕರ ನೇಮಕಾತಿ ಆಗಿದೆಯೇ ?**

ಗ್ರಾಮೀಣ ಬಡ ಪಾಲಕರಿಗೆ ತಮ್ಮ ಪ್ರತಿಭಾವಂತ ಮಕ್ಕಳಿಗೆ ಆಂಗ್ಲ ಮಾಧ್ಯಮದಲ್ಲಿ ಕಲಿಸುವುದು ಕಷ್ಟವಾಗಿದ್ದರಿಂದ ಇಂಥ ಮಕ್ಕಳಿಗೆ ಆಂಗ್ಲ ಮಾಧ್ಯಮದಲ್ಲಿ ಶಿಕ್ಷಣ ನೀಡಿ ಅವರು ಉನ್ನತ ವ್ಯಾಸಂಗ ಮಾಡಿ ಪ್ರಗತಿಪಥದತ್ತ ಮುನ್ನಡೆಯಬೇಕೆಂಬ ಉದ್ದೇಶ ಹೊಂದಿದ್ದು, **ಶೇ.71.4% ಪ್ರತಿಶತ** ಆದರ್ಶ ವಿದ್ಯಾಲಯಗಳಲ್ಲಿ

ನೇಮಕಾತಿ ಆಗಿರುವದಾಗಿ ಹಾಗೂ **ಶೇ.28.6% ಪ್ರತಿಶತ** ಆದರ್ಶ ವಿದ್ಯಾಲಯಗಳಲ್ಲಿ **ಭಾಗಶ:** ಆಂಗ್ಲ ಮಾಧ್ಯಮದಲ್ಲಿ ಬೋಧಿಸುವ ಶಿಕ್ಷಕರ ನೇಮಕಾತಿ ಆಗಿರುವದು ಅಧ್ಯಯನದಿಂದ ಕಂಡುಬರುತ್ತದೆ.

**9. ರೋಸ್ಟರ ಪ್ರಕಾರ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿಗಳ ನೇಮಕಾತಿ ಆಗಿದೆಯೇ ?**

ಕೇಂದ್ರ ಶಿಕ್ಷಣ ಸಲಹಾ ಮಂಡಳಿ ಹಾಗೂ ಯೋಜನಾ ಆಯೋಗ ಶಿಫಾರಸ್ಸು ಮಾಡಿರುವಂತೆ ಕೇಂದ್ರೀಯ ವಿದ್ಯಾಲಯಗಳ ಮಾದರಿಯಲ್ಲಿ ಗುಣಾತ್ಮಕ ಶಿಕ್ಷಣಕ್ಕೆ ಅವಶ್ಯಕವಾದ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿಗಳ ನೇಮಕಾತಿ ರೋಸ್ಟರ ಪ್ರಕಾರ **ಶೇ.71.4% ಪ್ರತಿಶತ** ಆದರ್ಶ ವಿದ್ಯಾಲಯಗಳಲ್ಲಿ ಆಗಿರುವದು ಹಾಗೂ **ಶೇ.28.6% ಪ್ರತಿಶತ** ಆದರ್ಶ ವಿದ್ಯಾಲಯಗಳಲ್ಲಿ **ಭಾಗಶ:** ನೇಮಕಾತಿ ಆಗಿರುವದು ಅಧ್ಯಯನದಿಂದ ಕಂಡುಬರುತ್ತದೆ.

**10. ಗ್ರಾಮೀಣ ಪ್ರತಿಭಾವಂತ ವಿದ್ಯಾರ್ಥಿಗಳಲ್ಲದೆ ಇತರ ಭಾಗದ ವಿದ್ಯಾರ್ಥಿಗಳಿಗೂ ದಾಖಲಾತಿ ನೀಡಲಾಗಿದೆಯೇ ?**

ಆದರ್ಶ ವಿದ್ಯಾಲಯಗಳು ಸ್ಥಾಪನೆಗೊಂಡಿದ್ದು ಗ್ರಾಮೀಣ ಭಾಗದ ಬಡ ಪ್ರತಿಭಾವಂತ ಮಕ್ಕಳಿಗೆ ಉಚಿತ ವಾಗಿ ಆಂಗ್ಲ ಮಾಧ್ಯಮದಲ್ಲಿ ಶಿಕ್ಷಣ ನೀಡಿ ಅವರು ಉನ್ನತ ಶಿಕ್ಷಣ ಪಡೆಯಲು ಸಹಕಾರಿಯಾಗಲು. ಪ್ರಯುಕ್ತ ಇದರ ಲಾಭವನ್ನು ಪಡೆಯಲು ಇತರ ಭಾಗದ ವಿದ್ಯಾರ್ಥಿಗಳು ದಾಖಲಾತಿ ಪಡೆದಿರುವರೇ ಎಂದು ಗಮನದಲ್ಲಿಟ್ಟು ಈ ಪ್ರಶ್ನೆ ಹೇಳಿಕೆಯನ್ನು ಕೇಳಲಾಗಿದ್ದು, ಇದಕ್ಕೆ **ಶೇ. 71.4% ಪ್ರತಿಶತ** ಹೌದು **ಶೇ.28.6% ಪ್ರತಿಶತ ಭಾಗಶ:** ಎಂದು ಪ್ರತಿಕ್ರಿಯಿಸಿದ್ದು ಮೂಲತ: ಗ್ರಾಮೀಣ ಭಾಗದವರಾಗಿದ್ದು ಈಗ ನಗರ ಪ್ರದೇಶಗಳಲ್ಲಿ ವಾಸವಾಗಿರುವ ನಗರ ಪ್ರದೇಶದ ಮಕ್ಕಳಿಗೂ ಆದರ್ಶ ವಿದ್ಯಾಲಯಗಳಲ್ಲಿ ದಾಖಲಾತಿ ನೀಡಲಾಗಿರುವದು ಈ ಅಧ್ಯಯನದಿಂದ ಕಂಡುಬರುತ್ತದೆ.

**11. ನೀಡಿರುವ ಅನುದಾನವನ್ನು ಸಮರ್ಪಕವಾಗಿ ಬಳಸಲು ಎಸ್.ಡಿ.ಎಮ್.ಸಿ. ಸಹಕರಿಸುವದೇ ?**

ಶಾಲೆಗಳ ಅಭಿವೃದ್ಧಿಯಲ್ಲಿ ಎಸ್.ಡಿ.ಎಮ್.ಸಿ ಪಾತ್ರ ಪ್ರಮುಖವಾದುದು. **ಶೇ.85.7% ಪ್ರತಿಶತ** ಆದರ್ಶ ವಿದ್ಯಾಲಯಗಳಲ್ಲಿ ಹೌದು ಎಂದು ಹಾಗೂ **14.3% ಪ್ರತಿಶತ** ಆದರ್ಶ ವಿದ್ಯಾಲಯಗಳಲ್ಲಿ **ಭಾಗಶ:** ಎಸ್.ಡಿ.ಎಮ್.ಸಿ ಯವರು ಇಲಾಖೆಯಿಂದ ನೀಡುವ ಅನುದಾನವನ್ನು ಶಾಲಾ ಅಭಿವೃದ್ಧಿಗಾಗಿ ಸಮರ್ಪಕವಾಗಿ ಬಳಸಲು ಉತ್ತಮ ಸಹಕಾರ ನೀಡಿರುವದು ಅಧ್ಯಯನದಿಂದ ಕಂಡುಬರುತ್ತದೆ.

**12. ವೃತ್ತಿ ಶಿಕ್ಷಣ ಸಾಮಗ್ರಿಗಳು ಪೂರೈಕೆ ಆಗಿವೆಯೇ ?**

ಆದರ್ಶ ವಿದ್ಯಾಲಯ ಶಾಲೆಗಳು ವಿದ್ಯಾರ್ಥಿಗಳಿಗೆ ಸಮಗ್ರ ಶಿಕ್ಷಣ ನೀಡುವ ದೂರದೃಷ್ಟಿ ಹೊಂದಿದ್ದು ವೃತ್ತಿ

ಶಿಕ್ಷಕರನ್ನು ನೇಮಿಸಿಕೊಂಡು ವೃತ್ತಿ ಶಿಕ್ಷಣ ನೀಡಬೇಕಾಗಿದ್ದು, **ಶೇ. 57.2% ಪ್ರತಿಶತ** ಆದರ್ಶ ವಿದ್ಯಾಲಯಗಳಲ್ಲಿ ವೃತ್ತಿ ಶಿಕ್ಷಣ ಸಾಮಗ್ರಿಗಳು ಪೂರೈಕೆ ಆಗಿರುವದು ಅಧ್ಯಯನದಿಂದ ಕಂಡುಬರುತ್ತದೆ.

## 13. ವಿಷಯಾಧಾರಿತ ಲ್ಯಾಬ್‌ಗಳ ರಚನೆ ಮಾಡಲಾಗಿದೆಯೇ ?

ವಿದ್ಯಾರ್ಥಿಗಳಿಗೆ ಗುಣಾತ್ಮಕ ಹಾಗೂ ಸಮಗ್ರ ಶಿಕ್ಷಣ ನೀಡುವ ದೂರದೃಷ್ಟಿ ಹೊಂದಿರುವ ಆದರ್ಶ ವಿದ್ಯಾಲಯಗಳಲ್ಲಿ ಉತ್ತಮ ಬೋಧನೆ ಮತ್ತು ಕಲಿಕೆಗೆ ವಿಷಯಾಧಾರಿತ ಲ್ಯಾಬ್‌ಗಳು ಅವಶ್ಯಕವಾಗಿರುವದು. ಇದಕ್ಕೆ **ಶೇ. 85.7% ಪ್ರತಿಶತ** ಪೂರ್ಣ ಹಾಗೂ **14.3% ಪ್ರತಿಶತ ಭಾಗಶ:** ವಿಷಯಾಧಾರಿತ ಲ್ಯಾಬ್‌ಗಳ ರಚನೆ ಮಾಡಲಾಗಿರುವದು ಅಧ್ಯಯನದಿಂದ ಕಂಡುಬರುತ್ತದೆ.

## 14. ಪ್ರತಿ ತರಗತಿಗೆ 80 ರಂತೆ ಗರಿಷ್ಟ 400 ಮಕ್ಕಳ ದಾಖಲಾತಿ ಆಗಿರುವದೇ ?

ಗ್ರಾಮೀಣ ಪ್ರದೇಶದ ಬಡ ಪ್ರತಿಭಾವಂತ ಮಕ್ಕಳಿಗೆ ಕೇಂದ್ರೀಯ ವಿದ್ಯಾಲಯ ಮಾದರಿಯಲ್ಲಿ ಎಲ್ಲ ಮೂಲಭೂತ ಸೌಕರ್ಯ ಮತ್ತು ಸೌಲಭ್ಯಗಳನ್ನು ಹೊಂದಿದ ಆಂಗ್ಲ ಮಾಧ್ಯಮದಲ್ಲಿ ಶಿಕ್ಷಣ ನೀಡಲು 6 ರಿಂದ 10 ನೇ ತರಗತಿವರೆಗೆ ಪ್ರತಿ ತರಗತಿಗೆ 80 ವಿದ್ಯಾರ್ಥಿಗಳಂತೆ ಒಟ್ಟು 400 ಮಕ್ಕಳಿಗೆ ಸ್ಪರ್ಧಾ ಪರೀಕ್ಷೆ ಮೂಲಕ ಆದರ್ಶ ವಿದ್ಯಾಲಯಗಳಲ್ಲಿ ದಾಖಲಾತಿ ಮಾಡಲಾಗುತ್ತದೆ. ಇದರ ಲಾಭ ಗ್ರಾಮೀಣ ಪ್ರದೇಶದವರು ಪಡೆದಿರುವರೇ ಎಂಬುದನ್ನು ಗಮನದಲ್ಲಿಟ್ಟು ಕೇಳಲಾದ ಈ ಪ್ರಶ್ನೆ ಹೇಳಿಕೆಗೆ **ಶೇ. 42.8% ಪ್ರತಿಶತ** ಆದರ್ಶ ವಿದ್ಯಾಲಯಗಳಲ್ಲಿ ಆಗಿರುವದಾಗಿ ಹಾಗೂ **ಶೇ. 42.8% ಪ್ರತಿಶತ** ಆದರ್ಶ ವಿದ್ಯಾಲಯಗಳಲ್ಲಿ **ಭಾಗಶ:** ದಾಖಲಾತಿ ಆಗಿರುವದು ಅಧ್ಯಯನದಿಂದ ಕಂಡು ಬರುತ್ತದೆ.

## 15. ಎಸ್.ಎಸ್.ಎಲ್.ಸಿ ಪರೀಕ್ಷೆಯ ಫಲಿತಾಂಶದಲ್ಲಿ ಪ್ರಗತಿ ಆಗಿರುತ್ತದೆಯೇ ?

ಯೋಜನಾ ಆಯೋಗವು ಆದರ್ಶ ವಿದ್ಯಾಲಯಗಳಿಗೆ ಕೇಂದ್ರೀಯ ಮಾದರಿಯ ಸೌವಲತ್ತುಗಳನ್ನು ನೀಡುವುದು ಹಾಗೂ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ನೀಡುವುದರೊಂದಿಗೆ ಉತ್ತಮ ಫಲಿತಾಂಶಕ್ಕೂ ಒತ್ತು ನೀಡಿದ್ದು, **ಶೇ.100% ಪ್ರತಿಶತ** ಆದರ್ಶ ವಿದ್ಯಾಲಯಗಳಲ್ಲಿ SSLC ಪರೀಕ್ಷೆಯ ಫಲಿತಾಂಶದಲ್ಲಿ ಪ್ರಗತಿ ಆಗಿರುವದು ಅಧ್ಯಯನದಿಂದ ಕಂಡುಬರುತ್ತದೆ.

## : ಸಹ ಶಿಕ್ಷಕರ ಪ್ರತಿಕ್ರಿಯೆಗಳ ವಿಶ್ಲೇಷಣೆ :

ಶಾಲೆಯಲ್ಲಿ ಮುಖ್ಯ ಶಿಕ್ಷಕರ ನಂತರ ಸಹ ಶಿಕ್ಷಕರೇ ಪ್ರಮುಖ ಪಾತ್ರವಹಿಸುವರು. ಇವರು ವಿದ್ಯಾರ್ಥಿಗಳೊಂದಿಗೆ, ಪಾಲಕರೊಂದಿಗೆ ನಿಕಟ ಸಂಪರ್ಕ ಹೊಂದಿರುವರು. ಶಾಲೆಯ ಸ್ಥಿತಿ ಎಂದರೆ ಮೂಲಭೂತ ಸೌಕರ್ಯಗಳು ಮತ್ತು ಸೌವಲತ್ತುಗಳು ಇವರ ಬೋಧನೆಯ ಮೇಲೆ ಪ್ರಭಾವ ಬೀರುವಂಥದ್ದು. ಮಕ್ಕಳ ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಪ್ರತಿಭೆ ಪ್ರತಿಯೊಂದುನ್ನು ನಿಕಟದಿಂದ ಬಲ್ಲವರು ಹಾಗೂ ಮಾರ್ಗದರ್ಶನ ಮಾಡುವವರು ಶಿಕ್ಷಕರು. ಪ್ರಯುಕ್ತ ಆದರ್ಶ ವಿದ್ಯಾಲಯಗಳ ವಸ್ತುಸ್ಥಿತಿಯನ್ನು ಅರಿಯುವಲ್ಲಿ ಸಹಶಿಕ್ಷಕರಿಂದ ಪಡೆಯುವ ಮಾಹಿತಿಯು ಪ್ರಮುಖವಾದುದು.

15 ಪ್ರಶ್ನೆಗಳ ಹೇಳಿಕೆಗಳನ್ನು ಒಳಗೊಂಡ ಇಲ್ಲ, ಹೌದು, ಭಾಗಶ: ಎಂಬ ಉತ್ತರವನ್ನು ನಿರೀಕ್ಷಿಸಿ ಪ್ರಶ್ನಾವಳಿಯನ್ನು ನೀಡಿ ಅವುಗಳಿಗೆ ತಮ್ಮ ಅಭಿಪ್ರಾಯವನ್ನು ಟಿಕ್ ಮಾಡುವುದರ ಮೂಲಕ ನೀಡಲು ತಿಳಿಸಲಾಗಿತ್ತು. ಅದರಂತೆ ಕಲಬುರಗಿ ಜಿಲ್ಲೆಯ ಅಫಜಲಪೂರ, ಆಳಂದ, ಚಿಂಚೋಳಿ, ಚಿತ್ತಾಪೂರ, ಜೇವರ್ಗಿ, ಕಲಬುರಗಿ ದಕ್ಷಿಣ ವಲಯ ಹಾಗೂ ಸೇಡಂ ಈ 7 ತಾಲೂಕಿನಲ್ಲಿರುವ ಆದರ್ಶ ವಿದ್ಯಾಲಯಗಳ, ಪ್ರತಿ ಆದರ್ಶ ವಿದ್ಯಾಲಯದಿಂದ 2 ಶಿಕ್ಷಕ(ವಿಜ್ಞಾನ/ಗಣಿತ–1, ದೈಹಿಕ/ಕಲಾ–1)ರಂತೆ ಒಟ್ಟು 14 ಶಿಕ್ಷಕರು ಪ್ರತಿಯೊಂದು ಪ್ರಶ್ನೆ ಹೇಳಿಕೆಗೆ ನೀಡಿದ್ದ ಉತ್ತರವನ್ನು ಕ್ರೋಢಿಕರಿಸಿ ಈ ಕೆಳಗಿನಂತೆ ವಿಶ್ಲೇಷಿಸಲಾಗಿದೆ.

| ಶಿಕ್ಷಕರ ಅಭಿಪ್ರಾಯದ ಪಟ್ಟಿ | | | | | | |
|---|---|---|---|---|---|---|
| ಕ್ರ. ಸಂ. | ನೀಡಿರುವ ಅಂಕಗಳು | | | ಪ್ರತಿಶತ | | |
| | ಇಲ್ಲ | ಹೌದು | ಭಾಗಶ: | ಇಲ್ಲ | ಹೌದು | ಭಾಗಶ: |
| 1 | -- | 14 | -- | -- | 100% | -- |
| 2 | -- | 14 | -- | -- | 100% | -- |
| 3 | -- | 10 | 4 | -- | 71.4% | 28.6% |
| 4 | -- | 11 | 3 | -- | 78.6% | 21.4% |
| 5 | 2 | 8 | 4 | 14.3% | 57.1% | 28.6% |
| 6 | -- | 7 | 7 | -- | 50% | 50% |
| 7 | 12 | 2 | -- | 85.7% | 14.3% | -- |
| 8 | 1 | 13 | -- | 7.1% | 92.9% | -- |
| 9 | 1 | 7 | 6 | 7.1% | 50% | 42.9% |
| 10 | -- | 13 | 1 | -- | 92.9% | 7.1% |
| 11 | 6 | 4 | 4 | 42.8% | 28.6% | 28.6% |
| 12 | -- | 13 | 1 | -- | 92.9% | 7.1% |
| 13 | -- | 12 | 2 | 14.3% | 85.7% | -- |
| 14 | -- | 10 | 4 | -- | 71.4% | 28.6% |
| 15 | 2 | 10 | 2 | 14.3% | 71.4% | 14.3% |

**1. ನೀರಿನ ವ್ಯವಸ್ಥೆ ಇದೆಯೇ ?**

ವಿಶಾಲವಾದ ಕಟ್ಟಡ ಹಾಗೂ ಬೃಹತ ಸಂಖ್ಯೆಯ ವಿದ್ಯಾರ್ಥಿ, ಶಿಕ್ಷಕರು ಮತ್ತು ಸಿಬ್ಬಂದಿ ಹೊಂದಿರುವ ಆದರ್ಶ ವಿದ್ಯಾಲಯಗಳಿಗೆ ನೀರಿನ ಅವಶ್ಯಕತೆ ಹೆಚ್ಚಾಗಿರುತ್ತದೆ. **ಶೇ. 100% ಪ್ರತಿಶತ** ಆದರ್ಶ ವಿದ್ಯಾಲಯಗಳಲ್ಲಿ ನೀರಿನ ವ್ಯವಸ್ಥೆ ಇರುವದು ಅಧ್ಯಯನದಿಂದ ಕಂಡುಬರುತ್ತದೆ.

**2. ಹೆಣ್ಣು ಮತ್ತು ಗಂಡು ಮಕ್ಕಳಿಗೆ ಪ್ರತ್ಯೇಕ ಶೌಚಾಲಯ ಇದೆಯೇ ?**

ಆದರ್ಶ ವಿದ್ಯಾಲಯಗಳು ಹೆಣ್ಣು ಮತ್ತು ಗಂಡು ವಿದ್ಯಾರ್ಥಿಗಳನ್ನು ಒಳಗೊಂಡ ಸಹಶಿಕ್ಷಣವನ್ನು ಹೊಂದಿದ್ದು, ಹೆಣ್ಣು ಮತ್ತು ಗಂಡು ವಿದ್ಯಾರ್ಥಿಗಳಿಗೆ ಪ್ರತ್ಯೇಕವಾದ ಶೌಚಾಲಯದ ವ್ಯವಸ್ಥೆ **ಶೇ.100% ಪ್ರತಿಶತ** ಆದರ್ಶ ವಿದ್ಯಾಲಯಗಳಲ್ಲಿ ಇರುವದು ಈ ಅಧ್ಯಯನದಿಂದ ಕಂಡು ಬರುತ್ತದೆ.

**3. ಸಾಕಷ್ಟು ಗಿಡಮರಗಳನ್ನು ಹಚ್ಚಿ ಬೆಳೆಸಿ ಶಾಲಾಪರಿಸರ ಹಸಿರಾಗಿರುವದೇ ?**

ಮೂಲಭೂತ ಸೌಕರ್ಯಗಳನ್ನು ಒದಗಿಸಿ ಗುಣಾತ್ಮಕ ಶಿಕ್ಷಣ ನೀಡುವ ಉದ್ದೇಶ ಹೊಂದಿದ ಆದರ್ಶ ವಿದ್ಯಾಲಯಗಳಲ್ಲಿ ಶೈಕ್ಷಣಿಕ ಚಟುವಟಿಕೆಗಳಿಗೆ ಪೂರಕವಾಗಿ **ಶೇ.71.4% ಪ್ರತಿಶತ** ಆದರ್ಶ ವಿದ್ಯಾಲಯಗಳಲ್ಲಿ **ಪೂರ್ಣಪ್ರಮಾಣದಲ್ಲಿ** ಹಾಗೂ **ಶೇ.28.6% ಪ್ರತಿಶತ** ಆದರ್ಶ ವಿದ್ಯಾಲಯಗಳಲ್ಲಿ **ಭಾಗಶ:** ಮೂಲಭೂತ ಸೌಲಭ್ಯಗಳನ್ನು ಬಳಸಿಕೊಂಡು ಗಿಡಮರಗಳನ್ನು ಹಚ್ಚಿ ಹಸಿರಿನಿಂದ ಕಂಗೋಳಿಸುತ್ತಿವೆ ಎಂದು ಈ ಅಧ್ಯಯನದಿಂದ ಕಂಡುಬರುತ್ತದೆ.

**4. ವಿಜ್ಞಾನ ಲ್ಯಾಬ್‌ನಲ್ಲಿನ ಸಲಕರಣೆಗಳು ಬಳಕೆಗೆ ಯೋಗ್ಯ ಆಗಿವೆಯೇ ?**

ಗ್ರಾಮೀಣ ಭಾಗದ ಮಕ್ಕಳಿಗೆ ಗುಣಾತ್ಮಕ ಶಿಕ್ಷಣ ನೀಡಿ ಅವರು ಉನ್ನತ ಶಿಕ್ಷಣ ಪಡೆದು ಉಜ್ವಲ ಭವಿಷ್ಯ ಹೊಂದಬೇಕೆಂಬ ಉದ್ದೇಶದೊಂದಿಗೆ ಪ್ರಾರಂಭವಾದ ಆದರ್ಶ ವಿದ್ಯಾಲಯಗಳಲ್ಲಿ ಮಕ್ಕಳ ಪ್ರಾಯೋಗಿಕ ಶಿಕ್ಷಣಕ್ಕೆ ವಿಜ್ಞಾನ ಲ್ಯಾಬ್‌ನಲ್ಲಿ ಉತ್ತಮ, ಬಳಕೆಗೆ ಯೋಗ್ಯವಾದ ಸಾಧನ ಸಲಕರಣೆಗಳಿರಬೇಕಾಗಿರುವುದು ಅವಶ್ಯಕವಾಗಿದ್ದು **ಶೇ.78.6% ಪ್ರತಿಶತ** ಆದರ್ಶ ವಿದ್ಯಾಲಯಗಳಲ್ಲಿ **ಪೂರ್ಣಪ್ರಮಾಣದಲ್ಲಿ** ಹಾಗೂ **ಶೇ.21.4% ಪ್ರತಿಶತ** ಆದರ್ಶ ವಿದ್ಯಾಲಯಗಳಲ್ಲಿ **ಭಾಗಶ:** ವಿಜ್ಞಾನ ಲ್ಯಾಬ್‌ನಲ್ಲಿನ ಸಲಕರಣೆಗಳು ಬಳಕೆಗೆ ಯೋಗ್ಯ ಆಗಿರುವದು ಅಧ್ಯಯನದಿಂದ ಕಂಡುಬರುತ್ತದೆ.

**5. ವಿಷಯಾಧಾರಿತ ಕಲಿಕೋಪಕರಣಗಳು ಸಾಕಷ್ಟು ಸಂಖ್ಯೆಯಲ್ಲಿ ಇವೆಯೇ ?**

ಆದರ್ಶ ವಿದ್ಯಾಲಯಗಳು ಬೃಹತ ಸಂಖ್ಯೆಯ ವಿದ್ಯಾರ್ಥಿಗಳನ್ನು ಹೊಂದಿದ್ದು ಅವರ ಶೈಕ್ಷಣಿಕ ಪ್ರಗತಿಗೆ

/ ಉತ್ತಮ ಬೋಧನೆ ಮತ್ತು ಕಲಿಕೆಗೆ ಸಾಕಷ್ಟು ಸಂಖ್ಯೆಯ ವಿಷಯಾಧಾರಿತ ಕಲಿಕೋಪಕರಣಗಳು ಅವಶ್ಯಕವಾಗಿದ್ದು, **ಶೇ.57.1% ಪ್ರತಿಶತ** ಆದರ್ಶ ವಿದ್ಯಾಲಯಗಳಲ್ಲಿ **ಸಾಕಷ್ಟು** ಹಾಗೂ **ಶೇ.28.6% ಪ್ರತಿಶತ** ಆದರ್ಶ ವಿದ್ಯಾಲಯಗಳಲ್ಲಿ **ಭಾಗಶ:** ವಿಷಯಾಧಾರಿತ ಕಲಿಕೋಪಕರಣಗಳು ಇರುವುದಾಗಿ ಅಧ್ಯಯನದಿಂದ ಕಂಡುಬರುತ್ತದೆ.

**6. ದೈಹಿಕ ಶಿಕ್ಷಣ ಸಾಮಗ್ರಿಗಳು/ಕ್ರೀಡಾ ಸಾಮಗ್ರಿಗಳು ಸಾಕಷ್ಟು ಸಂಖ್ಯೆಯಲ್ಲಿ ಇವೆಯೇ ?**

ವಿದ್ಯಾರ್ಥಿಗಳಿಗೆ ಆರೋಗ್ಯದ ದೃಷ್ಟಿಯಿಂದ ಬೌದ್ಧಿಕ ಶಿಕ್ಷಣದೊಂದಿಗೆ ದೈಹಿಕ ಶಿಕ್ಷಣವು ಅವಶ್ಯಕ. ಆದರ್ಶ ವಿದ್ಯಾಲಯಗಳಲ್ಲಿ ಸುಮಾರು 400 ವಿದ್ಯಾರ್ಥಿಗಳು ದಾಖಲಾತಿ ಹೊಂದಿರುತ್ತಾರೆ. ಈ ಸಂಖ್ಯೆಗೆ ಅನುಗುಣವಾಗಿ ಪರಿಣಾಮಕಾರಿಯಾಗಿ ದೈಹಿಕ ಶಿಕ್ಷಣ ನೀಡಲು ಸಾಕಷ್ಟು ದೈಹಿಕ/ಕ್ರೀಡಾ ಸಾಮಗ್ರಿಗಳು ಹೊಂದಿರಬೇಕಾಗಿರುತ್ತದೆ. **ಶೇ.50% ಪ್ರತಿಶತ** ಆದರ್ಶ ವಿದ್ಯಾಲಯಗಳಲ್ಲಿ **ಪೂರ್ಣಪ್ರಮಾಣದಲ್ಲಿ** ಹಾಗೂ **ಶೇ.50% ಪ್ರತಿಶತ** ಆದರ್ಶ ವಿದ್ಯಾಲಯಗಳಲ್ಲಿ **ಭಾಗಶ:** ದೈಹಿಕ ಶಿಕ್ಷಣ/ಕ್ರೀಡಾ ಸಾಮಗ್ರಿಗಳನ್ನು ಹೊಂದಿರುವದು ಅಧ್ಯಯನದಿಂದ ಕಂಡುಬರುತ್ತದೆ.

**7. ಆಂಗ್ಲ ಮಾಧ್ಯಮ ಇರದ ಶಿಕ್ಷಕರಿಗೆ ಆಂಗ್ಲ(ಇಂಗ್ಲೀಷ) ತರಬೇತಿ ನೀಡಲಾಗಿದೆಯೇ ?**

ಗ್ರಾಮೀಣ ಪ್ರದೇಶದ ಪ್ರತಿಭಾವಂತ ಮಕ್ಕಳಿಗೆ ಆಂಗ್ಲ ಮಾಧ್ಯಮದಲ್ಲಿ ಶಿಕ್ಷಣ ನೀಡುವ ಉದ್ದೇಶ ಹೊಂದಿದ ಆದರ್ಶ ವಿದ್ಯಾಲಯಗಳಲ್ಲಿ ಶಿಕ್ಷಣ ಪರಿಣಾಮಕಾರಿಯಾಗಲು ಶಿಕ್ಷಕರಿಗೆ ಹೊಸ ಹೊಸ ಬದಲಾವಣೆಗಳನ್ನು ತಿಳಿದುಕೊಳ್ಳಲು ಮತ್ತು ತಮ್ಮ ಬೋಧನೆಯಲ್ಲಿ ಅಳವಡಿಸಿಕೊಳ್ಳಲು ಹಾಗೂ ಆಂಗ್ಲ ಮಾಧ್ಯಮ ಇರದ ಶಿಕ್ಷಕರ ನಿಯೋಜನೆ ಆಗಿದ್ದರೆ ಅಂಥ ಶಿಕ್ಷಕರಿಗೆ ಆಂಗ್ಲ(ಇಂಗ್ಲೀಷ) ತರಬೇತಿ ನೀಡಲಾಗಿದೆಯೇ ಎಂಬುದನ್ನು ಗಮನದಲ್ಲಿಟ್ಟು ಈ ಪ್ರಶ್ನೆ ಹೇಳಿಕೆಯನ್ನು ಕೇಳಲಾಗಿದ್ದು, ಇದಕ್ಕೆ **ಶೇ.14.3% ಪ್ರತಿಶತ** ಆದರ್ಶ ವಿದ್ಯಾಲಯಗಳಲ್ಲಿ ತರಬೇತಿ ಆಗಿರುವುದಾಗಿ ಅಧ್ಯಯನದಿಂದ ತಿಳಿದುಬರುತ್ತದೆ.

**8. ಗ್ರಾಮೀಣ ಪ್ರತಿಭಾವಂತ ವಿದ್ಯಾರ್ಥಿಗಳಲ್ಲದೆ ನಗರ ವಿದ್ಯಾರ್ಥಿಗಳಿಗೂ ದಾಖಲಾತಿ ನೀಡಲಾಗಿದೆಯೇ ?**

ಆದರ್ಶ ವಿದ್ಯಾಲಯಗಳು ಸ್ಥಾಪನೆಗೊಂಡಿದ್ದು ಗ್ರಾಮೀಣ ಭಾಗದ ಬಡ ಪ್ರತಿಭಾವಂತ ಮಕ್ಕಳಿಗೆ ಉಚಿತವಾಗಿ ಆಂಗ್ಲ ಮಾಧ್ಯಮದಲ್ಲಿ ಶಿಕ್ಷಣ ನೀಡಿ ಅವರು ಉನ್ನತ ಶಿಕ್ಷಣ ಪಡೆಯಲು ಸಹಕಾರಿಯಾಗಲು. ಪ್ರಯುಕ್ತ ಇದರ ಲಾಭವನ್ನು ಪಡೆಯಲು ನಗರ ಪ್ರದೇಶದ ವಿದ್ಯಾರ್ಥಿಗಳು ದಾಖಲಾತಿ ಪಡೆದಿರುವರೇ ಎಂದು ಗಮನದಲ್ಲಿಟ್ಟು ಈ ಪ್ರಶ್ನೆ ಹೇಳಿಕೆಯನ್ನು ಕೇಳಲಾಗಿದ್ದು, ಇದಕ್ಕೆ **ಶೇ. 92.9% ಪ್ರತಿಶತ** ಆದರ್ಶ ವಿದ್ಯಾಲಯಗಳು **ಹೌದು** ಎಂದು

ಪ್ರತಿಕ್ರಿಯಿಸಿದ್ದು ಮೂಲತ: ಗ್ರಾಮೀಣ ಭಾಗದವರಾಗಿದ್ದು ಈಗ ನಗರ ಪ್ರದೇಶಗಳಲ್ಲಿ ವಾಸವಾಗಿರುವ ನಗರ ಪ್ರದೇಶದ ಮಕ್ಕಳಿಗೂ ಆದರ್ಶ ವಿದ್ಯಾಲಯಗಳಲ್ಲಿ ದಾಖಲಾತಿ ನೀಡಲಾಗಿರುವದು ಈ ಅಧ್ಯಯನದಿಂದ ಕಂಡುಬರುತ್ತದೆ.

**9. ವಿದ್ಯಾರ್ಥಿಗಳಿಗೆ ಸನಿವಾಸ ಇರಲಾರದ್ದು ಅವರ ಶಿಕ್ಷಣದ ಮೇಲೆ ಪರಿಣಾಮ ಬೀರುತ್ತಿದೆಯೇ ?**

ಗ್ರಾಮೀಣ ಭಾಗದಲ್ಲಿ ಇನ್ನೂ ಅನೇಕ ಕಡೆ ಸರಿಯಾಗಿ ಮತ್ತು ಶಾಲಾ ಸಮಯಕ್ಕನುಗುಣವಾಗಿ ಸಾರಿಗೆ ವ್ಯವಸ್ಥೆ ಇರುವುದಿಲ್ಲ. ಆದರ್ಶ ವಿದ್ಯಾಲಯ ಸನಿವಾಸ ಇರದ ಕಾರಣ ಗ್ರಾಮೀಣ ಭಾಗದ ಬೇರೆಬೇರೆ ಊರುಗಳಿಂದ ದಾಖಲಾಗುವ ವಿದ್ಯಾರ್ಥಿಗಳು ಪ್ರತಿದಿನ ಬಂದು ಹೋಗ ಬೇಕಾಗಿರುವುದರಿಂದ ಅವರ ಶಿಕ್ಷಣದ ಮೇಲೆ ಪರಿಣಾಮ ಬೀರುತ್ತಿದೆಯೇ ಎಂಬುದನ್ನು ಗಮನದಲ್ಲಿರಿ ಈ ಪ್ರಶ್ನೆ ಹೇಳಿಕೆಯನ್ನು ಕೇಳಲಾಗಿದ್ದು, ಇದಕ್ಕೆ **ಶೇ. 50% ಪ್ರತಿಶತ** ಆದರ್ಶ ವಿದ್ಯಾಲಯಗಳು ಹೌದು ಎಂದು ಹಾಗೂ **ಶೇ.42.9% ಪ್ರತಿಶತ** ಆದರ್ಶ ವಿದ್ಯಾಲಯಗಳು **ಭಾಗಶ:** ಎಂದು ಪ್ರತಿಕ್ರಿಯಿಸಿದ್ದು ವಿದ್ಯಾರ್ಥಿಗಳ ಶಿಕ್ಷಣದ ಮೇಲೆ ಪರಿಣಾಮ ಬೀರುತ್ತಿರುವದಾಗಿ ಈ ಅಧ್ಯಯನದಿಂದ ಕಂಡುಬರುತ್ತದೆ.

**10. ಕೊಠಡಿಗಳಲ್ಲಿ ಫ್ಯಾನ್ & ವಿದ್ಯುತ್ ದ್ವೀಪಗಳು ಸರಿಯಾಗಿ ಕಾರ್ಯನಿರ್ವಹಿಸುತ್ತವೆಯೇ ?**

**ಶೇ. 92.9% ಪ್ರತಿಶತ** ಆದರ್ಶ ವಿದ್ಯಾಲಯಗಳ ಕೊಠಡಿಗಳಲ್ಲಿ ಫ್ಯಾನ್ & ವಿದ್ಯುತ್ ದ್ವೀಪಗಳು ಸರಿಯಾಗಿ ಕಾರ್ಯ ನಿರ್ವಹಿಸುತ್ತವೆ ಹಾಗೂ **ಶೇ.7.1% ಪ್ರತಿಶತ** ಆದರ್ಶ ವಿದ್ಯಾಲಯ ಗಳ **ಭಾಗಶ:** ಕಾರ್ಯನಿರ್ವಹಿಸುತ್ತವೆ ಎಂಬುದು ಅಧ್ಯಯನದಿಂದ ಕಂಡುಬರುತ್ತದೆ.

**11. ವೃತ್ತಿ ಶಿಕ್ಷಣದ ಸಾಮಗ್ರಿಗಳು ಅವಶ್ಯಕತೆಯಷ್ಟು ಇವೆಯೇ ?**

ಆದರ್ಶ ಶಾಲೆಗಳು ವಿದ್ಯಾರ್ಥಿಗಳಿಗೆ ಸಮಗ್ರ ಶಿಕ್ಷಣ ನೀಡುವ ದೂರದೃಷ್ಟಿ ಹೊಂದಿದ್ದು ವೃತ್ತಿ ಶಿಕ್ಷಕರನ್ನು ನೇಮಿಸಿಕೊಂಡು ವೃತ್ತಿ ಶಿಕ್ಷಣ ನೀಡುವುದು ಇದರ ಗುಣಲಕ್ಷಣವಾಗಿರುತ್ತದೆ. ಪ್ರಯುಕ್ತ ವೃತ್ತಿ ಶಿಕ್ಷಣ ಸಾಮಗ್ರಿಗಳು ಅವಶ್ಯಕತೆಯಷ್ಟು ಇರಬೇಕಾಗಿದ್ದು, **ಶೇ. 28.6% ಪ್ರತಿಶತ** ಆದರ್ಶ ವಿದ್ಯಾಲಯಗಳಲ್ಲಿ ಅವಶ್ಯಕತೆಯಷ್ಟು ಹಾಗೂ **ಶೇ.28.6% ಪ್ರತಿಶತ** ಆದರ್ಶ ವಿದ್ಯಾಲಯಗಳಲ್ಲಿ **ಭಾಗಶ:** ವೃತ್ತಿ ಶಿಕ್ಷಣ ಸಾಮಗ್ರಿಗಳು ಇರುವದು ಅಧ್ಯಯನದಿಂದ ಕಂಡುಬರುತ್ತದೆ.

**12. ಗ್ರಂಥಾಲಯದ ವಾತಾವರಣ ವಿದ್ಯಾರ್ಥಿಗಳಲ್ಲಿ ಅನ್ವೇಷಣೆಗೆ ಸಹಾಯಕವಾಗುವಂತೆ ಇದೆಯೇ?**

ವಿದ್ಯಾರ್ಥಿಗಳಿಗೆ ತರಗತಿ ಬೋಧನೆ–ಕಲಿಕೆಯೊಂದಿಗೆ ಗ್ರಂಥಾಲಯದಲ್ಲಿಯ ವಿವಿಧ ಗ್ರಂಥಗಳ ಅಧ್ಯಯನದಿಂದ ಪಡೆದ ಜ್ಞಾನವು ಅವರಿಗೆ ಭವಿಷ್ಯದಲ್ಲಿ ಸ್ಪರ್ಧಾ ಪರೀಕ್ಷೆಗಳಿಗೆ ಹಾಗೂ ದೇಶ, ಸಮಾಜಕ್ಕೂ ಸೇವೆ

ಸಲ್ಲಿಸುವಲ್ಲಿ ಸಹಾಯಕಾರಿಯಾಗುವದು. ಈ ದಿಶೆಯಲ್ಲಿ ಗ್ರಂಥಾಲಯವು ವಿವಿಧ ವಿಷಯದ ಗ್ರಂಥ ಭಂಡಾರವಾಗಿದ್ದು ವಿದ್ಯಾರ್ಥಿಗಳಲ್ಲಿ ಅನ್ವೇಷಣೆ ಪ್ರವೃತ್ತಿ ಮೂಡಿಸಿ ಸಹಾಯಕವಾಗುವಂತೆ ಇರಬೇಕಾಗಿದ್ದು , **ಶೇ. 92.9% ಪ್ರತಿಶತ** ಆದರ್ಶ ವಿದ್ಯಾಲಯಗಳು ಹೀಗೆ ಇರುವುದಾಗಿ ಅಧ್ಯಯನದಿಂದ ಕಂಡುಬರುತ್ತದೆ.

## 13. ಪಠ್ಯ ಬೋಧನೆಯಲ್ಲಿ ಕಂಪ್ಯೂಟರ್ ತಂತ್ರಜ್ಞಾನವನ್ನು ಬಳಸುತ್ತಿರಾ ?

ಇಂದಿನ ವೈಜ್ಞಾನಿಕವಾಗಿ ಮತ್ತು ತಾಂತ್ರಿಕವಾಗಿ ಮುಂದುವರೆದಂಥಹ ಕಾಲದಲ್ಲಿ ಬೋಧನೆ–ಕಲಿಕೆ ಪರಿಣಾಮಕಾರಿಯಾಗಲು ಕಂಪ್ಯೂಟರ್ ತಂತ್ರಜ್ಞಾನವನ್ನು ಪಠ್ಯಬೋಧನೆಯಲ್ಲಿ ಬಳಸುವುದು ಅತೀ ಅವಶ್ಯಕವಾಗಿದ್ದು, **ಶೇ. 85.7% ಪ್ರತಿಶತ** ಆದರ್ಶ ವಿದ್ಯಾಲಯಗಳಲ್ಲಿ ಪಠ್ಯ ಬೋಧನೆಯಲ್ಲಿ ಕಂಪ್ಯೂಟರ್ ತಂತ್ರಜ್ಞಾನವನ್ನು ಬಳಸುತ್ತಿರುವದು ಅಧ್ಯಯನದಿಂದ ಕಂಡುಬರುತ್ತದೆ.

## 14. ಪ್ರೋಜೆಕ್ಟರ್, ಪ್ರಿಂಟರ್, ಇಂಟರ್‌ನೆಟ್ ಕನೆಕ್ಷನ್ ಇದೆಯೇ ?

ಆದರ್ಶ ವಿದ್ಯಾಲಯಗಳು ಕೇಂದ್ರೀಯ ವಿದ್ಯಾಲಯ ಮಾದರಿಯಲ್ಲಿ ಎಲ್ಲ ಸವಲತ್ತುಗಳನ್ನು ಹೊಂದಿ ಶೈಕ್ಷಣಿಕ ವಾತಾವರಣದೊಂದಿಗೆ ಗುಣಾತ್ಮಕ ಶಿಕ್ಷಣ ನೀಡಲು, ಶೈಕ್ಷಣಿಕ ಮತ್ತು ಆಡಳಿತಾತ್ಮಕ ಕಾರ್ಯಗಳು ಶೀಘ್ರವಾಗಿ & ಪರಿಣಾಮಕಾರಿಯಾಗಿ ನಿರ್ವಹಿಸಲು ಪ್ರೋಜೆಕ್ಟರ್, ಪ್ರಿಂಟರ್, ಇಂಟರ್‌ನೆಟ್ ಕನೆಕ್ಷನ್ ಅವಶ್ಯಕವಾಗಿದ್ದು, **ಶೇ. 71.4% ಪ್ರತಿಶತ** ಆದರ್ಶ ವಿದ್ಯಾಲಯಗಳಲ್ಲಿ **ಪೂರ್ಣಪ್ರಮಾಣದಲ್ಲಿ** ಹಾಗೂ **ಶೇ.28.6% ಪ್ರತಿಶತ** ಆದರ್ಶ ವಿದ್ಯಾಲಯಗಳಲ್ಲಿ **ಭಾಗಶಃ** ಈ ಸೌಲಭ್ಯಗಳು ಇರುವುದಾಗಿ ಅಧ್ಯಯನದಿಂದ ಕಂಡುಬರುತ್ತದೆ.

## 15. ವಿಷಯಾಧಾರಿತ ಲ್ಯಾಬ್‌ಗಳು ಕಾರ್ಯನಿರ್ವಹಿಸುತ್ತಿವೆಯೇ ?

ಪ್ರಾಯೋಗಿ ಬೋಧನೆ ಮತ್ತು ಕಲಿಕೆ ವಿದ್ಯಾರ್ಥಿಗಳಲ್ಲಿ ಉತ್ತಮ ಕಲಿಕೆ, ಶೈಕ್ಷಣಿಕ ಪ್ರಗತಿಯನ್ನುಂಟು ಮಾಡುವದು. ಈ ದಿಶೆಯಲ್ಲಿ ವಿಷಯಾಧಾರಿತ ಲ್ಯಾಬ್‌ಗಳ ರಚನೆ ಮತ್ತು ಕಾರ್ಯಚಟುವಟಿಕೆ ಮುಖ್ಯವಾಗಿದ್ದು, **ಶೇ. 71.4% ಪ್ರತಿಶತ** ಆದರ್ಶ ವಿದ್ಯಾಲಯಗಳಲ್ಲಿ **ಪೂರ್ಣ ಪ್ರಮಾಣದಲ್ಲಿ** ಹಾಗೂ **ಶೇ.14.3% ಪ್ರತಿಶತ** ಆದರ್ಶ ವಿದ್ಯಾಲಯಗಳಲ್ಲಿ **ಭಾಗಶಃ** ವಿಷಯಾಧಾರಿತ ಲ್ಯಾಬ್‌ಗಳು ಕಾರ್ಯನಿರ್ವಹಿಸುತ್ತಿರುವದು ಅಧ್ಯಯನದಿಂದ ಕಂಡುಬರುತ್ತದೆ.

## : ವಿದ್ಯಾರ್ಥಿಗಳ ಪ್ರತಿಕ್ರಿಯೆಗಳ ವಿಶ್ಲೇಷಣೆ :

ವಿದ್ಯಾರ್ಥಿಗಳು ಶಾಲೆಯಲ್ಲಿಯ ಪ್ರತಿಯೊಂದು ಚಟುವಟಿಕೆಗಳ ಕೇಂದ್ರ ಬಿಂದುವಾಗಿರುತ್ತಾರೆ. ಮುಗ್ಧವಾದ ಮಕ್ಕಳ ಹೇಳಿಕೆಯಲ್ಲಿ ನೈಜವಾದುದನ್ನು ಕಾಣಬಹುದು. ಆದರೆ ಇವರಿಗೆ ಶಾಲೆಯ ಬಗ್ಗೆ ಅತಿ ಅಭಿಮಾನ ಇರುವುದು ಇವರ ಹೇಳಿಕೆ ಮೇಲೆ ಪ್ರಭಾವ ಬೀರಬಹುದು. ಆದಾಗ್ಯೂ ವಿದ್ಯಾರ್ಥಿಗಳ ಹೇಳಿಕೆಗಳನ್ನು ಪಡೆಯುವ ಉದ್ದೇಶದಿಂದ ಸಂಶೋಧನಾ ಅಧ್ಯಯನ ಉದ್ದೇಶವನ್ನು ಆಧರಿಸಿ 15 ಪ್ರಶ್ನೆಗಳ ಹೇಳಿಕೆಗಳನ್ನು ಒಳಗೊಂಡ ಇಲ್ಲ, ಹೌದು, ಭಾಗಶ: ಎಂಬ ಉತ್ತರವನ್ನು ನಿರೀಕ್ಷಿಸಿ ಪ್ರಶ್ನಾವಳಿಯನ್ನು ನೀಡಿ ಅವುಗಳಲ್ಲಿ ತಮ್ಮ ಅನಿಸಿಕೆಯನ್ನು ಟಿಕ್ ಮಾಡುವ ಮೂಲಕ ನೀಡಲು ತಿಳಿಸಲಾಗಿತ್ತು. ಅದರಂತೆ ಕಲಬುರಗಿ ಜಿಲ್ಲೆಯ ಅಫಜಲಪೂರ, ಆಳಂದ, ಚಿಂಚೋಳಿ, ಚಿತ್ತಾಪೂರ, ಜೇವರ್ಗಿ, ಕಲಬುರಗಿ ದಕ್ಷಿಣ ವಲಯ ಹಾಗೂ ಸೇಡಂ ಈ 7 ತಾಲೂಕಿನಲ್ಲಿರುವ ಆದರ್ಶ ವಿದ್ಯಾಲಯಗಳ, ಪ್ರತಿ ಆದರ್ಶ ವಿದ್ಯಾಲಯದಿಂದ 2 (ಗಂಡು–1, ಹೆಣ್ಣು–1) ವಿದ್ಯಾರ್ಥಿಗಳಂತೆ ಒಟ್ಟು 14 ವಿದ್ಯಾರ್ಥಿಗಳು ಪ್ರತಿಯೊಂದು ಪ್ರಶ್ನೆ ಹೇಳಿಕೆಗೆ ನೀಡಿದ ಪ್ರತಿಕ್ರಿಯೆಯನ್ನು ಕ್ರೋಢೀಕರಿಸಿ ಈ ಕೆಳಗಿನಂತೆ ವಿಶ್ಲೇಷಿಸಲಾಗಿದೆ.

| ವಿದ್ಯಾರ್ಥಿಗಳ ಅಭಿಪ್ರಾಯಗಳ ಪಟ್ಟಿ | | | | | | |
|---|---|---|---|---|---|---|
| ಕ್ರ. ಸಂ. | ನೀಡಿರುವ ಅಂಕಗಳು | | | ಪ್ರತಿಶತ | | |
| | ಇಲ್ಲ | ಹೌದು | ಭಾಗಶ: | ಇಲ್ಲ | ಹೌದು | ಭಾಗಶ: |
| 1 | 12 | 2 | -- | 85.7% | 14.3% | -- |
| 2 | -- | 11 | 3 | -- | 78.6% | 21.4% |
| 3 | 2 | 10 | 2 | 14.3% | 71.4% | 14.3% |
| 4 | -- | 12 | 2 | -- | 85.7% | 14.3% |
| 5 | -- | 13 | 1 | -- | 92.9% | 7.1% |
| 6 | -- | 11 | 3 | -- | 78.6% | 21.4% |
| 7 | -- | 11 | 3 | -- | 78.6% | 21.4% |
| 8 | -- | 13 | 1 | -- | 92.9% | 7.1% |
| 9 | -- | 14 | -- | -- | 100% | -- |
| 10 | 3 | 5 | 6 | 21.4% | 35.7% | 42.9% |
| 11 | 2 | 9 | 3 | 14.3% | 64.3% | 21.4% |
| 12 | -- | 13 | 1 | -- | 92.9% | 7.1% |
| 13 | -- | 14 | -- | -- | 100% | -- |
| 14 | 3 | 8 | 3 | 21.4% | 57.2% | 21.4% |
| 15 | -- | 13 | 1 | -- | 92.9% | 7.1% |

**1. ನಿಮ್ಮ ಆದರ್ಶ ವಿದ್ಯಾಲಯಕ್ಕೆ ಕಂಪೌಂಡ ಇದೆಯೇ ?**

ವಿದ್ಯಾರ್ಥಿಗಳ, ವಿಶಾಲವಾದ ಶಾಲಾ ಕಟ್ಟಡದ ಹಾಗೂ ಶಾಲಾ ಕಟ್ಟಡದಲ್ಲಿರುವ ಸಾಮಗ್ರಿಗಳ ಸುರಕ್ಷತೆಗಾಗಿ ಕಂಪೌಂಡ ಅವಶ್ಯಕವಾಗಿದ್ದು, **ಶೇ.14.3% ಪ್ರತಿಶತ** ಆದರ್ಶ ವಿದ್ಯಾಲಯಗಳಿಗೆ ಕಂಪೌಂಡ ಇರುವದು ಈ ಅಧ್ಯಯನದಿಂದ ಕಂಡು ಬರುತ್ತದೆ.

**2. ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಇದೆಯೇ ?**

ಆದರ್ಶ ವಿದ್ಯಾಲಯಗಳ ವಿದ್ಯಾರ್ಥಿಗಳು ಬೇರೆಬೇರೆ ಊರುಗಳಿಂದ ಪ್ರತಿದಿನ ಪ್ರಯಾಣಿಸಿ ಬರುತ್ತಿರುವುದರಿಂದ ಅವರು ನಗರ ಪ್ರದೇಶದ ಮಕ್ಕಳಂತೆ ತಮ್ಮೊಂದಿಗೆ ಕುಡಿಯುವ ನೀರನ್ನು ಮನೆಯಿಂದ ತರುವದು ಕಷ್ಟಕರ. ವಿದ್ಯಾರ್ಥಿಗಳ ಆರೋಗ್ಯದ ದೃಷ್ಟಿಯಿಂದ ಶಾಲೆಯಲ್ಲಿ ಶುದ್ಧ ಕುಡಿಯುವ ನೀರಿನ ಅವಶ್ಯಕತೆಯಿದ್ದು, **ಶೇ. 78.6% ಪ್ರತಿಶತ** ಆದರ್ಶ ವಿದ್ಯಾಲಯಗಳಲ್ಲಿ ವ್ಯವಸ್ಥೆ ಇದ್ದು ಹಾಗೂ **ಶೇ.21.4% ಪ್ರತಿಶತ** ಆದರ್ಶ ವಿದ್ಯಾಲಯಗಳಲ್ಲಿ **ಭಾಗಶ:** ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಇರುವದು ಅಧ್ಯಯನದಿಂದ ಕಂಡುಬರುತ್ತದೆ.

**3. ಶಾಲೆಯ ಶೌಚಾಲಯವನ್ನು ಬಳಸುತ್ತಿದ್ದಿರಾ ?**

ವಿದ್ಯಾರ್ಥಿಗಳ ಆರೋಗ್ಯ ಹಾಗೂ ಸ್ವಚ್ಛತೆಯ ದೃಷ್ಟಿಯಿಂದ ಶಾಲೆಗಳಲ್ಲಿ ಶೌಚಾಲಯದ ಅವಶ್ಯಕತೆ ಬಹಳವಿದೆ. ಅನೇಕ ಕಡೆ ಶಾಲೆಗಳಲ್ಲಿ ಶೌಚಾಲಯಗಳಿದ್ದರೂ ನಿರ್ವಹಣೆಯ ಸಮಸ್ಯೆಯಿಂದ ಅವುಗಳನ್ನು ಬಳಸದೇ ಇರುವದು ಕಂಡುಬರುತ್ತದೆ. ಇದನ್ನು ಗಮನದಲ್ಲಿಟ್ಟು ಈ ಪ್ರಶ್ನೆಯನ್ನು ಕೇಳಲಾಗಿದ್ದು ಇದಕ್ಕೆ **ಶೇ.71.4% ಪ್ರತಿಶತ** ಆದರ್ಶ ವಿದ್ಯಾಲಯಗಳಲ್ಲಿ ಬಳಸುತ್ತಿರುವದಾಗಿ ಹಾಗೂ **ಶೇ.14.3% ಪ್ರತಿಶತ** ಆದರ್ಶ ವಿದ್ಯಾಲಯಗಳಲ್ಲಿ **ಭಾಗಶ:** ಶೌಚಾಲಯವನ್ನು ಬಳಸುತ್ತಿರುವದು ಅಧ್ಯಯನದಿಂದ ಕಂಡು ಬರುತ್ತದೆ.

**4. ವಿಜ್ಞಾನ ಲ್ಯಾಬ್‌ನ್ನು ಕಲಿಕೆಗಾಗಿ ಬಳಸಲಾಗುತ್ತಿದೆಯಾ ?**

ವಿದ್ಯಾರ್ಥಿಗಳಲ್ಲಿ ವೈಜ್ಞಾನಿಕ ಕಲಿಕೆ ಹಾಗೂ ಅನ್ವೇಷಣಾ ಪ್ರವೃತಿ ಬೆಳೆಯಲು ವಿಜ್ಞಾನ ಲ್ಯಾಬ್‌ನ ಕ್ರಿಯಾತ್ಮಕ & ಸೃಜನಾತ್ಮಕ ಬಳಕೆ ಮುಖ್ಯವಾಗಿದ್ದು, **ಶೇ. 85.7% ಪ್ರತಿಶತ** ಆದರ್ಶ ವಿದ್ಯಾಲಯಗಳಲ್ಲಿ ಬಳಸಲಾಗುತ್ತಿದ್ದು **ಶೇ. 14.3% ಪ್ರತಿಶತ** ಆದರ್ಶ ವಿದ್ಯಾಲಯಗಳಲ್ಲಿ **ಭಾಗಶ:** ಬಳಸಲಾಗುತ್ತಿರುವದು ಈ ಅಧ್ಯಯನದಿಂದ ಕಂಡುಬರುತ್ತದೆ.

**5. ಮ್ಯಾಪ್, ಗ್ಲೋಬ್, ಚಾರ್ಟ್ಸ್ ಇತ್ಯಾದಿ ಸಮಾಜ ವಿಜ್ಞಾನ ವಿಷಯಕ್ಕೆ ಸಂಬಂಧಿಸಿದ ಕಲಿಕೋಪಕರಣಗಳು ಇವೆಯೇ ?**

ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿಗೆ / ಉತ್ತಮ ಬೋಧನೆ ಮತ್ತು ಕಲಿಕೆಗೆ ವಿಜ್ಞಾನ ವಿಷಯದಷ್ಟೇ ಸಮಾಜ ವಿಜ್ಞಾನ ವಿಷಯವು ಮುಖ್ಯ. ಸಮಾಜ ವಿಜ್ಞಾನ ವಿಷಯದ ಬೋಧನೆ ಮತ್ತು ಕಲಿಕೆ ಪರಿಣಾಮಕಾರಿಯಾಗಲು ಮ್ಯಾಪ್, ಗ್ಲೋಬ್, ಚಾರ್ಟ್ಸ್ ಇತ್ಯಾದಿ ಕಲಿಕೋಪಕರಣಗಳು ಅತಿ ಅವಶ್ಯಕವಾಗಿದ್ದು, **ಶೇ. 92.9% ಪ್ರತಿಶತ** ಆದರ್ಶ ವಿದ್ಯಾಲಯಗಳು ಈ ಕಲಿಕೋಪಕರಣಗಳನ್ನು ಹೊಂದಿರುವದು ಹಾಗೂ **ಶೇ.7.1% ಪ್ರತಿಶತ** ಆದರ್ಶ ವಿದ್ಯಾಲಯಗಳು **ಭಾಗಶ:** ಹೊಂದಿರುವದು ಈ ಅಧ್ಯಯನದಿಂದ ಕಂಡು ಬರುತ್ತದೆ.

**6. ಕ್ರೀಡೆ ಮತ್ತು ಒಳಾಂಗಣ (ಸಹಪಠ್ಯ) ಚಟುವಟಿಕೆಗಳು ನಡೆಯುತ್ತವೆಯೇ ?**

ಬೋಧನೆಯೊಂದಿಗೆ ಕ್ರೀಡೆ ಮತ್ತು ಸಹಪಠ್ಯ ಚಟುವಟಿಕೆಯನ್ನು ಒಳಗೊಂಡಿರುವದು ಆದರ್ಶ ವಿದ್ಯಾಲಯದ ಲಕ್ಷಣವಾಗಿದ್ದು, **ಶೇ.78.6% ಪ್ರತಿಶತ** ಆದರ್ಶ ವಿದ್ಯಾಲಯಗಳಲ್ಲಿ ಇವುಗಳನ್ನು ಹಮ್ಮಿಕೊಳ್ಳುತ್ತಿರುವದು ಹಾಗೂ **ಶೇ.21.4% ಪ್ರತಿಶತ** ಆದರ್ಶ ವಿದ್ಯಾಲಯಗಳು **ಭಾಗಶ:** ಹಮ್ಮಿಕೊಳ್ಳುತ್ತಿರುವದು ಅಧ್ಯಯನದಿಂದ ಕಂಡುಬರುತ್ತದೆ.

**7. ವಿಷಯಾಧಾರಿತ ಶಿಕ್ಷಕರು ಇದ್ದಾರೆಯೇ ?**

ಆದರ್ಶ ವಿದ್ಯಾಲಯ ಗ್ರಾಮೀಣ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಉತ್ತಮ ಶಿಕ್ಷಣವನ್ನು ಒದಗಿಸುವ ಉದ್ದೇಶದೊಂದಿಗೆ ಪ್ರಾರಂಭವಾಗಿರುವಂಥದ್ದು. ಮಕ್ಕಳ ಶೈಕ್ಷಣಿಕ ಪ್ರಗತಿಗೆ ಎಲ್ಲ ವಿಷಯದ ಶಿಕ್ಷಕರು ಅವಶ್ಯಕವಾಗಿದ್ದು, **ಶೇ.78.6% ಪ್ರತಿಶತ** ಆದರ್ಶ ವಿದ್ಯಾಲಯಗಳು ವಿಷಯಾಧಾರಿತ ಶಿಕ್ಷಕರನ್ನು ಹೊಂದಿದ್ದು **ಶೇ.21.4% ಪ್ರತಿಶತ** ಆದರ್ಶ ವಿದ್ಯಾಲಯಗಳು **ಭಾಗಶ:** ಹೊಂದಿರುವದು ಈ ಅಧ್ಯಯನದಿಂದ ಕಂಡುಬರುತ್ತದೆ.

**8. ಶಿಕ್ಷಕರು ಆಂಗ್ಲ ಮಾಧ್ಯಮದಲ್ಲಿ ಬೋಧಿಸುವರೇ ?**

ಗ್ರಾಮೀಣ ಪ್ರದೇಶದ ಬಡ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಆಂಗ್ಲ ಮಾಧ್ಯಮದಲ್ಲಿ ಉಚಿತ ಶಿಕ್ಷಣ ನೀಡುವದು ಆದರ್ಶ ವಿದ್ಯಾಲಯಗಳ ಉದ್ದೇಶವಾಗಿದ್ದು 5ನೇ ತರಗತಿವರೆಗೆ ಕನ್ನಡ ಮಾಧ್ಯಮದಲ್ಲಿ ಅಭ್ಯಸಿಸಿದ ಮಕ್ಕಳು 6ನೇ ತರಗತಿಗೆ ಸ್ಪರ್ಧಾ ಪರೀಕ್ಷೆಯಿಂದ ಆಯ್ಕೆಯಾಗಿ ಇಲ್ಲಿ ದಾಖಲಾತಿಯನ್ನು ಪಡೆಯುವರು. ಪ್ರಯುಕ್ತ ಕನ್ನಡ ಮಾಧ್ಯಮದಿಂದ ಬಂದಂತ ಮಕ್ಕಳಿಗೆ ತಿಳಿಯಲು ಅನುಕೂಲವಾಗಲೆಂದು ಕನ್ನಡದಲ್ಲೇ ಬೋಧಿಸುವರೇ ಅಥವಾ ಆದರ್ಶ ವಿದ್ಯಾಲಯದ ಉದ್ದೇಶದಂತೆ ಶಿಕ್ಷಕರು ಆಂಗ್ಲ ಮಾಧ್ಯಮದಲ್ಲಿ ಬೋಧಿಸುವರೇ ಎಂದು

ಗಮನದಲ್ಲಿಟ್ಟು ಈ ಪ್ರಶ್ನೆ ಹೇಳಿಕೆಯನ್ನು ಕೇಳಲಾಗಿತ್ತು. ಇದಕ್ಕೆ **ಶೇ. 92.9% ಪ್ರತಿಶತ** ಆದರ್ಶ ವಿದ್ಯಾಲಯಗಳು ಆಂಗ್ಲ ಮಾಧ್ಯಮದಲ್ಲಿ ಬೋಧಿಸುವರೆಂದು **ಶೇ.7.1% ಪ್ರತಿಶತ** ಆದರ್ಶ ವಿದ್ಯಾಲಯಗಳು **ಭಾಗಶ:** ಬೋಧಿಸುವರೆಂದು ಈ ಅಧ್ಯಯನದಿಂದ ಕಂಡುಬರುತ್ತದೆ.

### 9. ಉಚಿತ ಪಠ್ಯಪುಸ್ತಕ, ಸಮವಸ್ತ್ರ, ಮಧ್ಯಾಹ್ನದ ಬಿಸಿಯೂಟವನ್ನು ಪೂರೈಸಲಾಗುತ್ತಿದೆಯೇ ?

ಎಲ್ಲ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ವಿದ್ಯಾರ್ಥಿಗಳಿಗೆ ಉಚಿತ ಪಠ್ಯಪುಸ್ತಕ, ಸಮವಸ್ತ್ರ, ಮಧ್ಯಾಹ್ನದ ಬಿಸಿಯೂಟ ಪೂರೈಸಲಾಗುತ್ತಿದೆ. ಅದೇ ರೀತಿ ಆದರ್ಶ ವಿದ್ಯಾಲಯಗಳಲ್ಲಿ ಗ್ರಾಮೀಣ ಬಡ ಪ್ರತಿಭಾವಂತ ಮಕ್ಕಳು ದಾಖಲಾತಿ ಪಡೆಯುತ್ತಿದ್ದು ಈ ಮಕ್ಕಳಿಗೂ ಮೇಲಿನ ಎಲ್ಲ ಸವಲತ್ತುಗಳು **ಶೇ.100% ಪ್ರತಿಶತ** ಆದರ್ಶ ವಿದ್ಯಾಲಯಗಳಲ್ಲಿ ಪೂರೈಕೆಯಾಗುತ್ತಿರುವದು ಕಂಡುಬರುತ್ತದೆ.

### 10. ಸರಿಯಾದ ಸಮಯಕ್ಕೆ ಶಾಲೆಗೆ ಪ್ರತಿದಿನ ಬಂದು ಹೋಗಲು ಸಾರಿಗೆ ಸೌಲಭ್ಯ ಇದೆಯೇ ?

ಆದರ್ಶ ವಿದ್ಯಾಲಯಗಳು Day Schools ಆಗಿರುವುದರಿಂದ ಬೇರೆಬೇರೆ ಗ್ರಾಮಗಳಿಂದ ಪ್ರತಿದಿನ ವಿದ್ಯಾರ್ಥಿಗಳು ಬಸ್ಸ ಪ್ರಯಾಣ ಮಾಡಿ ಬಂದು ಕಲಿಯಬೇಕಾಗಿರುತ್ತದೆ. **ಶೇ.35.7% ಪ್ರತಿಶತ** ಆದರ್ಶ ವಿದ್ಯಾಲಯಗಳಿಗೆ ದೂರದ ಗ್ರಾಮಗಳಿಂದ ಶಾಲೆಯ ಸಮಯಕ್ಕೆ ಸರಿಯಾಗಿ ಬಂದು ಹೋಗಲು ಸಾರಿಗೆ ಸೌಲಭ್ಯ ಇರುವದು ಹಾಗೂ **ಶೇ.42.9% ಪ್ರತಿಶತ** ಆದರ್ಶ ವಿದ್ಯಾಲಯಗಳಿಗೆ **ಭಾಗಶ:** ಸೌಲಭ್ಯ ಇರುವದು ಅಧ್ಯಯನದಿಂದ ಕಂಡು ಬರುತ್ತದೆ.

### 11. ವೃತ್ತಿ ಶಿಕ್ಷಣದ ಸಾಮಗ್ರಿಗಳ ಬಳಕೆ ಆಗುತ್ತಿದೆಯೇ ?

ವಿದ್ಯಾರ್ಥಿಗಳಲ್ಲಿ ಶಿಕ್ಷಣದೊಂದಿಗೆ ಇತರ ಕೌಶಲ್ಯವನ್ನು ರೂಢಿಸಲು ಆದರ್ಶ ವಿದ್ಯಾಲಯಗಳಲ್ಲಿ ಖರೀದಿಸಿದ ವೃತ್ತಿ ಶಿಕ್ಷಣ ಸಾಮಗ್ರಿಗಳನ್ನು ಬಳಸಲಾಗುತ್ತಿದೆಯೇ ಎಂದು ಗಮನದಲ್ಲಿಟ್ಟು ಕೇಳಲಾದ ಈ ಪ್ರಶ್ನೆ ಹೇಳಿಕೆಗೆ **ಶೇ.64.3% ಪ್ರತಿಶತ** ಆದರ್ಶ ವಿದ್ಯಾಲಯಗಳಲ್ಲಿ ಬಳಕೆ ಆಗುತ್ತಿರುವದು ಹಾಗೂ **ಶೇ.21.4% ಪ್ರತಿಶತ** ಆದರ್ಶ ವಿದ್ಯಾಲಯಗಳಲ್ಲಿ **ಭಾಗಶ:** ಬಳಕೆಯಾಗುತ್ತಿರುವದು ಅಧ್ಯಯನದಿಂದ ಕಂಡು ಬರುತ್ತದೆ.

### 12. ಗ್ರಂಥಾಲಯದಲ್ಲಿಯ ಪುಸ್ತಕಗಳನ್ನು ಬಳಸಲು/ಓದಲು ಕೊಡಲಾಗುತ್ತಿದೆಯೇ ?

ಮಕ್ಕಳಲ್ಲಿ ತರಗತಿ ಕಲಿಕೆಯೊಂದಿಗೆ ಹೆಚ್ಚಿನ ಇತರ ಜ್ಞಾನವನ್ನು ಪಡೆಯಲು ಹಾಗೂ ಅವರಲ್ಲಿ ಅನ್ವೇಷಣೆ ಮನೋಭಾವ ಮೂಡಲು ಗ್ರಂಥಾಲಯದಲ್ಲಿಯ ಪುಸ್ತಕಗಳನ್ನು ಓದುವ ಚಟ ಮಕ್ಕಳಲ್ಲಿ ರೂಢಿಸಬೇಕಾಗುತ್ತದೆ. **ಶೇ.92.9% ಪ್ರತಿಶತ** ಆದರ್ಶ ವಿದ್ಯಾಲಯಗಳಲ್ಲಿ ಗ್ರಂಥಾಲಯ ದಲ್ಲಿಯ ಪುಸ್ತಕಗಳನ್ನು

ಬಳಸಲು/ಓದಲು ಕೊಡಲಾಗುತ್ತಿರುವುದು ಹಾಗೂ **ಶೇ.7.1% ಪ್ರತಿಶತ** ಆದರ್ಶ ವಿದ್ಯಾಲಯಗಳಲ್ಲಿ **ಭಾಗಶ:** ಕೊಡಲಾಗುತ್ತಿರುವದು ಅಧ್ಯಯನದಿಂದ ಕಂಡು ಬರುತ್ತದೆ.

## 13. ಮಕ್ಕಳಿಗೆ, ಶಿಕ್ಷಕರಿಗೆ ಮತ್ತು ಸಿಬ್ಬಂದಿಗೆ ಎಲ್ಲರಿಗೂ ಆಸನ ವ್ಯವಸ್ಥೆ ಇದೆಯೇ ?

**ಶೇ. 100% ಪ್ರತಿಶತ** ಆದರ್ಶ ವಿದ್ಯಾಲಯಗಳಲ್ಲಿ ಮಕ್ಕಳಿಗೆ, ಶಿಕ್ಷಕರಿಗೆ ಮತ್ತು ಸಿಬ್ಬಂದಿಗೆ ಎಲ್ಲರಿಗೂ ಆಸನ ವ್ಯವಸ್ಥೆ ಇರುವದು ಅಧ್ಯಯನದಿಂದ ಕಂಡುಬರುತ್ತದೆ.

## 14. ಶಿಕ್ಷಕರು ತಮ್ಮ ವಿಷಯ ಬೋಧನೆಯಲ್ಲಿ ಕಂಪ್ಯೂಟರ್ ತಂತ್ರಜ್ಞಾನವನ್ನು ಬಳಸುವರೇ ?

ಶಿಕ್ಷಕರು ತಮ್ಮ ವಿಷಯವನ್ನು ಪರಿಣಾಮಕಾರಿಯಾಗಿ, ಆಸಕ್ತಿದಾಯಕವಾಗಿ ಬೋಧಿಸಲು ಮತ್ತು ಮಕ್ಕಳಲ್ಲಿ ಉತ್ತಮ ಕಲಿಕೆಯನ್ನು ಮೂಡಿಸಲು ಪಠ್ಯಪುಸ್ತಕದೊಂದಿಗೆ ಕಂಪ್ಯೂಟರ್ ತಂತ್ರಜ್ಞಾನವನ್ನು ಬಳಸುವುದು ತುಂಬಾ ಅವಶ್ಯಕವಾಗಿದ್ದು, **ಶೇ. 57.2% ಪ್ರತಿಶತ** ಆದರ್ಶ ವಿದ್ಯಾಲಯಗಳ ಶಿಕ್ಷಕರು ತಮ್ಮ ವಿಷಯ ಬೋಧನೆಯಲ್ಲಿ ಕಂಪ್ಯೂಟರ್ ತಂತ್ರಜ್ಞಾನವನ್ನು ಬಳಸುವದು ಹಾಗೂ **ಶೇ.21.4% ಪ್ರತಿಶತ** ಆದರ್ಶ ವಿದ್ಯಾಲಯಗಳ ಶಿಕ್ಷಕರು **ಭಾಗಶ:** ಬಳಸುತ್ತಿರುವದು ಅಧ್ಯಯನದಿಂದ ಕಂಡುಬರುತ್ತದೆ.

## 15. ವಿದ್ಯುತ್ ವ್ಯವಸ್ಥೆ ಇದೆಯೇ ?

ಕಂಪ್ಯೂಟರ್ ತಂತ್ರಜ್ಞಾನ ಬಳಕೆ, ಲ್ಯಾಬ್‌ಗಳ ಚಟುವಟಿಕೆಗಳಿಗೆ, ಫ್ಯಾನ್, ಲೈಟ್, ಸಿಸಿ ಕ್ಯಾಮರಾ ಇತ್ಯಾದಿ ಶೈಕ್ಷಣಿಕ ಚಟುವಟಿಕೆ ಹಾಗೂ ಶಾಲೆಯಲ್ಲಿಯ ಮೂಲಭೂತ ಸೌಕಯಗಳನ್ನು ಸಮರ್ಪಕವಾಗಿ ಬಳಸಿಕೊಳ್ಳಲು ವಿದ್ಯುತ್ ಅತಿ ಅವಶ್ಯಕವಾಗಿದ್ದು, **ಶೇ.92.9% ಪ್ರತಿಶತ** ಆದರ್ಶ ವಿದ್ಯಾಲಯಗಳಲ್ಲಿ **ಪೂರ್ಣ ಪ್ರಮಾಣದಲ್ಲಿ** ಹಾಗೂ **ಶೇ.7.1% ಪ್ರತಿಶತ** ಆದರ್ಶ ವಿದ್ಯಾಲಯಗಳಲ್ಲಿ **ಭಾಗಶ:** ವಿದ್ಯುತ ವ್ಯವಸ್ಥೆ ಇರುವದು ಅಧ್ಯಯನದಿಂದ ಕಂಡು ಬರುತ್ತದೆ.

## : ಪಾಲಕರ ಪ್ರತಿಕ್ರಿಯೆಗಳ ವಿಶ್ಲೇಷಣೆ :

ಶಾಲಾ ಅಭಿವೃದ್ಧಿ ಕಾರ್ಯಗಳು ಹಾಗೂ ಶಾಲಾ ಚಟುವಟಿಕೆಗಳು ಸುಸೂತ್ರವಾಗಿ ನಡೆಯಲು ಹಾಗೂ ಮಕ್ಕಳ ಶೈಕ್ಷಣಿಕ ಪ್ರಗತಿಯಲ್ಲಿ ಪಾಲಕರ ಪಾತ್ರವು ಪ್ರಮುಖವಾಗಿರುತ್ತದೆ. ಇವರ ಮಕ್ಕಳು ಶಾಲೆಯಲ್ಲಿ ಅಭ್ಯಸಿಸುವುದರಿಂದ ಶಾಲೆಯೊಂದಿಗೆ ಸಂಪರ್ಕದಲ್ಲಿರುವರು. ಪಾಲಕರ ಪ್ರತಿನಿಧಿಯಾದ ಎಸ್.ಡಿ.ಎಮ್.ಸಿ ಶಾಲೆಯ ಪ್ರಗತಿಗೆ ಪ್ರಯತ್ನಿಸುವರು ಹಾಗೂ ಶಾಲೆಯ ಬಗ್ಗೆ ಸರಿಯಾದ ತಿಳುವಳಿಕೆಯನ್ನು ಹೊಂದಿರುವರು.

ಪ್ರಯುಕ್ತ ಆದರ್ಶ ವಿದ್ಯಾಲಯಗಳ ವಸ್ತುಸ್ಥಿಯನ್ನು ಅರಿಯುವಲ್ಲಿ ಪಾಲಕರ ಪ್ರತಿಕ್ರಿಯೆಗಳನ್ನು ಪಡೆಯಲು ಕಲಬುರಗಿ ಜಿಲ್ಲೆಯ ಅಫಜಲಪೂರ, ಆಳಂದ, ಚಿಂಚೋಳಿ, ಚಿತ್ತಾಪೂರ, ಜೇವರ್ಗಿ, ಕಲಬುರಗಿ ದಕ್ಷಿಣ ವಲಯ ಹಾಗೂ ಸೇಡಂ ಈ 7 ತಾಲೂಕಿನ ಆದರ್ಶ ವಿದ್ಯಾಲಯಗಳ, ಪ್ರತಿ ಆದರ್ಶ ವಿದ್ಯಾಲಯದಿಂದ 2 ಪಾಲಕರಂತೆ ಒಟ್ಟು 14 ಪಾಲಕರಿಗೆ ಸಂಶೋಧನಾ ಅಧ್ಯಯನದ ಉದ್ದೇಶವನ್ನು ಆಧರಿಸಿ 15 ಪ್ರಶ್ನೆಗಳ ಹೇಳಿಕೆಗಳನ್ನು ಒಳಗೊಂಡ ಇಲ್ಲ, ಹೌದು, ಭಾಗಶ: ಎಂಬ ಉತ್ತರವನ್ನು ನಿರೀಕ್ಷಿಸಿ ಪ್ರಶ್ನಾವಳಿಯನ್ನು ನೀಡಿ ಅವುಗಳಲ್ಲಿ ತಮ್ಮ ಅಭಿಪ್ರಾಯವನ್ನು ಟಿಕ್ ಮಾಡುವ ಮೂಲಕ ನೀಡಲು ತಿಳಿಸಲಾಗಿತ್ತು. ಅದರಂತೆ ಪಾಲಕರು ಪ್ರತಿ ಪ್ರಶ್ನೆ ಹೇಳಿಕೆಗಳಿಗೆ ನೀಡಿದ್ದ ಉತ್ತರವನ್ನು ಕ್ರೋಢೀಕರಿಸಿ ಈ ಕೆಳಗಿನಂತೆ ವಿಶ್ಲೇಷಿಸಲಾಗಿದೆ.

| ಪಾಲಕರ ಅಭಿಪ್ರಾಯದ ಪಟ್ಟಿ | | | | | | |
|---|---|---|---|---|---|---|
| ಕ್ರ. ಸಂ. | ನೀಡಿರುವ ಅಂಕಗಳು | | | ಪ್ರತಿಶತ | | |
| | ಇಲ್ಲ | ಹೌದು | ಭಾಗಶ: | ಇಲ್ಲ | ಹೌದು | ಭಾಗಶ: |
| 1 | -- | 14 | -- | -- | 100% | -- |
| 2 | -- | 12 | 2 | -- | 85.7% | 14.3% |
| 3 | -- | 14 | -- | -- | 100% | -- |
| 4 | -- | 14 | -- | -- | 100% | -- |
| 5 | -- | 13 | 1 | -- | 92.9% | 7.1% |
| 6 | -- | 9 | 5 | -- | 64.3% | 35.7% |
| 7 | -- | 13 | 1 | -- | 92.9% | 7.1% |
| 8 | -- | 14 | -- | -- | 100% | -- |
| 9 | 3 | 9 | 2 | 21.4% | 64.3% | 14.3% |
| 10 | -- | 13 | 1 | -- | 92.9% | 7.1% |
| 11 | 5 | 7 | 2 | 35.7% | 50% | 14.3% |
| 12 | 5 | 7 | 2 | 35.7% | 50% | 14.3% |
| 13 | -- | 11 | 3 | -- | 78.6% | 21.4% |
| 14 | -- | 14 | -- | -- | 100% | -- |
| 15 | 5 | 8 | 1 | 35.7% | 57.2% | 7.1% |

## 1. ಸರ್ಕಾರದ ಯೋಜನೆಯಂತೆ 32 ಸುಸಜ್ಜಿತವಾದ ಕೊಠಡಿಗಳು ಇವೆಯೇ ?

ಸಪ್ಟೆಂಬರ್ 2004 ರಲ್ಲಿ ಸ್ಥಾಪನೆಯಾದ ಕೇಂದ್ರ ಶಿಕ್ಷಣ ಸಲಹಾ ಮಂಡಳಿಯ ಸಪ್ಟೆಂಬರ್ 2005 ರ ವರದಿ ಹಾಗೂ ಯೋಜನಾ ಆಯೋಗದ ಶಿಫಾರಸ್ಸು ಮಾಡಿರುವಂತೆ ಕೇಂದ್ರೀಯ ವಿದ್ಯಾಲಯ ಮಾದರಿಯಲ್ಲಿ ಆದರ್ಶ ವಿದ್ಯಾಲಯಕ್ಕೂ ಮೂಲಭೂತ ಸೌಕರ್ಯಗಳನ್ನು ಹೊಂದಿದ ವಿಶಾಲವಾದ ಕಟ್ಟಡ ಹಾಗೂ ಶಿಕ್ಷಣ ಇಲಾಖೆಯ ವೆಬ್‌ಸೈಟ್‌ನಲ್ಲಿ ಲಭ್ಯವಿರುವ ಮಾಹಿತಿಯಂತೆ 32 ಕೊಠಡಿಗಳನ್ನು ಹೊಂದಿದೆಯೇ ಎಂದು ಗಮನದಲ್ಲಿಟ್ಟು ಕೇಳಲಾದ ಈ ಪ್ರಶ್ನೆ ಹೇಳಿಕೆಗೆ **ಶೇ. 100% ಪ್ರತಿಶತ** ಆದರ್ಶ ವಿದ್ಯಾಲಯಗಳು 32 ಸುಸಜ್ಜಿತವಾದ ಕೊಠಡಿಗಳನ್ನು ಹೊಂದಿದ್ದು ಅಧ್ಯಯನದಿಂದ ಕಂಡು ಬರುತ್ತದೆ.

## 2. ನೀರಿನ ಸ್ವಂತ ಮೂಲ ಇದೆಯೇ ?

ವಿಶಾಲವಾದ ಕಟ್ಟಡ ಹಾಗೂ ಬೃಹತ ಸಂಖ್ಯೆಯ ವಿದ್ಯಾರ್ಥಿ, ಶಿಕ್ಷಕರು ಮತ್ತು ಸಿಬ್ಬಂದಿ ಹೊಂದಿರುವ ಆದರ್ಶ ವಿದ್ಯಾಲಯಗಳಿಗೆ ನೀರಿನ ಅವಶ್ಯಕತೆ ಹೆಚ್ಚಾಗಿರುತ್ತದೆ. ಪ್ರಯುಕ್ತ ನೀರಿನ ಸ್ವಂತ ಮೂಲದ ಅವಶ್ಯಕತೆ ಇದ್ದು, **ಶೇ. 85.7% ಪ್ರತಿಶತ** ಆದರ್ಶ ವಿದ್ಯಾಲಯಗಳಿಗೆ ನೀರಿನ ಸ್ವಂತ ಮೂಲ ಇರುವದು ಹಾಗೂ **ಶೇ.14.3% ಪ್ರತಿಶತ** ಆದರ್ಶ ವಿದ್ಯಾಲಯಗಳಿಗೆ **ಭಾಗಶ:** ಇರುವದು ಅಧ್ಯಯನದಿಂದ ಕಂಡುಬರುತ್ತದೆ.

## 3. ಹೆಣ್ಣು ಮತ್ತು ಗಂಡು ಮಕ್ಕಳಿಗೆ ಪ್ರತ್ಯೇಕ ಶೌಚಾಲಯ ಇದೆಯೇ?

ಆದರ್ಶ ವಿದ್ಯಾಲಯಗಳು ಹೆಣ್ಣು ಮತ್ತು ಗಂಡು ವಿದ್ಯಾರ್ಥಿಗಳನ್ನು ಒಳಗೊಂಡ ಸಹಶಿಕ್ಷಣವನ್ನು ಹೊಂದಿರುತ್ತದೆ. ಹೆಣ್ಣು ಮತ್ತು ಗಂಡು ವಿದ್ಯಾರ್ಥಿಗಳಿಗೆ ಪ್ರತ್ಯೇಕವಾದ ಶೌಚಾಲಯದ ವ್ಯವಸ್ಥೆ **ಶೇ.100% ಪ್ರತಿಶತ** ಆದರ್ಶ ವಿದ್ಯಾಲಯಗಳಲ್ಲಿ ಇರುವದು ಈ ಅಧ್ಯಯನದಿಂದ ಕಂಡು ಬರುತ್ತದೆ.

## 4. ಪೀಠೋಪಕರಣಗಳು ಬಳಸಲು ಯೋಗ್ಯವಾಗಿವೆಯೇ ?

ಸುಸಜ್ಜಿತವಾದ ಪೀಠೋಪಕರಣಗಳನ್ನು ಹೊಂದಿರುವದು ಆದರ್ಶ ವಿದ್ಯಾಲಯಗಳ ಮೂಲಭೂತ ಸೌಕರ್ಯಗಳನ್ನು ಒದಗಿಸುವ ಉದ್ದೇಶಗಳಲ್ಲಿ ಒಂದಾಗಿದ್ದು, 2010–11 ರಲ್ಲಿ ಪ್ರಾರಂಭವಾದ ಆದರ್ಶ ವಿದ್ಯಾಲಯಗಳ ಪೀಠೋಪಕರಣಗಳು **ಶೇ. 100% ಪ್ರತಿಶತ** ಆದರ್ಶ ವಿದ್ಯಾಲಯಗಳಲ್ಲಿ ಬಳಸಲು ಯೋಗ್ಯವಾಗಿರುವದು ಅಧ್ಯಯನದಿಂದ ಕಂಡು ಬರುತ್ತದೆ.

**5. ವಿಷಯಾಧಾರಿತ ಲ್ಯಾಬ್‌ಗಳಲ್ಲಿ ಅವಶ್ಯಕ ಸಾಮಗ್ರಿಗಳು, ಸಲಕರಣೆಗಳು ಇತ್ಯಾದಿ ಅವಶ್ಯಕತೆ ಯಷ್ಟು ಇವೆಯೇ ?**

ಗ್ರಾಮೀಣ ಪ್ರದೇಶದ ಬಡ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ನೀಡಿ ಅವರು ಉನ್ನತ ವ್ಯಾಸಂಗ ಮಾಡಿ ಉಜ್ವಲ ಭವಿಷ್ಯ ನಿರ್ಮಾಣ ಮಾಡಿಕೊಳ್ಳುವ ಉದ್ದೇಶ ಹೊಂದಿರುವ ಆದರ್ಶ ವಿದ್ಯಾಲಯಗಳು ಮಕ್ಕಳ ಶೈಕ್ಷಣಿಕ ಪ್ರಗತಿಯ ದೃಷ್ಟಿಯಿಂದ ವಿಷಯಾಧಾರಿತ ಲ್ಯಾಬ್‌ಗಳನ್ನು ರಚಿಸಿ ಲ್ಯಾಬ್‌ಗಳಲ್ಲಿ ಬೋಧನೆ ಮತ್ತು ಕಲಿಕೆಗೆ ಅವಶ್ಯಕ ಸಾಮಗ್ರಿಗಳು, ಸಲಕರಣೆಗಳು ಇತ್ಯಾದಿ ಅವಶ್ಯಕತೆಯಷ್ಟು ಹೊಂದಿರುವದು ಅವಶ್ಯಕವಾಗಿದ್ದು, **ಶೇ. 92.9% ಪ್ರತಿಶತ** ಆದರ್ಶ ವಿದ್ಯಾಲಯಗಳು ಹೊಂದಿರುವದು ಹಾಗೂ **ಶೇ.7.1% ಪ್ರತಿಶತ** ಆದರ್ಶ ವಿದ್ಯಾಲಯಗಳು **ಭಾಗಶ:** ಹೊಂದಿರುವದು ಅಧ್ಯಯನದಿಂದ ಕಂಡುಬರುತ್ತದೆ.

**6. ಒಳಾಂಗಣ(ಸಹಪಠ್ಯ) ಹಾಗೂ ಹೊರಾಂಗಣ ಕ್ರೀಡಾ ಆಯೋಜನೆಗೆ ಸೌಕರ್ಯಗಳಿವೆಯೇ ?**

ಕೇಂದ್ರ ಶಿಕ್ಷಣ ಸಲಹಾ ಮಂಡಳಿಯು ಮಗುವಿನ ಬೌದ್ಧಿಕ ಬೆಳವಣಿಗೆಯ ಜೊತೆಗೆ ದೈಹಿಕ ಮತ್ತು ಮಾನಸಿಕ ಬೆಳವಣಿಗೆಗೆ ಅವಶ್ಯಕ ಕ್ರೀಡಾ ಮತ್ತು ಪಠ್ಯೇತರ ಚಟುವಟಿಕೆಗೆ ಸುಸಜ್ಜಿತವಾದ ಒಳಾಂಗಣ ಹಾಗೂ ಹೊರಾಂಗಣ ಕ್ರೀಡಾ ಸೌಕರ್ಯಗಳನ್ನು ಒದಗಿಸಲು ಶಿಫಾರಸ್ಸು ಮಾಡಿರುವದನ್ನು ಗಮನದಲ್ಲಿಟ್ಟು ಈ ಪ್ರಶ್ನೆ ಹೇಳಿಕೆಯನ್ನು ಕೇಳಲಾಗಿದ್ದು, **ಶೇ. 64.3% ಪ್ರತಿಶತ** ಆದರ್ಶವಿದ್ಯಾಲಯಗಳು ಹೊಂದಿರುವದು ಹಾಗೂ **ಶೇ. 35.7% ಪ್ರತಿಶತ** ಆದರ್ಶವಿದ್ಯಾಲಯಗಳು ಭಾಗಶ: ಕ್ರೀಡಾ ಸೌಕರ್ಯ ಹೊಂದಿರುವದಾಗಿ ಅಧ್ಯಯನದಿಂದ ಕಂಡು ಬರುತ್ತದೆ.

**7. ಶಿಕ್ಷಕರು ಸಮರ್ಪಣಾ ಮನೋಭಾವದಿಂದ ಕೆಲಸ ಮಾಡುವರೇ ?**

ಶಾಲೆಗಳಲ್ಲಿ ಎಷ್ಟೇ ಸೌಕರ್ಯ, ಸವಲತ್ತುಗಳಿದ್ದರೂ ಶಿಕ್ಷಕರು ಸಮರ್ಪಣಾ ಮನೋಭಾವ ದಿಂದ ಕೆಲಸ ಮಾಡದ ಹೊರತು ಉತ್ತಮ ಪ್ರತಿಫಲ ಪಡೆಯಲು ಸಾಧ್ಯವಿಲ್ಲ. **ಶೇ. 92.9% ಪ್ರತಿಶತ** ಆದರ್ಶ ವಿದ್ಯಾಲಯಗಳ ಶಿಕ್ಷಕರು ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ದೊರಕುವಲ್ಲಿ ಸಮರ್ಪಣಾ ಮನೋಭಾವದಿಂದ ಕಾರ್ಯನಿರ್ವಹಿಸುತ್ತಿರುವದು ಅಧ್ಯಯನದಿಂದ ಕಂಡು ಬರುತ್ತದೆ.

**8. ವಿದ್ಯಾರ್ಥಿಗಳಿಗೆ ಉಚಿತ ಪಠ್ಯಪುಸ್ತಕ, ಸಮವಸ್ತ್ರ, ಮಧ್ಯಾಹ್ನದ ಬಿಸಿಯೂಟವನ್ನು ಪೂರೈಸಲಾಗುತ್ತಿದೆಯೇ?**

ಎಲ್ಲ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ವಿದ್ಯಾರ್ಥಿಗಳಿಗೆ ಉಚಿತ ಪಠ್ಯಪುಸ್ತಕ, ಸಮವಸ್ತ್ರ,

ಮಧ್ಯಾಹ್ನದ ಬಿಸಿಯೂಟ ಪೂರೈಸಲಾಗುತ್ತಿದೆ. ಅದೇ ರೀತಿ ಆದರ್ಶ ವಿದ್ಯಾಲಯಗಳಲ್ಲಿ ಗ್ರಾಮೀಣ ಬಡ ಪ್ರತಿಭಾವಂತ ಮಕ್ಕಳು ದಾಖಲಾತಿ ಪಡೆಯುತ್ತಿದ್ದು ಈ ಮಕ್ಕಳಿಗೂ ಮೇಲಿನ ಎಲ್ಲ ಸವಲತ್ತುಗಳು **ಶೇ.100% ಪ್ರತಿಶತ** ಆದರ್ಶ ವಿದ್ಯಾಲಯಗಳಲ್ಲಿ ಪೂರೈಕೆಯಾಗುತ್ತಿರುವದು ಅಧ್ಯಯನದಿಂದ ಕಂಡುಬರುತ್ತದೆ.

### 9. ವಿದ್ಯಾರ್ಥಿ ಮತ್ತು ಶಿಕ್ಷಕ, ಸಿಬ್ಬಂದಿ ಬರಲು ಸಾರಿಗೆ ವ್ಯವಸ್ಥೆ ಇದೆಯೇ ?

ಆದರ್ಶ ವಿದ್ಯಾಲಯಗಳು Day Schools ಆಗಿರುವುದರಿಂದ ಬೇರೆಬೇರೆ ಗ್ರಾಮಗಳಿಂದ ವಿದ್ಯಾರ್ಥಿಗಳು, ಶಿಕ್ಷಕರು ಮತ್ತು ಸಿಬ್ಬಂದಿಯು ಪ್ರತಿದಿನ ಬಂದು ಹೋಗಲು ಸಾರಿಗೆಯನ್ನು ಅವಲಂಬಿಸಿರುವರು. ಆದರ್ಶ ವಿದ್ಯಾಲಯಗಳು ತಾಲೂಕು ಕೇಂದ್ರದಿಂದ ದೂರವಿರುವದರಿಂದ ವಿದ್ಯಾರ್ಥಿ ಮತ್ತು ಶಿಕ್ಷಕ, ಸಿಬ್ಬಂದಿ ಬರಲು **ಶೇ. 64.3% ಪ್ರತಿಶತ** ಆದರ್ಶ ವಿದ್ಯಾಲಯಗಳಿಗೆ ಸಾರಿಗೆ ವ್ಯವಸ್ಥೆ ಇರುವದು ಹಾಗೂ **ಶೇ.14.3% ಪ್ರತಿಶತ** ಆದರ್ಶ ವಿದ್ಯಾಲಯಗಳಿಗೆ **ಭಾಗಶ:** ಸಾರಿಗೆ ವ್ಯವಸ್ಥೆ ಇರುವದು ಅಧ್ಯಯನದಿಂದ ಕಂಡುಬರುತ್ತದೆ.

### 10. ನೀಡಿರುವ ಅನುದಾನವನ್ನು ಸಮರ್ಪಕವಾಗಿ ಬಳಸಲಾಗುತ್ತಿದೆಯೇ ?

ಪ್ರತಿ ಶಾಲೆಗಳ ಅಭಿವೃದ್ಧಿ ಆ ಶಾಲೆಗೆ ಬಿಡುಗಡೆಯಾಗುವ ಅನುದಾನವನ್ನು ಸಮರ್ಪಕವಾಗಿ ಬಳಸುವದನ್ನು ಅವಲಂಬಿಸಿದೆ. ಅದೇ ರೀತಿ ಆದರ್ಶ ವಿದ್ಯಾಲಯಗಳ ಅಭಿವೃದ್ಧಿ ಮತ್ತು ನಿರ್ವಹಣೆಗಾಗಿ ಪ್ರತಿವರ್ಷ ಸರ್ಕಾರ ಅನುದಾನವನ್ನು ಬಿಡುಗಡೆ ಮಾಡುತ್ತಿದ್ದು, **ಶೇ.92.9% ಪ್ರತಿಶತ** ಆದರ್ಶ ವಿದ್ಯಾಲಯಗಳು ಸಮರ್ಪಕವಾಗಿ ಬಳಸಿಕೊಳ್ಳುತ್ತಿರುವದು ಅಧ್ಯಯನದಿಂದ ಕಂಡುಬರುತ್ತದೆ.

### 11. ಸುಸಜ್ಜಿತವಾದ ಕಂಪ್ಯೂಟರ್ ಲ್ಯಾಬ್ ಇದೆಯೇ ?

ಗ್ರಾಮೀಣ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ನೀಡುವ ಗುರಿ ಹೊಂದಿರುವ ಆದರ್ಶ ವಿದ್ಯಾಲಯಗಳು, ಶಿಕ್ಷಕರು ತಮ್ಮ ವಿಷಯವನ್ನು ಪರಿಣಾಮಕಾರಿಯಾಗಿ, ಆಸಕ್ತಿದಾಯಕವಾಗಿ ಬೋಧಿಸಲು ಮತ್ತು ಮಕ್ಕಳಲ್ಲಿ ಉತ್ತಮ ಕಲಿಕೆಯನ್ನು ಮೂಡಿಸಲು ಪಠ್ಯಪುಸ್ತಕದೊಂದಿಗೆ ಕಂಪ್ಯೂಟರ್ ತಂತ್ರಜ್ಞಾನವನ್ನು ಬಳಸುವುದು ತುಂಬಾ ಅವಶ್ಯಕವಾಗಿರುತ್ತದೆ. ಮಕ್ಕಳ ಶೈಕ್ಷಣಿಕ ಪ್ರಗತಿಗೆ ಕಂಪ್ಯೂಟರ್ ತಂತ್ರಜ್ಞಾನದ ಅವಶ್ಯಕತೆಯಿದ್ದು, **ಶೇ. 50% ಪ್ರತಿಶತ** ಆದರ್ಶ ವಿದ್ಯಾಲಯಗಳಲ್ಲಿ ಸುಸಜ್ಜಿತವಾದ ಕಂಪ್ಯೂಟರ್ ಲ್ಯಾಬ್ ಇರುವದು ಹಾಗೂ **ಶೇ.14.3% ಪ್ರತಿಶತ** ಆದರ್ಶ ವಿದ್ಯಾಲಯಗಳಲ್ಲಿ **ಭಾಗಶ:** ಕಂಪ್ಯೂಟರ್ ಲ್ಯಾಬ್ ಇರುವದು ಅಧ್ಯಯನದಿಂದ ಕಂಡುಬರುತ್ತದೆ.

### 12. ವೃತ್ತಿ ಶಿಕ್ಷಣ ಸಾಮಗ್ರಿಗಳನ್ನು ಸಮರ್ಪಕವಾಗಿ ಬಳಸಲಾಗುತ್ತಿದೆಯೇ ?

ವಿದ್ಯಾರ್ಥಿಗಳಲ್ಲಿ ಶಿಕ್ಷಣದೊಂದಿಗೆ ಇತರ ಕೌಶಲ್ಯವನ್ನು ರೂಢಿಸಲು ಆದರ್ಶ ವಿದ್ಯಾಲಯಗಳಲ್ಲಿ

ಖರೀದಿಸಿದ ವೃತ್ತಿ ಶಿಕ್ಷಣ ಸಾಮಗ್ರಿಗಳನ್ನು ಸಮರ್ಪಕವಾಗಿ ಬಳಸಲಾಗುತ್ತಿದೆಯೇ ಎಂದು ಗಮನದಲ್ಲಿಟ್ಟು ಕೇಳಲಾದ ಈ ಪ್ರಶ್ನೆ ಹೇಳಿಕೆಗೆ **ಶೇ. 50% ಪ್ರತಿಶತ** ಆದರ್ಶ ವಿದ್ಯಾಲಯಗಳಲ್ಲಿ ಬಳಕೆ ಆಗುತ್ತಿರುವದು ಹಾಗೂ **ಶೇ.14.3% ಪ್ರತಿಶತ** ಆದರ್ಶ ವಿದ್ಯಾಲಯಗಳಲ್ಲಿ **ಭಾಗಶ:** ಬಳಕೆಯಾಗುತ್ತಿರುವದು ಅಧ್ಯಯನದಿಂದ ಕಂಡು ಬರುತ್ತದೆ.

**13. ಮೂಲಭೂತ ಸೌಕರ್ಯಗಳು ಉತ್ತಮವಾಗಿವೆಯೇ ?**

ಕೇಂದ್ರೀಯ ವಿದ್ಯಾಲಯ ಮಾದರಿಯಲ್ಲಿ ಮೂಲಭೂತ ಸೌಕರ್ಯಗಳನ್ನು ಒದಗಿಸುವ ಶಿಫಾರಸ್ಸಿನೊಂದಿಗೆ 2010–11 ರಲ್ಲಿ ಪ್ರಾರಂಭವಾದ ಆದರ್ಶ ವಿದ್ಯಾಲಯಗಳ ಮೂಲಭೂತ ಸೌಕರ್ಯಗಳು **ಶೇ.78.6% ಪ್ರತಿಶತ** ಆದರ್ಶ ವಿದ್ಯಾಲಯಗಳಲ್ಲಿ ಉತ್ತಮವಾಗಿರುವದು ಹಾಗೂ ಹಾಗೂ **ಶೇ.21.4% ಪ್ರತಿಶತ** ಆದರ್ಶ ವಿದ್ಯಾಲಯಗಳಲ್ಲಿ **ಭಾಗಶ:** ಇರುವದು ಅಧ್ಯಯನದಿಂದ ಕಂಡುಬರುತ್ತದೆ.

**14. ವಿದ್ಯಾರ್ಥಿಗಳ ಆಯ್ಕೆಯಲ್ಲಿ ನಿಮ್ಮ ತಾಲೂಕಿನ ಮಕ್ಕಳಿಗೆ ಪ್ರಥಮ ಆದ್ಯತೆ ನೀಡಲಾಗಿದೆಯೇ ?**

ಹಿಂದುಳಿದ ಪ್ರತಿ ತಾಲೂಕಿಗೆ ಒಂದರಂತೆ ಆದರ್ಶ ವಿದ್ಯಾಲಯಗಳಿದ್ದು ಆಯಾ ತಾಲೂಕಿನ ಮಕ್ಕಳಿಗೆ ಅಲ್ಲಿ ಸ್ಪರ್ಧಾ ಪರೀಕ್ಷೆ ಮೂಲಕ ದಾಖಲಾತಿ ಪಡೆಯಲು ಅವಕಾಶವಿರುತ್ತದೆ. ವಿದ್ಯಾರ್ಥಿಗಳ ಆಯ್ಕೆಯಲ್ಲಿ **ಶೇ.100% ಪ್ರತಿಶತ** ಆದರ್ಶ ವಿದ್ಯಾಲಯಗಳಲ್ಲಿ ಆಯಾ ತಾಲೂಕಿನ ಮಕ್ಕಳಿಗೆ ಪ್ರಥಮ ಆದ್ಯತೆ ನೀಡಲಾಗಿರುವದು ಅಧ್ಯಯನದಿಂದ ಕಂಡುಬರುತ್ತದೆ.

**15. ಆದರ್ಶ ವಿದ್ಯಾಲಯ ತಾಲೂಕು ಕೇಂದ್ರದಲ್ಲಿ ಅಥವಾ ತಾಲೂಕು ಕೇಂದ್ರದಿಂದ 5 ಕಿ.ಮೀ. ವ್ಯಾಪ್ತಿಯೊಳಗಿದೆಯೇ ?**

ಸರ್ಕಾರ ಹಿಂದುಳಿದ ತಾಲೂಕುಗಳಲ್ಲಿ ಆದರ್ಶ ವಿದ್ಯಾಲಯಗಳನ್ನು ಪ್ರಾರಂಭಿಸಲು ಯೋಜಿಸಿ, ತಾಲೂಕು ಕೇಂದ್ರದಲ್ಲಿ ಅಥವಾ ತಾಲೂಕು ಕೇಂದ್ರದಿಂದ 5 ಕಿ.ಮೀ. ವ್ಯಾಪ್ತಿಯೊಳಗೆ ಇರುವ ಸ್ಥಳದಲ್ಲಿ ಪ್ರಾರಂಭಿಸಲು ಸೂಚಿಸಿತು. ಸರ್ಕಾರದ ಸೂಚನೆಯಂತೆ **ಶೇ. 57.2% ಪ್ರತಿಶತ** ಆದರ್ಶ ವಿದ್ಯಾಲಯಗಳು ತಾಲೂಕು ಕೇಂದ್ರದಲ್ಲಿ ಅಥವಾ ತಾಲೂಕು ಕೇಂದ್ರದಿಂದ 5 ಕಿ.ಮೀ. ವ್ಯಾಪ್ತಿಯೊಳಗೆ ಇರುವದು ಹಾಗೂ **ಶೇ.7.1% ಪ್ರತಿಶತ** ಆದರ್ಶ ವಿದ್ಯಾಲಯಗಳು **ಭಾಗಶ:** ವ್ಯಾಪ್ತಿಯೊಳಗೆ ಇರುವದು ಈ ಅಧ್ಯಯನದಿಂದ ಕಂಡು ಬರುತ್ತದೆ.

## II. ಸರ್ವೆ ಮಾದರಿ ಪ್ರಶ್ನಾವಳಿ ವಿಶ್ಲೇಷಣೆ :

### : ಮುಖ್ಯ ಶಿಕ್ಷಕರ ಪ್ರತಿಕ್ರಿಯೆ ವಿಶ್ಲೇಷಣೆ :

ಈ ಸಂಶೋಧನೆಯು ಮುಖ್ಯ ಶಿಕ್ಷಕರಿಗೆ ಚೆಕ್‌ಲಿಸ್ಟ್‌ನಲ್ಲಿ ಪ್ರತಿಕ್ರಿಯೆ ಪಡೆಯುವದರ ಜೊತೆಗೆ ಸರ್ವೇ ಮಾದರಿಯ ಪ್ರಶ್ನಾವಳಿಯನ್ನು ನೀಡಿ ಲಿಖಿತವಾಗಿ ಪ್ರತಿಕ್ರಿಯೆ ಪಡೆಯಲಾಯಿತು. ಈ ಪ್ರಶ್ನಾವಳಿಯು 4 ಅಂಶಗಳನ್ನು ಒಳಗೊಂಡಿದೆ. ಇಲ್ಲಿ ಕೇಳಲಾದ ಪ್ರಶ್ನೆಗಳು ಮುಖ್ಯ ಮತ್ತು ಉಪ ಪ್ರಶ್ನೆಗಳಾಗಿದ್ದು ಮುಕ್ತ ಮತ್ತು ನಿರ್ದಿಷ್ಟ ಎರಡು ರೀತಿಗಳಾಗಿವೆ. ಅಂದರೆ ವಸ್ತುನಿಷ್ಠ ಮತ್ತು ವಿವರಣಾತ್ಮಕ ಪ್ರಶ್ನೆಗಳನ್ನು ಒಳಗೊಂಡಿದೆ.

ಇದು ಮುಖ್ಯವಾಗಿ ಆದರ್ಶ ವಿದ್ಯಾಲಯಗಳನ್ನು ಪ್ರಾರಂಭಿಸಲಾದ ಉದ್ದೇಶ , ಮೂಲಭೂತ ಸೌಕರ್ಯಗಳು, ಅವುಗಳ ಬಳಕೆ ಹಾಗೂ ಫಲಿತಾಂಶವನ್ನು ದೃಷ್ಟಿಯಲ್ಲಿಟ್ಟುಕೊಂಡು ಮುಖ್ಯ ಶಿಕ್ಷಕರಿಂದ ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಈ ರೀತಿಯಾಗಿ ಸಂಗ್ರಹಿಸಿದ ಮಾಹಿತಿಯು ಕಲಬುರಗಿ ಜಿಲ್ಲೆಯ ಬೇರೆ ಬೇರೆ ಆದರ್ಶ ವಿದ್ಯಾಲಯಗಳೊಂದಿಗೆ ತುಲನಾತ್ಮಕ ತೆಗೆಯಲು ಸಹಾಯಕಾರಿಯಾಗಿದೆ.

ಕಲಬುರಗಿ ಜಿಲ್ಲೆಯ ಅಫಜಲಪೂರ, ಆಳಂದ, ಚಿಂಚೋಳಿ, ಚಿತ್ತಾಪೂರ, ಜೇವರ್ಗಿ, ಕಲಬುರಗಿ ದಕ್ಷಿಣ ವಲಯ ಹಾಗೂ ಸೇಡಂ ಈ 7 ತಾಲೂಕುಗಳಲ್ಲಿರುವ 7 ಆದರ್ಶ ವಿದ್ಯಾಲಯಗಳಿಗೆ ಭೇಟಿಕೊಟ್ಟು ಮುಖ್ಯ ಶಿಕ್ಷಕರನ್ನು ಭೇಟಿಯಾಗಿ 4 ಅಂಶಗಳನ್ನು ಹೊಂದಿದ ಮುಖ್ಯ ಮತ್ತು ಉಪ ಪ್ರಶ್ನೆಗಳನ್ನು ಒಳಗೊಂಡ ಪ್ರಶ್ನಾವಳಿಯನ್ನು ಅವರಿಗೆ ನೀಡಿ ಅದಕ್ಕೆ ಅವರು ನೀಡಿದ ಅಭಿಪ್ರಾಯವನ್ನು ಕ್ರೋಢೀಕರಿಸಲಾಯಿತು. ಹೀಗೆ ಮುಖ್ಯ ಶಿಕ್ಷಕರಿಂದ ಕ್ರೋಢೀಕರಿಸಿದ ಅಭಿಪ್ರಾಯವನ್ನು ಈ ಕೇಳಗಿನಂತೆ ವಿಶ್ಲೇಷಿಸಲಾಗಿದೆ.

**1. ಆದರ್ಶ ಶಾಲೆಗಳನ್ನು ಯಾವ ಉದ್ದೇಶಕ್ಕಾಗಿ ಆರಂಭಿಸಲಾಗಿದೆಯೋ ಆ ಉದ್ದೇಶಗಳು ಎಷ್ಟರ ಮಟ್ಟಿಗೆ ಈಡೇರಿವೆ ?**

ಕೇಂದ್ರೀಯ ವಿದ್ಯಾಲಯ ಮಾದರಿಯಲ್ಲಿ ಎಲ್ಲ ಮೂಲಭೂತ ಸೌಕರ್ಯ ಮತ್ತು ಸವಲತ್ತುಗಳನ್ನು ನೀಡಿ ಗ್ರಾಮೀಣ ಭಾಗದ ಬಡ ಪ್ರತಿಭಾವಂತ ಮಕ್ಕಳಿಗೆ ಇಂಗ್ಲೀಷ ಮಾಧ್ಯಮದಲ್ಲಿ ಗುಣಾತ್ಮಕ ಶಿಕ್ಷಣ ನೀಡುವುದರ ಮೂಲಕ ಮಕ್ಕಳು ಉನ್ನತ ಶಿಕ್ಷಣವನ್ನು ಪಡೆದು ಉಜ್ವಲ ಭವಿಷ್ಯವನ್ನು ನಿರ್ಮಾಣಮಾಡಿಕೊಳ್ಳುವಂತೆ ಸಿದ್ಧಪಡಿಸಲು ಆದರ್ಶ ವಿದ್ಯಾಲಯಗಳನ್ನು ಆರಂಭಿಸಲಾಗಿರುತ್ತದೆ. ಅದರ ಉದ್ದೇಶ ಎಷ್ಟರ ಮಟ್ಟಿಗೆ ಈಡೇರಿಕೆಯಾಗಿರುವದನ್ನು ತಿಳಿಯುವುದರ ಮೂಲಕ ಆದರ್ಶ ವಿದ್ಯಾಲಯಗಳ ವಸ್ತುಸ್ಥಿತಿಯನ್ನು ಅರಿಯುವುದನ್ನು ಗಮನದಲ್ಲಿಟ್ಟು ಈ ಪ್ರಶ್ನೆಯನ್ನು ಕೇಳಲಾಯಿತು.

ಇದಕ್ಕೆ 1 ಮುಖ್ಯ ಶಿಕ್ಷಕರು ಪೂರ್ಣ ಪ್ರಮಾಣದಲ್ಲಿ ಈಡೇರಿದೆ ಎಂದು ಅಭಿಪ್ರಾಯಪಟ್ಟರೆ, 1 ಮುಖ್ಯ ಶಿಕ್ಷಕರು ಎಸ್.ಎಸ್.ಎಲ್.ಸಿ ಫಲಿತಾಂಶ ಉತ್ತಮಗೊಳ್ಳುವಲ್ಲಿ, 2 ಮುಖ್ಯ ಶಿಕ್ಷಕರು ಕೇಂದ್ರೀಯ ವಿದ್ಯಾಲಯದಂತೆ ಸವಲತ್ತು ದೊರಕಿದ್ದು ಇಂಗ್ಲೀಷ ಮಾಧ್ಯಮದಲ್ಲಿ ಶಿಕ್ಷಣ ದೊರಕಿಸಿಕೊಡುವಲ್ಲಿ, 1 ಮುಖ್ಯ ಶಿಕ್ಷಕರು ಗ್ರಾಮೀಣ ಬಡ ಪ್ರತಿಭಾವಂತ ಮಕ್ಕಳು ವೈದ್ಯಕೀಯ ಮತ್ತು ತಾಂತ್ರಿಕ ಶಿಕ್ಷಣದಂತ ಉನ್ನತ ಶಿಕ್ಷಣ ಪಡೆಯುವಲ್ಲಿ , 1 ಮುಖ್ಯ ಶಿಕ್ಷಕರು ಪ್ರಚಾರದಿಂದ ಉದ್ದೇಶ ಹೆಚ್ಚಿನ ಮಟ್ಟದಲ್ಲಿ ಸಫಲವಾಗುತ್ತಿದೆ ಎಂದು & 1 ಮುಖ್ಯ ಶಿಕ್ಷಕರು ಪೂರ್ಣ ಪ್ರಮಾಣದಲ್ಲಿ ಈಡೇರಿಸಲು ಪ್ರಯತ್ನಿಸುತ್ತಿದ್ದೇವೆ ಎಂದು ಅಭಿಪ್ರಾಯ ವ್ಯಕ್ತ ಪಡಿಸಿರುತ್ತಾರೆ.

ಇದರಿಂದ ಆದರ್ಶ ವಿದ್ಯಾಲಯಗಳಲ್ಲಿ ಗ್ರಾಮೀಣ ಭಾಗದ ಬಡ ಪ್ರತಿಭಾವಂತ ಮಕ್ಕಳು ಗುಣಮಟ್ಟದ ಶಿಕ್ಷಣ ಪಡೆಯುತ್ತಿದ್ದು ಇವು ತಮ್ಮ ಉದ್ದೇಶವನ್ನು ಪೂರ್ತಿ ಮಾಡುವ ದಿಶೆಯಲ್ಲಿ ಪ್ರಗತಿಯನ್ನು ಹೊಂದುತ್ತಿರುವದು ಈ ಅಧ್ಯಯನದಿಂದ ಕಂಡುಬರುತ್ತದೆ.

## 2. ಮೂಲಭೂತ ಸೌಕರ್ಯಗಳು ಪೂರೈಕೆ ಆಗಿವೆಯೇ ?

ಸಪ್ಟೆಂಬರ್ 2004 ರಲ್ಲಿ ಸ್ಥಾಪನೆಯಾದ ಕೇಂದ್ರ ಶಿಕ್ಷಣ ಸಲಹಾ ಮಂಡಳಿಯ ಸಪ್ಟೆಂಬರ್ 2005 ರ ವರದಿಯಲ್ಲಿ ಹಾಗೂ ಯೋಜನಾ ಆಯೋಗ ಕೇಂದ್ರೀಯ ವಿದ್ಯಾಲಯ ಮಾದರಿಯಲ್ಲಿ ಆದರ್ಶ ವಿದ್ಯಾಲಯಗಳನ್ನು ಪ್ರಾರಂಭಿಸಲು ಎಲ್ಲ ಮೂಲಭೂತ ಸೌಕರ್ಯಗಳನ್ನು ಒದಗಿಸಬೇಕೆಂದು ಮಾಡಿದ ಶಿಫಾರಸ್ಸಿನಂತೆ ಗುಣಾತ್ಮಕ ಶಿಕ್ಷಣಕ್ಕೆ ಅವಶ್ಯಕವಾದ ಮೂಲಭೂತ ಸೌಕರ್ಯಗಳು ಪೂರೈಕೆಯಾಗಿವೆಯೇ ಎಂದು ತಿಳಿಯಲು ಈ ಪ್ರಶ್ನೆಯನ್ನು ಕೇಳಲಾಯಿತು.

ಇದಕ್ಕೆ 6 ಮುಖ್ಯ ಶಿಕ್ಷಕರು ಎಂದರೆ **ಶೇ. 85.7% ಪ್ರತಿಶತ** ಮೂಲಭೂತ ಸೌಕರ್ಯ ಗಳು ಪೂರೈಕೆಯಾಗಿರುವದು ಎಂದು ಅಭಿಪ್ರಾಯ ಪಟ್ಟರೆ 1 ಮುಖ್ಯ ಶಿಕ್ಷಕರು ಎಂದರೆ **ಶೇ.14.3% ಪ್ರತಿಶತ** ಕೆಲವೊಂದು ಮಾತ್ರ ಪೂರೈಕೆಯಾಗಿರುವದೆಂದು ಅಭಿಪ್ರಾಯ ಪಡುವರು. ಇದರಿಂದ ಗರಿಷ್ಟ ಮಟ್ಟದಲ್ಲಿ ಮೂಲಭೂತ ಸೌಕರ್ಯಗಳು ಪೂರೈಕೆಯಾಗಿರುವದು ಈ ಅಧ್ಯಯನದಿಂದ ಕಂಡು ಬರುತ್ತದೆ.

## 3. ಅವುಗಳನ್ನು ಹೇಗೆ ಬಳಸಿಕೊಳ್ಳಲಾಗಿತ್ತಿದೆ ?

**ಶೇ. 100% ಪ್ರತಿಶತ** ಆದರ್ಶ ವಿದ್ಯಾಲಯಗಳ ಮುಖ್ಯ ಶಿಕ್ಷಕರು ಲಭ್ಯವಿರುವ ಮೂಲಭೂತ ಸೌಕರ್ಯಗಳನ್ನು ಸಮರ್ಪಕವಾಗಿ ಬಳಸಿಕೊಳ್ಳುತ್ತಿದೆ ಎಂದು ಅಭಿಪ್ರಾಯ ಪಟ್ಟಿದ್ದು ಮೂಲಭೂತ ಸೌಕರ್ಯಗಳ ಸಮರ್ಪಕ ಬಳಕೆಯು ಮಕ್ಕಳ ಗುಣಾತ್ಮಕ ಶಿಕ್ಷಣಕ್ಕೆ ಪೂರಕವಾಗಿರುವುದು ಅಧ್ಯಯನದಿಂದ ಕಂಡುಬರುತ್ತದೆ.

**4. 2014–15 ರಿಂದ 2018–19 ರವರೆಗೆ ಎಸ್.ಎಸ್.ಎಲ್.ಸಿ ಪರೀಕ್ಷೆಯ ಫಲಿತಾಂಶದಲ್ಲಿ ಪ್ರಗತಿಯಾಗಿದೆಯಾ ? ಫಲಿತಾಂಶದೊಂದಿಗೆ ತಿಳಿಸಿ.**

ಕೇಂದ್ರ ಶಿಕ್ಷಣ ಸಲಹಾ ಮಂಡಳಿಯು ಹಾಗೂ ಯೋಜನಾ ಆಯೋಗವು ಗ್ರಾಮೀಣ ಭಾಗದ ಬಡ ಪ್ರತಿಭಾವಂತ ಮಕ್ಕಳಿಗೆ ಇಂಗ್ಲೀಷ ಮಾಧ್ಯಮದಲ್ಲಿ ಶಿಕ್ಷಣ ನೀಡುವುದರೊಂದಿಗೆ ಮಕ್ಕಳ ಶೈಕ್ಷಣಿಕ ಪ್ರಗತಿಗಾಗಿ ಫಲಿತಾಂಶಕ್ಕೆ ಒತ್ತು ನೀಡಿರುತ್ತದೆ. ಪ್ರಯುಕ್ತ ಆದರ್ಶ ವಿದ್ಯಾಲಯದ ಪ್ರಮುಖ ಉದ್ದೇಶವಾದ ಶೈಕ್ಷಣಿಕ ಪ್ರಗತಿಯನ್ನು ತಿಳಿಯಲು 2014–15 ರಿಂದ 2018–19 ರವರೆಗಿನ ಎಸ್.ಎಸ್.ಎಲ್.ಸಿ ಫಲಿತಾಂಶದಲ್ಲಿಯ ಪ್ರಗತಿಯನ್ನು ಫಲಿತಾಂಶದೊಂದಿಗೆ ಕೇಳಲಾಯಿತು.

ಇದಕ್ಕೆ ಕಲಬುರಗಿ ಜಿಲ್ಲೆಯ **ಶೇ. 100% ಪ್ರತಿಶತ** ಆದರ್ಶ ವಿದ್ಯಾಲಯಗಳ ಮುಖ್ಯ ಶಿಕ್ಷಕರು ಎಸ್.ಎಸ್.ಎಲ್.ಸಿ ಫಲಿತಾಂಶ ಉತ್ತಮವಾಗಿದ್ದು ಪ್ರಗತಿಯಲ್ಲಿರುವದಾಗಿ ಅಭಿಪ್ರಾಯ ವ್ಯಕ್ತ ಪಡಿಸಿದ್ದು ಆದರ್ಶ ವಿದ್ಯಾಲಯಗಳ ಶೈಕ್ಷಣಿಕ ಪ್ರಗತಿಯು ಉತ್ತಮವಾಗಿರುವದು ಈ ಅಧ್ಯಯನದಿಂದ ಕಂಡುಬರುತ್ತದೆ.

| **ವರ್ಷ** | **ಅಫಜಲಪೂರ** | **ಆಳಂದ** | **ಚಿಂಚೋಳಿ** | **ಚಿತ್ತಾಪೂರ** | **ಜೇವರ್ಗಿ** | **ಕಲಬುರಗಿ (ದ.ವ)** | **ಸೇಡಂ** |
|---|---|---|---|---|---|---|---|
| 2014–15 | 98% | 100% | 100% | 92.45% | 100% | 92.42% | 100% |
| 2015–16 | 97% | 92% | 93.75% | 96.96% | 95% | 90.62% | 87.5% |
| 2016–17 | 97% | 100% | 100% | 87.14% | 98% | 94.64% | 88..63% |
| 2017–18 | 88.88% | 96.96% | 95.58% | 92.85% | 88% | 88.37% | 79.24% |
| 2018–19 | 100% | 100% | 95.23% | 72% | 98% | 94.87% | 85.45% |

## : ಸಹ ಶಿಕ್ಷಕರ ಪ್ರತಿಕ್ರಿಯೆಯ ವಿಶ್ಲೇಷಣೆ :

ಈ ಸಂಶೋಧನೆಯು ಸಹ ಶಿಕ್ಷಕರಿಗೆ ಚೆಕ್‌ಲಿಸ್‌ನಲ್ಲಿ ಪ್ರತಿಕ್ರಿಯೆ ಪಡೆಯುವದರ ಜೊತೆಗೆ ಸರ್ವೇ ಮಾದರಿಯಲ್ಲಿರುವ ಪ್ರಶ್ನಾವಳಿಯನ್ನು ನೀಡಿ ಲಿಖಿತವಾಗಿ ಪ್ರತಿಕ್ರಿಯೆಯನ್ನು ಪಡೆಯಲಾಯಿತು. ಈ ಪ್ರಶ್ನಾವಳಿಯು 6 ಅಂಶಗಳನ್ನು ಒಳಗೊಂಡಿದೆ. ಇಲ್ಲಿ ಕೇಳಲಾದ ಪ್ರಶ್ನೆಗಳು ಮುಖ್ಯ ಮತ್ತು ಉಪ ಪ್ರಶ್ನೆಗಳಾಗಿದ್ದು ಮುಕ್ತ ಮತ್ತು ನಿರ್ದಿಷ್ಟ ಎರಡು ರೀತಿಗಳಾಗಿವೆ. ಎಂದರೆ ವಸ್ತುನಿಷ್ಟ ಮತ್ತು ವಿವರಣಾತ್ಮಕ ಪ್ರಶ್ನೆಗಳನ್ನು ಒಳಗೊಂಡಿದೆ. ಇದು ಮುಖ್ಯವಾಗಿ ವಿಷಯವಾರು ಲ್ಯಾಬ್, ವೃತ್ತಿ ಶಿಕ್ಷಣ, ಮೂಲಭೂತ ಸೌಕರ್ಯಗಳು ಇವುಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಸಹಶಿಕ್ಷಕರಿಂದ ಮಾಹಿತಿಯನ್ನು ಸಂಗ್ರಹಿಸಲಾಗಿರುತ್ತದೆ. ಈ ರೀತಿಯಾಗಿ ಸಂಗ್ರಹಿಸಿದ ಮಾಹಿತಿಯು ಕಲಬುರಗಿ ಜಿಲ್ಲೆಯ ಬೇರೆಬೇರೆ ಆದರ್ಶ ವಿದ್ಯಾಲಯಗಳೊಂದಿಗೆ ತುಲನಾತ್ಮಕ ತೆಗೆಯಲು ಸಹಾಯಕವಾಗಿದೆ.

ಕಲಬುರಗಿ ಜಿಲ್ಲೆಯ ಅಫಜಲಪೂರ, ಆಳಂದ, ಚಿಂಚೋಳಿ, ಚಿತ್ತಾಪೂರ, ಜೇವರ್ಗಿ, ಕಲಬುರಗಿ ದಕ್ಷಣ ವಲಯ ಹಾಗೂ ಸೇಡಂ ಈ 7 ತಾಲೂಕುಗಳಲ್ಲಿರುವ 7 ಆದರ್ಶ ವಿದ್ಯಾಲಯಗಳಿಗೆ ಭೇಟಿಕೊಟ್ಟು ಸಹಶಿಕ್ಷಕರನ್ನು ಭೇಟಿಯಾಗಿ ಪ್ರತಿ ಆದರ್ಶ ವಿದ್ಯಾಲಯದಲ್ಲಿಯ ವಿಜ್ಞಾನ ಮತ್ತು ಕಲಾ ವಿಭಾಗದ ಒಬ್ಬ ಶಿಕ್ಷಕರಂತೆ ಒಟ್ಟು 2 ಶಿಕ್ಷಕರಿಗೆ 7 ಆದರ್ಶ ವಿದ್ಯಾಲಯಗಳ ಒಟ್ಟು 14 ಶಿಕ್ಷಕರಿಗೆ 6 ಅಂಶಗಳನ್ನು ಹೊಂದಿದ ಮುಖ್ಯ ಮತ್ತು ಉಪ ಪ್ರಶ್ನೆಗಳನ್ನು ಒಳಗೊಂಡ ಪ್ರಶ್ನಾವಳಿಯನ್ನು ನೀಡಿ ಅದಕ್ಕೆ ಅವರು ನೀಡಿದ ಅಭಿಪ್ರಾಯವನ್ನು ಕ್ರೋಢಿಕರಿಸಲಾಯಿತು. ಹೀಗೆ ಸಹ ಶಿಕ್ಷಕರಿಂದ ಸಂಗ್ರಹಿಸಿದ ಮಾಹಿತಿಯನ್ನು ಈ ಕೆಳಗಿನಂತೆ ವಿಶ್ಲೇಷಿಸಲಾಯಿತು.

### 1. ವಿಷಯವಾರು ಲ್ಯಾಬ್‌ಗಳ ರಚನೆ ಮಾಡಲಾಗಿದೆಯೇ ?

ವಿದ್ಯಾರ್ಥಿಗಳಿಗೆ ಗುಣಾತ್ಮಕ ಹಾಗೂ ಸಮಗ್ರ ಶಿಕ್ಷಣ ನೀಡುವ ದೂರದೃಷ್ಟಿ ಹೊಂದಿರುವ ಆದರ್ಶ ವಿದ್ಯಾಲಯಗಳಲ್ಲಿ ಚಟುವಟಿಕೆ ಹಾಗೂ ಪ್ರಯೋಗಗಳ ಮೂಲಕ ಗುಣಮಟ್ಟದ ಬೋಧನೆ
ಮತ್ತು ಕಲಿಕೆಗೆ ವಿಷಯಾಧಾರಿತ ಲ್ಯಾಬ್‌ಗಳು ಅವಶ್ಯಕವಾಗಿರುವದು.

ಇದಕ್ಕೆ 12 ಸಹ ಶಿಕ್ಷಕರು ಎಂದರೆ **ಶೇ. 85.7% ಪ್ರತಿಶತ** ಆದರ್ಶ ವಿದ್ಯಾಲಯಗಳು ಲ್ಯಾಬ್‌ಗಳ ರಚನೆ ಮಾಡಲಾಗಿದೆ ಎಂದು ಹಾಗೂ 2 ಸಹ ಶಿಕ್ಷಕರು ಎಂದರೆ **ಶೇ. 14.3% ಪ್ರತಿಶತ** ಆದರ್ಶ ವಿದ್ಯಾಲಯಗಳು ಲ್ಯಾಬ್ ರಚನೆ ಮಾಡಿರುವುದಿಲ್ಲವೆಂದು ಅಭಿಪ್ರಾಯ ವ್ಯಕ್ತ ಪಡಿಸಿರುತ್ತಾರೆ. ಇದರಿಂದ ಆದರ್ಶ ವಿದ್ಯಾಲಯಗಳು ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ಕೊಡುವುದರಲ್ಲಿ ಲ್ಯಾಬ್‌ಗಳ ರಚನೆ ಮಾಡಿ ಕೊಂಡಿದ್ದು ಈ ಅಧ್ಯಯನದಿಂದ ಕಂಡುಬರುತ್ತದೆ.

**2. ಅವುಗಳನ್ನು ಹೇಗೆ ಅರ್ಥಪೂರ್ಣವಾಗಿ ಬಳಸಿಕೊಳ್ಳಲಾಗುತ್ತಿದೆ** ?

ವಿಷಯವಾರು ಲ್ಯಾಬ್‌ಗಳನ್ನು ಕೇವಲ ತೋರಿಕೆಗಾಗಿ ರಚನೆ ಮಾಡದೆ ಮಕ್ಕಳ ಕಲಿಕೆ ಉತ್ತಮ ಪಡಿಸುವ ದಿಶೆಯಲ್ಲಿ ಅವುಗಳನ್ನು ಅರ್ಥಪೂರ್ಣವಾಗಿ ಬಳಸುತ್ತಿರುವರೇ ಎಂದು ತಿಳಿಯಲು ಈ ಉಪ ಪ್ರಶ್ನೆಯನ್ನು ಕೇಳಲಾಯಿತು.

ಇದಕ್ಕೆ 12 ಸಹ ಶಿಕ್ಷಕರು ಎಂದರೆ **ಶೇ. 85.7% ಪ್ರತಿಶತ** ಆದರ್ಶ ವಿದ್ಯಾಲಯಗಳು ಪಠ್ಯ ಆಧಾರಿತ ಚಟುವಟಿಕೆಗಳನ್ನು , ಪ್ರಯೋಗಗಳನ್ನು ಮಕ್ಕಳಿಗೆ ಮಾಡಿ ತೋರಿಸಿ ಮಕ್ಕಳಿಂದಲೂ ಮಾಡಿಸಲಾಗುವದು ಎಂದು ಅಭಿಪ್ರಾಯ ಪಡುವರು. 2 ಸಹ ಶಿಕ್ಷಕರು ಎಂದರೆ **ಶೇ. 14.3% ಪ್ರತಿಶತ** ಆದರ್ಶ ವಿದ್ಯಾಲಯಗಳು ಲ್ಯಾಬ್‌ನಲ್ಲಿ ಲಭ್ಯವಿರುವ ಸಾಮಗ್ರಿಗಳಿಗೆ ಅನುಗುಣವಾಗಿ ಅವುಗಳನ್ನು ಪಠ್ಯಕ್ಕೆ ಸಂಬಂಧಿಸಿದಂತೆ ಬಳಸಿಕೊಳ್ಳಲಾಗುವುದು ಎಂದು ಅಭಿಪ್ರಾಯ ವ್ಯಕ್ತ ಪಡಿಸುವರು. ಇದರಿಂದ ವಿಷಯವಾರು ಲ್ಯಾಬ್‌ಗಳ ಬಳಕೆ ಬೋಧನೆ ಮತ್ತು ಕಲಿಕೆಯನ್ನು ದೃಢಪಡಿಸುವುದರ ಮೂಲಕ ಗುಣಮಟ್ಟದ ಶಿಕ್ಷಣ ನೀಡಲು ಉಪಯುಕ್ತವಾಗಿರುವದು ಈ ಅಧ್ಯಯನದಿಂದ ಕಂಡು ಬರುತ್ತದೆ.

**3. ಎಷ್ಟು ಪ್ರಕಾರದ ವೃತ್ತಿ ಶಿಕ್ಷಣ ನೀಡಲಾಗುತ್ತಿದೆ** ?

ಆದರ್ಶ ಶಾಲೆಗಳು ವಿದ್ಯಾರ್ಥಿಗಳಿಗೆ ಸಮಗ್ರ ಶಿಕ್ಷಣ ನೀಡುವ ದೂರದೃಷ್ಟಿ ಹೊಂದಿದ್ದು ವೃತ್ತಿ ಶಿಕ್ಷಕರನ್ನು ನೇಮಿಸಿಕೊಂಡು ವೃತ್ತಿ ಶಿಕ್ಷಣ ನೀಡುವುದು ಇದರ ಗುಣಲಕ್ಷಣ ವಾಗಿರುತ್ತದೆ. ವಿದ್ಯಾರ್ಥಿಗಳಲ್ಲಿ ಪಠ್ಯಾಧಾರಿತ ಶಿಕ್ಷಣದೊಂದಿಗೆ ಇತರ ಕೌಶಲ್ಯವನ್ನು ರೂಢಿಸಲು ಆದರ್ಶ ವಿದ್ಯಾಲಯಗಳಲ್ಲಿ ವೃತ್ತಿ ಶಿಕ್ಷಣವನ್ನು ನೀಡುತ್ತಿರುವರೇ ಎಂದು ತಿಳಿಯಲು ಈ ಪ್ರಶ್ನೆಯನ್ನು ಕೇಳಲಾಯಿತು.

ಇದಕ್ಕೆ 2 ಸಹ ಶಿಕ್ಷಕರು **ಶೇ. 14.4% ಪ್ರತಿಶತ** ಆದರ್ಶ ವಿದ್ಯಾಲಯಗಳು ಚಿತ್ರಕಲೆ ಮತ್ತು SUPW ವನ್ನು ಕಲಿಸುತ್ತಿರುವದಾಗಿ ಅಭಿಪ್ರಾಯ ವ್ಯಕ್ತ ಪಡಿಸುವರು. 6 ಸಹ ಶಿಕ್ಷಕರು ಎಂದರೆ **ಶೇ. 42.8% ಪ್ರತಿಶತ** ಆದರ್ಶ ವಿದ್ಯಾಲಯಗಳು ಯಾವುದೇ ವೃತ್ತಿ ಶಿಕ್ಷಣ ನೀಡುತ್ತಿಲ್ಲವೆಂದು ಅಭಿಪ್ರಾಯ ವ್ಯಕ್ತಪಡಿಸಿದ್ದರೆ, ಉಳಿದ 6 ಸಹ ಶಿಕ್ಷಕರು ಎಂದರೆ **ಶೇ. 42.8% ಪ್ರತಿಶತ** ಆದರ್ಶ ವಿದ್ಯಾಲಯಗಳು ವೃತ್ತಿ ಶಿಕ್ಷಕರ ನೇಮಕಾತಿ ಆಗಿರುವುದಿಲ್ಲವೆಂದು ಕಾರಣ ವೃತ್ತಿ ಶಿಕ್ಷಣ ನೀಡುತ್ತಿಲ್ಲವೆಂಬ ಅರ್ಥದಲ್ಲಿ ಅಭಿಪ್ರಾಯ ವ್ಯಕ್ತಪಡಿಸುವರು. ಇದರಿಂದ ಆದರ್ಶ ವಿದ್ಯಾಲಯಗಳಲ್ಲಿ ಯಾವೂದೇ ರೀತಿಯ ವೃತ್ತಿ ಶಿಕ್ಷಣ ಮಕ್ಕಳಿಗೆ ನೀಡುತ್ತಿಲ್ಲ ಎಂಬುದು ಅಧ್ಯಯನದಿಂದ ಕಂಡು ಬರುತ್ತದೆ.

**4. ಅವುಗಳಿಗೆ ಸಂಬಂಧಿಸಿದ ಸಾಮಗ್ರಿಗಳ ಪೂರೈಕೆ ಎಷ್ಟರ ಮಟ್ಟಿಗೆಯಾಗಿದ್ದು ಅವುಗಳನ್ನು ಬಳಸಲಾಗುತ್ತಿದೆಯೇ ?**

ಆದರ್ಶ ವಿದ್ಯಾಲಯ ಶಾಲೆಗಳು ವಿದ್ಯಾರ್ಥಿಗಳಿಗೆ ಸಮಗ್ರ ಶಿಕ್ಷಣ ನೀಡುವ ದೂರದೃಷ್ಟಿ ಯೊಂದಿಗೆ ವೃತ್ತಿ ಶಿಕ್ಷಕರನ್ನು ನೇಮಿಸಿಕೊಂಡು ವೃತ್ತಿ ಶಿಕ್ಷಣ ನೀಡುವ ಗುಣಲಕ್ಷಣ ಹೊಂದಿರುವದು. ಆದರ್ಶ ವಿದ್ಯಾಲಯಗಳಲ್ಲಿ ವೃತ್ತಿ ಶಿಕ್ಷಣ ನೀಡುವ ಯೋಜನೆಯಿಂದ ವೃತ್ತಿ ಶಿಕ್ಷಣ ಸಾಮಗ್ರಿಗಳು ಎಷ್ಟು ಪೂರೈಕೆಯಾಗಿದ್ದು / ಖರೀದಿಯಾಗಿದ್ದು ಅವುಗಳನ್ನು ಬಳಸಿಕೊಳ್ಳಲಾಗುತ್ತಿದೆಯೇ ಎಂದು ತಿಳಿಯಲು ಈ ಪ್ರಶ್ನೆಯನ್ನು ಕೇಳಲಾಯಿತು.

ಇದಕ್ಕೆ 11 ಸಹ ಶಿಕ್ಷಕರು ಎಂದರೆ **ಶೇ. 78.5% ಪ್ರತಿಶತ** ಆದರ್ಶ ವಿದ್ಯಾಲಯಗಳಲ್ಲಿ **ಹೊಲಿಗೆ ಯಂತ್ರ, ಸಂಗೀತ ವಾದ್ಯಗಳು ಮತ್ತು ತೋಟಗಾರಿಕೆ ಸಾಧನಗಳು** ಪೂರೈಕೆ / ಖರೀದಿ ಆಗಿದೆ ಎಂದು ಅಭಿಪ್ರಾಯ ಪಟ್ಟಿರುತ್ತಾರೆ. 2 ಸಹ ಶಿಕ್ಷಕರು ಎಂದರೆ **ಶೇ. 14.3% ಪ್ರತಿಶತ** ಆದರ್ಶ ವಿದ್ಯಾಲಯಗಳಲ್ಲಿ ಯಾವುದೇ ವೃತ್ತಿ ಶಿಕ್ಷಣ ಸಾಮಗ್ರಿ ಪೂರೈಕೆಯಾಗಿರುವುದಿಲ್ಲ ಎಂದು ಅಭಿಪ್ರಾಯ ಪಟ್ಟಿರುತ್ತಾರೆ. 1 ಸಹ ಶಿಕ್ಷಕರು ಯಾವುದೇ ಪ್ರತಿಕ್ರಿಯೆ ನೀಡಿರುವುದಿಲ್ಲ.

13 ಸಹ ಶಿಕ್ಷಕರು ಎಂದರೆ **ಶೇ.92.85% ಪ್ರತಿಶತ** ಆದರ್ಶ ವಿದ್ಯಾಲಯಗಳಲ್ಲಿ ವೃತ್ತಿ ಶಿಕ್ಷಣ ಶಿಕ್ಷಕರ ನೇಮಕಾತಿ ಆಗಿರದ ಕಾರಣ ಶಾಲೆಯಲ್ಲಿರುವ ವೃತ್ತಿಶಿಕ್ಷಣ ಸಾಮಗ್ರಿಗಳನ್ನು ಬಳಸಲಾಗುತ್ತಿಲ್ಲ ಎಂಬ ಅಭಿಪ್ರಾಯವನ್ನು ವ್ಯಕ್ತ ಪಡಿಸುತ್ತಾರೆ. ಇದರಿಂದ ಆದರ್ಶ ವಿದ್ಯಾಲಯಗಳಲ್ಲಿ ವೃತ್ತಿಶಿಕ್ಷಣ ಸಾಮಗ್ರಿಗಳು ಪೂರೈಕೆ/ಖರೀದಿ ಆಗಿದ್ದರೂ ವೃತ್ತಿಶಿಕ್ಷಣ ಶಿಕ್ಷಕರ ನೇಮಕಾತಿ ಆಗಿರದ ಕಾರಣ ಅವುಗಳನ್ನು ಬಳಸಲಾಗುತ್ತಿಲ್ಲವೆಂಬುದು ಈ ಅಧ್ಯಯನದಿಂದ ಕಂಡು ಬರುತ್ತದೆ.

**5. ಮೂಲಭೂತ ಸೌಕರ್ಯಗಳು ಪೂರೈಕೆ ಆಗಿವೆಯೇ ?**

ಕೇಂದ್ರೀಯ ವಿದ್ಯಾಲಯ ಮಾದರಿಯಲ್ಲಿ ಎಲ್ಲ ಮೂಲಭೂತ ಸೌಕರ್ಯಗಳನ್ನು ಒದಗಿಸುವ ಮೂಲಕ ಗುಣಾತ್ಮಕ ಶಿಕ್ಷಣ ನೀಡುವ ಉದ್ದೇಶದೊಂದಿಗೆ ಪ್ರಾರಂಭಿಸಲಾದ ಆದರ್ಶ ವಿದ್ಯಾಲಯಗಳಿಗೆ ಎಲ್ಲ ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗಿದೆಯೇ ಎಂಬುದು ಶಿಕ್ಷಕರಿಂದ ಇನ್ನೂ ನಿಖರವಾಗಿ ತಿಳಿಯಲು ಈ ಪ್ರಶ್ನೆಯನ್ನು ಕೇಳಲಾಯಿತು.

ಇದಕ್ಕೆ **ಶೇ. 100% ಪ್ರತಿಶತ** ಆದರ್ಶ ವಿದ್ಯಾಲಯಗಳು ಮೂಲಭೂತ ಸೌಕರ್ಯಗಳು ಪೂರೈಕೆಯಾಗಿ

ರುವದಾಗಿ ಅಭಿಪ್ರಾಯ ಪಟ್ಟಿದ್ದು ಆದರ್ಶ ವಿದ್ಯಾಲಯಗಳು ಮೂಲಭೂತ ಸೌಕರ್ಯಗಳನ್ನು ಹೊಂದಿರುವುದು ಕಂಡುಬರುತ್ತದೆ.

## 6. ಅವುಗಳನ್ನು ಹೇಗೆ ಬಳಸಿಕೊಳ್ಳಲಾಗುತ್ತಿದೆ ?

ಲಭ್ಯ ಮೂಲಭೂತ ಸೌಕರ್ಯಗಳನ್ನು ಶೈಕ್ಷಣಿಕ ವಾತಾವರಣ ಸೃಷ್ಟಿಸುವಲ್ಲಿ , ಶಾಲಾ ಸೌಂದರ್ಯ ಹೆಚ್ಚಿಸುವಲ್ಲಿ ಹಾಗೂ ಗುಣಾತ್ಮಕ ಶಿಕ್ಷಣ ನೀಡುವ ದಿಶೆಯಲ್ಲಿ ಅರ್ಥಪೂರ್ಣವಾಗಿ ಬಳಸಿಕೊಳ್ಳಲಾಗುತ್ತಿದೆಯೇ ಎಂದು ತಿಳಿಯಲು ಈ ಪ್ರಶ್ನೆಯನ್ನು ಕೇಳಲಾಯಿತು.

ಇದಕ್ಕೆ 13 ಸಹಶಿಕ್ಷಕರು ಎಂದರೆ **ಶೇ.92.9% ಪ್ರತಿಶತ** ಆದರ್ಶ ವಿದ್ಯಾಲಯಗಳು ಮೂಲಭೂತ ಸೌಲಭ್ಯಗಳನ್ನು ಪೋಲಾಗದಂತೆ ಅಚ್ಚುಕಟ್ಟಾಗಿ, ವೈಜ್ಞಾನಿಕವಾಗಿ & ಸಮರ್ಪಕವಾಗಿ ಉತ್ತಮ ರೀತಿಯಲ್ಲಿ ಬಳಸಿಕೊಳ್ಳಲಾಗುತ್ತಿದೆ ಎಂದು ಅಭಿಪ್ರಾಯ ವ್ಯಕ್ತ ಪಡಿಸಿದ್ದರೆ, 1 ಸಹ ಶಿಕ್ಷಕರು ಸಂದರ್ಭಕ್ಕನುಸಾರವಾಗಿ ಬಳಸಿಕೊಳ್ಳಲಾಗುವದು ಎಂದು ಅಭಿಪ್ರಾಯ ವ್ಯಕ್ತ ಪಡಿಸುವರು. ಇದರಿಂದ ಆದರ್ಶ ವಿದ್ಯಾಲಯಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಉತ್ತಮವಾಗಿ ಹಾಗೂ ಸಮರ್ಪಕ ವಾಗಿ ಪೋಲಾಗದಂತೆ ಮತ್ತು ಗುಣಾತ್ಮಕ ಶಿಕ್ಷಣಕ್ಕೆ ಸಹಕಾರಿಯಾಗುವಂತೆ ಬಳಸಿಕೊಳ್ಳುತ್ತಿರುವದು ಈ ಅಧ್ಯಯನದಿಂದ ಕಂಡು ಬರುತ್ತದೆ.


## 4.4 ಅಧ್ಯಯನದ ಫಲಿತಾಂಶ :

**" ಆದರ್ಶ ಶಾಲೆಗಳ ವಸ್ತುಸ್ಥಿತಿ ಅಧ್ಯಯನ "** ಎಂಬ ವಿಷಯದ ಅಡಿಯಲ್ಲಿ ಈ ಅಧ್ಯಯನವನ್ನು ಕೈಗೊಳ್ಳಲಾಯಿತು. ಸಪ್ಟೆಂಬರ್ 2004 ರಲ್ಲಿ ಸ್ಥಾಪನೆಯಾದ ಕೇಂದ್ರ ಶಿಕ್ಷಣ ಸಲಹಾ ಮಂಡಳಿಯ ಸಪ್ಟೆಂಬರ್ 2005 ರ ವರದಿ ಹಾಗೂ ಯೋಜನಾ ಆಯೋಗದ ಶಿಫಾರಸ್ಸಿನಂತೆ ಕೇಂದ್ರೀಯ ವಿದ್ಯಾಲಯ ಮಾದರಿಯಲ್ಲಿ ಮೂಲಭೂತ ಸೌಕರ್ಯಗಳು, ಶಿಕ್ಷಕರು–ಮಕ್ಕಳ ಅನುಪಾತ, ಐ.ಸಿ.ಟಿ ಬಳಕೆ, ಸಮಗ್ರ ಶೈಕ್ಷಣಿಕ ವಾತಾವರಣ, ಸೂಕ್ತ ಪಠ್ಯಕ್ರಮ ಮತ್ತು ಫಲಿತಾಂಶಕ್ಕೆ ಒತ್ತು ನೀಡುವ ಗ್ರಾಮೀಣ ಭಾಗದ ಬಡ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಆಂಗ್ಲ ಮಾಧ್ಯಮದಲ್ಲಿ ಗುಣಾತ್ಮಕ ಶಿಕ್ಷಣ ಒದಗಿಸುವ ಗುರಿಯೊಂದಿಗೆ ಆದರ್ಶ ವಿದ್ಯಾಲಯಗಳನ್ನು ಹಿಂದುಳಿದ ತಾಲೂಕಿಗೆ ಒಂದರಂತೆ ಪ್ರಾರಂಭಿಸಲಾಯಿತು. 2010–11 ರಲ್ಲಿ ಆದರ್ಶ ವಿದ್ಯಾಲಯಗಳು ಕಾರ್ಯವನ್ನು ಪ್ರಾರಂಭಿಸಿದ್ದು 2019–20 ನೇ ಶೈಕ್ಷಣಿಕ ವರ್ಷಕ್ಕೆ 10 ವರ್ಷಗಳಾಗಿರುತ್ತವೆ. ಅವುಗಳ ವಸ್ತುಸ್ಥಿತಿ ಯನ್ನು ತಿಳಿದುಕೊಳ್ಳುವುದು ಈ ಅಧ್ಯಯನದ ಉದ್ದೇಶವಾಗಿತ್ತು. ಅದರಂತೆ ಸಂಶೋಧನೆಯ ಫಲಿತಾಂಶಗಳನ್ನು ಪಟ್ಟಿ ಮಾಡಲಾಗಿದೆ.


1. 32 ಕೊಠಡಿಗಳನ್ನು ಹೊಂದಿದ ವಿಶಾಲವಾದ ಕಟ್ಟಡವನ್ನು ಹೊಂದಿರುವುದು.
2. ವಿಶಾಲವಾದ ಕಟ್ಟಡವನ್ನು ಹೊಂದಿರುವ ಆದರ್ಶ ವಿದ್ಯಾಲಯಗಳಿಗೆ ಕಂಪೌಂಡ ಇಲ್ಲದಿರುವದು.
3. ಆದರ್ಶ ವಿದ್ಯಾಲಯಗಳ ಎಸ್.ಎಸ್.ಎಲ್.ಸಿ ಪರೀಕ್ಷೆ ಫಲಿತಾಂಶ 2014–15 ರಿಂದ 2018–19 ರವರೆಗೆ ಪ್ರಗತಿಯಲ್ಲಿದ್ದು ಉತ್ತಮವಾಗಿರುವದು.
4. ಪ್ರಾಯೋಗಿಕ ಮತ್ತು ಚಟುವಟಿಕೆಗಳ ಮೂಲಕ ಬೋಧನೆ ಮತ್ತು ಕಲಿಕೆಗೆ ವಿಷಯಾಧಾರಿತ ಲ್ಯಾಬ್‌ಗಳನ್ನು ರಚನೆ ಮಾಡಲಾಗಿರುವದು ಆದರೆ ವಿಷಯಾಧಾರಿತ ಸಾಮಗ್ರಿಗಳು ಮತ್ತು ಕಲಿಕೋಪಕರಣಗಳು ಅವಶ್ಯಕತೆ ಯಷ್ಟು ಇಲ್ಲದಿರುವದು.
5. ಆದರ್ಶ ವಿದ್ಯಾಲಯಗಳು ಪ್ರೋಜೆಕ್ಟರ್, ಲ್ಯಾಪ್‌ಟಾಪ್‌ಗಳನ್ನು ಹೊಂದಿದ್ದು ಶಿಕ್ಷಕರು ತಮ್ಮ ವಿಷಯ ಬೋಧನೆ ಯಲ್ಲಿ ಕಂಪ್ಯೂಟರ ತಂತ್ರಜ್ಞಾನವನ್ನು ನಿರೀಕ್ಷಿಸಿದ ಪ್ರಮಾಣದಲ್ಲಿ ಬಳಕೆ ಮಾಡದಿರುವದು.
6. 2019–20ನೇ ಶೈಕ್ಷಣಿಕ ವರ್ಷದಲ್ಲಿ ಕಂಪ್ಯೂಟರ ಲ್ಯಾಬ್‌ಗಳು ಮಂಜೂರಾಗಿರುವದು.
7. ಆದರ್ಶ ವಿದ್ಯಾಲಯಗಳಿಗೆ ಮೂಲಭೂತ ಸೌಕರ್ಯಗಳು ಪೂರೈಕೆ ಆಗಿರುವದು.
8. ಸುಸಜ್ಜಿತವಾದ ಪೀಠೋಪಕರಣಗಳು ಹಾಗೂ ಶಿಕ್ಷಕರು, ಸಿಬ್ಬಂದಿ ಮತ್ತು ವಿದ್ಯಾರ್ಥಿಗಳಿಗೆ ಆಸನ ವ್ಯವಸ್ಥೆ ಅವಶ್ಯಕತೆಯಷ್ಟು ಇರುವದು.
9. ಆದರ್ಶ ವಿದ್ಯಾಲಯಗಳು ಹೆಣ್ಣು ಮತ್ತು ಗಂಡು ವಿದ್ಯಾರ್ಥಿಗಳಿಗೆ ಪ್ರತ್ಯೇಕ ಶೌಚಾಲಯಗಳನ್ನು ಹೊಂದಿದ್ದರೂ

ಇದರ ಬಳಕೆ ತೃಪ್ತಿಕರ ಇಲ್ಲದಿರುವದು.

10. ಮಕ್ಕಳ ದೈಹಿಕ ಮತ್ತು ಮಾನಸಿಕ ಬೆಳವಣಿಗೆಗೆ ಅವಶ್ಯಕವಾದ ಒಳಾಂಗಣ ಮತ್ತು ಹೊರಾಂಗಣ ಪೂರ್ಣ ಪ್ರಮಾಣದ ಆಟದ ಮೈದಾನ ಇಲ್ಲದಿರುವದು.
11. ಗ್ರಂಥಾಲಯವು ವಿಶಾಲವಾದ ಕೋಣೆಯಲ್ಲಿ ಮಕ್ಕಳು ಕುಳಿತು ಓದಲು ಆಸನಗಳ ವ್ಯವಸ್ಥೆಯನ್ನು ಹೊಂದಿದ್ದು ವಿದ್ಯಾರ್ಥಿಗಳಿಗೆ ಪುಸ್ತಕಗಳನ್ನು ಓದಲು ನೀಡುತ್ತಿರುವದು.
12. ಆದರ್ಶ ವಿದ್ಯಾಲಯಗಳಲ್ಲಿ ವೃತ್ತಿ ಶಿಕ್ಷಣ ಸಾಮಗ್ರಿಗಳನ್ನು ಖರೀದಿಸಲಾಗಿದ್ದು ಸಂಗೀತ , ವೃತ್ತಿ ಶಿಕ್ಷಣ ಶಿಕ್ಷಕರ ನೇಮಕಾತಿ ಆಗಿರದ ಕಾರಣ ಅವುಗಳನ್ನು ಸಮರ್ಪಕವಾಗಿ ಬಳಸಿಕೊಳ್ಳದಿರುವದು.
13. ವಿದ್ಯಾರ್ಥಿಗಳು ದೂರದೂರದ ಗ್ರಾಮಗಳಿಂದ ಪ್ರತಿದಿನ ಬಂದು ಹೋಗಬೇಕಾದರಿಂದ ಶಾಲಾ ವೇಳೆಗೆ ಸರಿಯಾಗಿ ಬರಲು ಸಾರಿಗೆ ವ್ಯವಸ್ಥೆ ಇಲ್ಲದಿರುವದು.
14. ಆದರ್ಶ ವಿದ್ಯಾಲಯಗಳು ಸನಿವಾಸ ಇರಲಾರದ್ದು ವಿದ್ಯಾರ್ಥಿಗಳಿಗೆ ದೂರದ ಗ್ರಾಮಗಳಿಂದ ಪ್ರತಿದಿನ ಬಂದು ಹೋಗಬೇಕಾದರಿಂದ ಪ್ರಯಾಣದಲ್ಲಿ ಹೆಚ್ಚಿನ ಸಮಯ ವ್ಯಯವಾಗುತ್ತಿದ್ದು ಹಾಗೂ ದೈಹಿಕ ಆಯಾಸವಾಗುತ್ತಿದ್ದು ಇದು ಅವರ ಕಲಿಕೆ ಮೇಲೆ ಪರಿಣಾಮ ಬೀರುತ್ತಿರುವದು.
15. ಅವಶ್ಯಕ ಪ್ರೋಗಾಲಯ ಸಾಮಗ್ರಿಗಳು, ಸಲಕರಣೆಗಳು ಹಾಗೂ ರಾಸಾಯನಿಕಗಳು ಸಾಕಷ್ಟು ಸಂಖ್ಯೆಯಲ್ಲಿ ಲಭ್ಯವಿರುವದು.
16. ಕೆಲವು ಆದರ್ಶ ವಿದ್ಯಾಲಯಗಳು ತಾಲೂಕು ಕೇಂದ್ರದಿಂದ 5 ಕಿ.ಮೀ. ವ್ಯಾಪ್ತಿಗಿಂತಲೂ ಹೆಚ್ಚು ದೂರದಲ್ಲಿ ಇರುವದು.



## ಆದರ್ಶ ಶಾಲೆಗಳ ವಸ್ತುಸ್ಥಿತಿ ಶೇ. ದಲ್ಲಿ




1. ವಿಶಾಲವಾದ ಕಟ್ಟಡ ಹೊಂದಿರುವುದು.
2. ಕಂಪೌಂಡ ಹೊಂದಿರುವುದು.
3. ಎಸ್.ಎಸ್.ಎಲ್.ಸಿ. ಪರೀಕ್ಷೆ ಫಲಿತಾಂಶ ಪ್ರಗತಿ.
4. ವಿಷಯಾಧಾರಿತ ಕಲಿಕೋಪಕರಣಗಳ ಲಭ್ಯತೆ.
5. ಶಿಕ್ಷಕರ ಬೋಧನೆಯಲ್ಲಿ ಕಂಪ್ಯೂಟರ್ ಬಳಕೆ.
6. ಕಂಪ್ಯೂಟರ್ ಲ್ಯಾಬ್‌ಗಳ ಲಭ್ಯತೆ.
7. ಮೂಲಭೂತ ಸೌಕರ್ಯಗಳ ಪೂರೈಕೆ.
8. ಮಕ್ಕಳಿಗೆ ಶಿಕ್ಷಕರಿಗೆ ಮತ್ತು ಸಿಬ್ಬಂದಿಗೆ ಎಲ್ಲರಿಗೂ ಆಸನಗಳ ವ್ಯವಸ್ಥೆ.
9. ಶೌಚಾಲಯಗಳ ಬಳಕೆ.
10. ಸುಸಜ್ಜಿತವಾದ ಒಳಾಂಗಣ ಮತ್ತು ಹೊರಾಂಗಣ ಕ್ರೀಡಾ ಸೌಕರ್ಯ.
11. ಗ್ರಂಥಾಲಯಗಳ ಬಳಕೆ.
13. ವೃತ್ತಿ ಶಿಕ್ಷಣ ಸಾಮಗ್ರಿಗಳ ಬಳಕೆ.
14. ವಿದ್ಯಾರ್ಥಿಗಳಿಗೆ ಸನಿವಾಸ ಇರಲಾರದ್ದು ಅವರ ಶಿಕ್ಷಣದ ಮೇಲೆ ಪರಿಣಾಮ.
15. ಪ್ರಯೋಗಾಲಯ ಸಾಮಗ್ರಿಗಳು, ಸಲಕರಣೆಗಳು ಹಾಗೂ ರಾಸಾಯನಿಕಗಳ ಲಭ್ಯತೆ.
16. ಆದರ್ಶ ವಿದ್ಯಾಲಯಗಳು 5ಕಿ.ಮೀ. ವ್ಯಾಪ್ತಿಗಿಂತ ದೂರವಿರುವುದು.

# ಅಧ್ಯಾಯ : 5 ಸಾರಾಂಶ ಮತ್ತು ಸಮಾರೋಪ

## 5.1 ಪೀಠಿಕೆ :

ಅಧ್ಯಯನ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಸಂಶೋಧನೆಯ ಯೋಜನೆಯನ್ನು ರೂಪುಗೊಳಿಸಿ ಅದರಂತೆ ದತ್ತಾಂಶಗಳ ಸಂಗ್ರಹಣಾ ಕಾರ್ಯವು ಯಶಸ್ವಿಯಾಗಿ ಮುಕ್ತಾಯಗೊಂಡರೆ ಸಂಶೋಧನಾ ಕಾರ್ಯವು ಬಹಳಷ್ಟು ಮಟ್ಟಿಗೆ ಪೂರ್ಣಗೊಂಡಿತು ಎಂದು ಭಾವಿಸಬಹುದು. ಸಂಶೋಧಕರು ಅಧ್ಯಯನ ವಿಷಯವಾದ **" ಆದರ್ಶ ಶಾಲೆಗಳ ವಸ್ತುಸ್ಥಿತಿ ಅಧ್ಯಯನ "** ಕುರಿತು ಪ್ರಶ್ನಾವಳಿ , ವೀಡಿಯೋ ಮುಂತಾದ ಮಾಹಿತಿ ಸಂಗ್ರಹಣಾ ತಂತ್ರಗಳನ್ನು ಬಳಸಿ ಕಲಬುರಗಿ ಜಿಲ್ಲೆಯ ಅಫಜಲಪೂರ, ಆಳಂದ, ಚಿಂಚೋಳಿ, ಚಿತ್ತಾಪೂರ, ಜೇವರ್ಗಿ, ಕಲಬುರಗಿ ದಕ್ಷಿಣ ವಲಯ ಹಾಗೂ ಸೇಡಂ ತಾಲೂಕುಗಳ ಆದರ್ಶ ವಿದ್ಯಾಲಯಗಳನ್ನು ಸಂದರ್ಶಿಸಿ ಮುಖ್ಯ ಶಿಕ್ಷಕರು, ಸಹ ಶಿಕ್ಷಕರು, ವಿದ್ಯಾರ್ಥಿಗಳು ಮತ್ತು ಪಾಲಕರಿಂದಲೇ ನೇರವಾಗಿ ಮಾಹಿತಿಯನ್ನು ಸಂಗ್ರಹಿಸಲಾಗಿದೆ.

## 5.2 ಸಂಶೋಧನೆಯಲ್ಲಿ ಕಂಡು ಬಂದ ಪ್ರಮುಖ ಅಂಶಗಳು :

ಸಂಶೋಧನೆಯ ವರದಿಯನ್ನು ಆರು ಅಧ್ಯಾಯಗಳಲ್ಲಿ ಪ್ರಸ್ತುತ ಪಡಿಸಲಾಗಿದೆ. ಪ್ರತಿ ಅಧ್ಯಾಯವನ್ನು ಈ ಕೆಳಗಿನಂತೆ ಯೋಜನೆಗಳನುಸಾರ ಸಂಶೋಧಕರು ನಿರೂಪಿಸಿದ್ದಾರೆ.

ಪ್ರಥಮ ಅಧ್ಯಾಯವು **" ಪೀಠಿಕೆ "** ಎಂಬ ಶೀರ್ಷಿಕೆಯಾಗಿದೆ. ಇದರಲ್ಲಿ ಸಂಶೋಧನೆಯ ಹಿನ್ನೆಲೆಗೆ ಪೂರಕವಾದ ವಿಚಾರಗಳನ್ನು ಚರ್ಚಿಸಲಾಗಿದೆ. ಅಧ್ಯಯನದ ಹಿನ್ನೆಲೆಯೊಂದಿಗೆ ಸಮಸ್ಯೆ ಹುಟ್ಟಿಕೊಂಡ ಬಗೆ, ಅಧ್ಯಯನದ ಅಗತ್ಯತೆ ಮತ್ತು ಪ್ರಾಮುಖ್ಯತೆ, ಸಮಸ್ಯೆಯ ನಿರೂಪಣೆ, ಸಂಶೋಧನೆಯ ಪ್ರಶ್ನೆಗಳು, ಅಧ್ಯಯನದ ಉದ್ದೇಶಗಳು ಹಾಗೂ ಅಧ್ಯಯನದ ವಿಷಯಕ್ಕೆ ಪೂರಕವಾದ ಸೈದ್ಧಾಂತಿಕ ವಿಚಾರಗಳನ್ನು ಈ ಅಧ್ಯಾಯವು ಒಳಗೊಂಡಿದೆ. ಜೊತೆಗೆ ಅಧ್ಯಯನದ ವ್ಯಾಪ್ತಿಯನ್ನು ವಿವರಿಸಲಾಗಿದೆ.

ಎರಡನೆಯ ಅಧ್ಯಾಯ **" ಸಂಬಂಧಿತ ಸಾಹಿತ್ಯದ ಅವಲೋಕನ "** ಎಂಬ ಶೀರ್ಷಿಕೆಯಾಗಿದೆ. ಇದರಲ್ಲಿ ಪ್ರಸ್ತುತ ಅಧ್ಯಯನದ ಅರ್ಥ ಮತ್ತು ವ್ಯಾಖ್ಯೆಗಳನ್ನು ತಿಳಿಸಲಾಗಿದೆ. ಹಿಂದಿನ ಜ್ಞಾನದ ತಳಹದಿಯ ಮೇಲೆ ಹೊಸ ಜ್ಞಾನವನ್ನು ನೀಡುವುದು ಸಂಶೋಧನೆಯ ಕಾರ್ಯವಾಗಿದ್ದು ಸಂಬಂಧಿತ ಸಾಹಿತ್ಯದ ಅವಲೋಕನದ ಅಗತ್ಯತೆ ಮತ್ತು ಮಹತ್ವವನ್ನು ಕುರಿತು ವಿವರಿಸಲಾಗಿದೆ. ಹಿಂದಿನ ಸಂಶೋಧನೆಗಳ ಹಾಗೂ ಸಂಶೋಧನಾ ವಿಷಯಕ್ಕೆ ಸಂಬಂಧಿಸಿದ ಮಾಹಿತಿಗಳ ಸ್ಥೂಲ ಪರಿಚಯವನ್ನು ಪ್ರಸ್ತುತ ಅಧ್ಯಾಯದಲ್ಲಿ ಮಾಡಿಕೊಡಲಾಗಿದೆ.

ಮೂರನೆಯ ಅಧ್ಯಾಯ **" ಸಂಶೋಧನಾ ವಿನ್ಯಾಸ "** ಎಂಬ ಶೀಷಿಕೆಯಡಿಯಲ್ಲಿ ನಿರೂಪಿಸಲಾಗಿದೆ. ಈ ಅಧ್ಯಾಯದಲ್ಲಿ ಪ್ರಸ್ತುತ ಅಧ್ಯಯನದಲ್ಲಿ ಸಂಶೋಧಕನು ಅನುಸರಿಸಿದ ವಿಧಾನಗಳನ್ನೆಲ್ಲವನ್ನೂ ಹಂತಹಂತವಾಗಿ ವಿವರಿಸಲಾಗಿದೆ. ನಮೂನೆಗಳ ಆಯ್ಕೆ, ದತ್ತಾಂಶ ಸಂಗ್ರಹಣೆಗೆ ಬಳಸಿದ ಸಾಧನಗಳ ವಿವರ, ದತ್ತಾಂಶ ಸಂಗ್ರಹಣೆಯ ವಿಧಾನ, ದತ್ತಾಂಶ ಸಂಗ್ರಹಣೆ, ಅಧ್ಯಯನಕ್ಕೆ ಒಳಪಟ್ಟ ಶಾಲೆಗಳ ವಿವರ ಹಾಗೂ ಸಂಖ್ಯಾಶಾಸ್ತ್ರೀಯ ತಂತ್ರಗಳನ್ನು ಕುರಿತು ವಿವರಿಸಲಾಗಿದೆ.

ನಾಲ್ಕನೆಯ ಅಧ್ಯಾಯಕ್ಕೆ **" ದತ್ತಾಂಶ ವಿಶ್ಲೇಷಣೆ ಮತ್ತು ಅರ್ಥೈಸುವಿಕೆ "** ಎಂಬ ಶೀರ್ಷಿಕೆ ನೀಡಲಾಗಿದೆ. ಈ ಅಧ್ಯಾಯದಲ್ಲಿ ದತ್ತಾಂಶ ವಿಶ್ಲೇಷಣೆ ಮತ್ತು ಅರ್ಥೈಸುವಿಕೆಯನ್ನು ವಿವರಿಸಲಾಗಿದೆ. ಪ್ರಶ್ನೇವಾರು ವಿಶ್ಲೇಷಣೆಯನ್ನು ಮಾಡಲಾಗಿದೆ. ಸಂಗ್ರಹಿಸಿದ ದತ್ತಾಂಶಗಳನ್ನು ಸಂಕಲಿಸಿ, ಸಂಕೇತೀಕರಿಸಿ, ಸಂಕ್ಷೇಪಿಸಿ, ಸಂಖ್ಯಾಶಾಸ್ತ್ರೀಯ ನಿಯಮಗಳನುಸಾರ ಮತ್ತು ಗ್ರಾಫನೊಂದಿಗೆ ವಿಶ್ಲೇಷಿಸಲಾಗಿದೆ. ಹಾಗೂ ಪ್ರಾಕಲ್ಪನೆಗಳನುಸಾರ ದೊರೆತ ಫಲಿತಾಂಶಗಳನ್ನು ಅರ್ಥೈಸಲಾಗಿದೆ.

ಐದನೆಯ ಅಧ್ಯಾಯಕ್ಕೆ **" ಸಾರಾಂಶ ಮತ್ತು ಸಮಾರೋಪ "** ಎಂಬ ಶೀರ್ಷಿಕೆ ನೀಡಲಾಗಿದೆ. ಈ ಅಧ್ಯಾಯವು ಮೊದಲ ನಾಲ್ಕು ಅಧ್ಯಾಯಗಳ ಒಟ್ಟು ಸಾರವಾಗಿದೆ. ಸಂಶೋಧನಾ
ವಿಷಯದ ನಿರೂಪಣೆಯಿಂದ ಆರಂಭಗೊಂಡು ದತ್ತಾಂಶ ವಿಶ್ಲೇಷಣೆಯವರೆಗೆ ಸಂಶೋಧನೆಯಲ್ಲಿ ಅನುಸರಿಸಿದ ಕ್ರಮಗಳನ್ನು ಸಂಕ್ಷಿಪ್ತವಾಗಿ ವಿವರಿಸಲಾಗಿದೆ. ಅಧ್ಯಾಯದ ಕೊನೆಯಲ್ಲಿ ಅಧ್ಯಯನದ ಫಲಿತಾಂಶ, ತೀರ್ಮಾನಗಳು ಮತ್ತು ಭವಿಷ್ಯದಲ್ಲಿ ಕೈಗೊಳ್ಳಬಹುದಾದ ಸಂಶೋಧನೆಗೆ ನೆರವಾಗಬಲ್ಲ ಶಿಫಾರಸ್ಸು / ಸಲಹೆಗಳನ್ನು ಮಾಡಲಾಗಿದೆ. ಹಾಗೂ ಅಂತಿಮವಾಗಿ ಉಪಸಂಹಾರವನ್ನು ಮಾಡಲಾಗಿದೆ.

ಆರನೆಯ ಅಧ್ಯಾಯವು ವರದಿಯ ಅಂತಿಮ ಅಧ್ಯಾಯವಾಗಿದ್ದು ಇದಕ್ಕೆ **" ಉಲ್ಲೇಖಗಳು "** ಎಂಬ ಶೀರ್ಷಿಕೆ ನೀಡಲಾಗಿದೆ. ಪ್ರಸ್ತುತ ಅಧ್ಯಾಯದಲ್ಲಿ ಸಂಶೋಧನೆಗೆ ಪೂರಕವಾದ ಆಧಾರ ಗ್ರಂಥಗಳ ಸೂಚಿ ನೀಡಲಾಗಿದೆ. ಅನುಬಂಧಗಳಲ್ಲಿ ಸಂಶೋಧನೆಯಲ್ಲಿ ದತ್ತಾಂಶ ಸಂಗ್ರಹಣೆಗಾಗಿ ಬಳಸಿದ ಪ್ರಶ್ನಾವಳಿಯ ಪ್ರತಿ ಲಗತ್ತಿಸಲಾಗಿದೆ. ಹಾಗೂ ದತ್ತಾಂಶ ಸಂಗ್ರಹಿಸಲು ಸಂದರ್ಶಿಸಿದ ಆದರ್ಶ ಶಾಲೆಗಳ ಫೋಟೋಗಳನ್ನು ಲಗತ್ತಿಸಲಾಗಿದೆ.

## 5.3 ಅಧ್ಯಯನದ ಫಲಿತಾಂಶ :

**" ಆದರ್ಶ ಶಾಲೆಗಳ ವಸ್ತುಸ್ಥಿತಿ ಅಧ್ಯಯನ "** ಎಂಬ ವಿಷಯದ ಅಡಿಯಲ್ಲಿ ಈ ಅಧ್ಯಯನವನ್ನು ಕೈಗೊಳ್ಳಲಾಯಿತು. ಸಪ್ಟೆಂಬರ್ 2004 ರಲ್ಲಿ ಸ್ಥಾಪನೆಯಾದ ಕೇಂದ್ರ ಶಿಕ್ಷಣ ಸಲಹಾ ಮಂಡಳಿಯ ಸಪ್ಟೆಂಬರ್ 2005 ರ ವರದಿ ಹಾಗೂ ಯೋಜನಾ ಆಯೋಗದ ಶಿಫಾರಸ್ಸಿನಂತೆ ಕೇಂದ್ರೀಯ ವಿದ್ಯಾಲಯ ಮಾದರಿಯಲ್ಲಿ ಮೂಲಭೂತ ಸೌಕರ್ಯಗಳು, ಶಿಕ್ಷಕರು–ಮಕ್ಕಳ ಅನುಪಾತ, ಐ.ಸಿ.ಟಿ ಬಳಕೆ, ಸಮಗ್ರ ಶೈಕ್ಷಣಿಕ ವಾತಾವರಣ, ಸೂಕ್ತ ಪಠ್ಯಕ್ರಮ ಮತ್ತು ಫಲಿತಾಂಶಕ್ಕೆ ಒತ್ತು ನೀಡುವ ಗ್ರಾಮೀಣ ಭಾಗದ ಬಡ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಆಂಗ್ಲ ಮಾಧ್ಯಮದಲ್ಲಿ ಗುಣಾತ್ಮಕ ಶಿಕ್ಷಣ ಒದಗಿಸುವ ಗುರಿಯೊಂದಿಗೆ ಆದರ್ಶ ವಿದ್ಯಾಲಯಗಳನ್ನು ಹಿಂದುಳಿದ ತಾಲೂಕಿಗೆ ಒಂದರಂತೆ ಪ್ರಾರಂಭಿಸಲಾಯಿತು. 2010–11 ರಲ್ಲಿ ಆದರ್ಶ ವಿದ್ಯಾಲಯಗಳು ಕಾರ್ಯವನ್ನು ಪ್ರಾರಂಭಿಸಿದ್ದು 2019–20 ನೇ ಶೈಕ್ಷಣಿಕ ವರ್ಷಕ್ಕೆ 10 ವರ್ಷಗಳಾಗಿರುತ್ತವೆ. ಅವುಗಳ ವಸ್ತುಸ್ಥಿತಿ ಯನ್ನು ತಿಳಿದುಕೊಳ್ಳುವುದು ಈ ಅಧ್ಯಯನದ ಉದ್ದೇಶವಾಗಿತ್ತು. ಅದರಂತೆ ಸಂಶೋಧನೆಯ ಫಲಿತಾಂಶಗಳನ್ನು ಪಟ್ಟಿ ಮಾಡಲಾಗಿದೆ.

1. 32 ಕೊಠಡಿಗಳನ್ನು ಹೊಂದಿದ ವಿಶಾಲವಾದ ಕಟ್ಟಡವನ್ನು ಹೊಂದಿರುವುದು.
2. ವಿಶಾಲವಾದ ಕಟ್ಟಡವನ್ನು ಹೊಂದಿರುವ ಆದರ್ಶ ವಿದ್ಯಾಲಯಗಳಿಗೆ ಕಂಪೌಂಡ ಇಲ್ಲದಿರುವದು.
3. ಆದರ್ಶ ವಿದ್ಯಾಲಯಗಳ ಎಸ್.ಎಸ್.ಎಲ್.ಸಿ ಪರೀಕ್ಷೆ ಫಲಿತಾಂಶ 2014–15 ರಿಂದ 2018–19 ರವರೆಗೆ ಪ್ರಗತಿಯಲ್ಲಿದ್ದು ಉತ್ತಮವಾಗಿರುವದು.
4. ಪ್ರಾಯೋಗಿಕ ಮತ್ತು ಚಟುವಟಿಕೆಗಳ ಮೂಲಕ ಬೋಧನೆ ಮತ್ತು ಕಲಿಕೆಗೆ ವಿಷಯಾಧಾರಿತ ಲ್ಯಾಬ್‌ಗಳನ್ನು ರಚನೆ ಮಾಡಲಾಗಿರುವದು ಆದರೆ ವಿಷಯಾಧಾರಿತ ಸಾಮುಗ್ರಿಗಳು ಮತ್ತು ಕಲಿಕೋಪಕರಣಗಳು ಅವಶ್ಯಕತೆ ಯಷ್ಟು ಇಲ್ಲದಿರುವದು.
5. ಆದರ್ಶ ವಿದ್ಯಾಲಯಗಳು ಪ್ರೋಜೆಕ್ಟರ್, ಲ್ಯಾಪ್‌ಟಾಪ್‌ಗಳನ್ನು ಹೊಂದಿದ್ದು ಶಿಕ್ಷಕರು ತಮ್ಮ ವಿಷಯ ಬೋಧನೆ ಯಲ್ಲಿ ಕಂಪ್ಯೂಟರ ತಂತ್ರಜ್ಞಾನವನ್ನು ನಿರೀಕ್ಷಿಸಿದ ಪ್ರಮಾಣದಲ್ಲಿ ಬಳಕೆ ಮಾಡದಿರುವದು.
6. 2019–20ನೇ ಶೈಕ್ಷಣಿಕ ವರ್ಷದಲ್ಲಿ ಕಂಪ್ಯೂಟರ ಲ್ಯಾಬ್‌ಗಳು ಮಂಜೂರಾಗಿರುವದು.
7. ಆದರ್ಶ ವಿದ್ಯಾಲಯಗಳಿಗೆ ಮೂಲಭೂತ ಸೌಕರ್ಯಗಳು ಪೂರೈಕೆ ಆಗಿರುವದು.
8. ಸುಸಜ್ಜಿತವಾದ ಪೀಠೋಪಕರಣಗಳು ಹಾಗೂ ಶಿಕ್ಷಕರು, ಸಿಬ್ಬಂದಿ ಮತ್ತು ವಿದ್ಯಾರ್ಥಿಗಳಿಗೆ ಆಸನ ವ್ಯವಸ್ಥೆ ಅವಶ್ಯಕತೆಯಷ್ಟು ಇರುವದು.

9. ಆದರ್ಶ ವಿದ್ಯಾಲಯಗಳು ಹೆಣ್ಣು ಮತ್ತು ಗಂಡು ವಿದ್ಯಾರ್ಥಿಗಳಿಗೆ ಪ್ರತ್ಯೇಕ ಶೌಚಾಲಯಗಳನ್ನು ಹೊಂದಿದ್ದರೂ ಇದರ ಬಳಕೆ ತೃಪ್ತಿಕರ ಇಲ್ಲದಿರುವದು.

10. ಮಕ್ಕಳ ದೈಹಿಕ ಮತ್ತು ಮಾನಸಿಕ ಬೆಳವಣಿಗೆಗೆ ಅವಶ್ಯಕವಾದ ಒಳಾಂಗಣ ಮತ್ತು ಹೊರಾಂಗಣ ಪೂರ್ಣ ಪ್ರಮಾಣದ ಆಟದ ಮೈದಾನ ಇಲ್ಲದಿರುವದು.

11. ಗ್ರಂಥಾಲಯವು ವಿಶಾಲವಾದ ಕೋಣೆಯಲ್ಲಿ ಮಕ್ಕಳು ಕುಳಿತು ಓದಲು ಆಸನಗಳ ವ್ಯವಸ್ಥೆಯನ್ನು ಹೊಂದಿದ್ದು ವಿದ್ಯಾರ್ಥಿಗಳಿಗೆ ಪುಸ್ತಕಗಳನ್ನು ಓದಲು ನೀಡುತ್ತಿರುವದು.

12. ಆದರ್ಶ ವಿದ್ಯಾಲಯಗಳಲ್ಲಿ ವೃತ್ತಿ ಶಿಕ್ಷಣ ಸಾಮಗ್ರಿಗಳನ್ನು ಖರೀದಿಸಲಾಗಿದ್ದು ಸಂಗೀತ , ವೃತ್ತಿ ಶಿಕ್ಷಣ ಶಿಕ್ಷಕರ ನೇಮಕಾತಿ ಆಗಿರದ ಕಾರಣ ಅವುಗಳನ್ನು ಸಮರ್ಪಕವಾಗಿ ಬಳಸಿಕೊಳ್ಳದಿರುವದು.

13. ವಿದ್ಯಾರ್ಥಿಗಳು ದೂರದೂರದ ಗ್ರಾಮಗಳಿಂದ ಪ್ರತಿದಿನ ಬಂದು ಹೋಗಬೇಕಾದರಿಂದ ಶಾಲಾ ವೇಳೆಗೆ ಸರಿಯಾಗಿ ಬರಲು ಸಾರಿಗೆ ವ್ಯವಸ್ಥೆ ಇಲ್ಲದಿರುವದು.

14. ಆದರ್ಶ ವಿದ್ಯಾಲಯಗಳು ಸನಿವಾಸ ಇರಲಾರದ್ದು ವಿದ್ಯಾರ್ಥಿಗಳಿಗೆ ದೂರದ ಗ್ರಾಮಗಳಿಂದ ಪ್ರತಿದಿನ ಬಂದು ಹೋಗಬೇಕಾದರಿಂದ ಪ್ರಯಾಣದಲ್ಲಿ ಹೆಚ್ಚಿನ ಸಮಯ ವ್ಯಯವಾಗುತ್ತಿದ್ದು ಹಾಗೂ ದೈಹಿಕ ಆಯಾಸವಾಗುತ್ತಿದ್ದು ಇದು ಅವರ ಕಲಿಕೆ ಮೇಲೆ ಪರಿಣಾಮ ಬೀರುತ್ತಿರುವದು.

15. ಅವಶ್ಯಕ ಪ್ರೋಗಾಲಯ ಸಾಮಗ್ರಿಗಳು, ಸಲಕರಣೆಗಳು ಹಾಗೂ ರಾಸಾಯನಿಕಗಳು ಸಾಕಷ್ಟು ಸಂಖ್ಯೆಯಲ್ಲಿ ಲಭ್ಯವಿರುವದು.

16. ಕೆಲವು ಆದರ್ಶ ವಿದ್ಯಾಲಯಗಳು ತಾಲೂಕು ಕೇಂದ್ರದಿಂದ 5 ಕಿ.ಮೀ. ವ್ಯಾಪ್ತಿಗಿಂತಲೂ ಹೆಚ್ಚು ದೂರದಲ್ಲಿ ಇರುವದು.

## 5.4 ತೀರ್ಮಾನಗಳು :

1. ಆದರ್ಶ ವಿದ್ಯಾಲಯ 32 ಕೊಠಡಿಗಳನ್ನು ಹೊಂದಿದ ವಿಶಾಲವಾದ ಕಟ್ಟಡವನ್ನು ಹೊಂದಿದ್ದು ಸೃಜನಾತ್ಮಕವಾಗಿ ಹಾಗೂ ಇತರ ಚಟುವಟಿಕೆಗಳಿಗೆ ಕೊಠಡಿಗಳನ್ನು ಬಳಸಲು ಅವಕಾಶವಿರುತ್ತದೆ. ಆದರೆ ಅನೇಕ ಕೊಠಡಿಗಳು ಖಾಲಿಯಿದ್ದು ಬಳಸಿಕೊಳ್ಳದೇ ಇರುವದು.
2. 2010–11ರಲ್ಲಿ ಆದರ್ಶ ವಿದ್ಯಾಲಯಗಳು ಪ್ರಾರಂಭವಾಗಿದ್ದು 2019–20ನೇ ಶೈಕ್ಷಣಿಕ ವರ್ಷಕ್ಕೆ 10 ವರ್ಷ ಗಳಾಗಿದ್ದರೂ ವಿಶಾಲವಾದ ಕಟ್ಟಡಕ್ಕೆ ಕಂಪೌಂಡ ಇಲ್ಲದೇ ಇರುವದು.
3. ವಿಶಾಲವಾದ ಕಟ್ಟಡವನ್ನು ಹೊಂದಿರುವ ಆದರ್ಶ ವಿದ್ಯಾಲಯಗಳ ಸ್ವಚ್ಛತೆ ಹಾಗೂ ಕಛೇರಿ ಕಾರ್ಯಕ್ಕೆ ಕೇವಲ ಒಬ್ಬ ಖಾಸಗಿ ಸೇವಕನನ್ನು ನಿಯೋಜನೆ ಮಾಡಿಕೊಂಡಿರುವದು.
4. ಆದರ್ಶ ವಿದ್ಯಾಲಯಗಳು ಗಂಡು ಮತ್ತು ಹೆಣ್ಣು ವಿದ್ಯಾರ್ಥಿಗಳಿಗೆ ಪ್ರತ್ಯೇಕ ಶೌಚಾಲಯಗಳನ್ನು ಹೊಂದಿದ್ದರೂ ಕೇವಲ ಹೆಣ್ಣು ವಿದ್ಯಾರ್ಥಿನಿಯರು ಶೌಚಾಲಯ ಬಳಸುತ್ತಿದ್ದು ಗಂಡು ವಿದ್ಯಾರ್ಥಿಗಳಿಗೆ ಹೊರಗೆ ಬಯಲಿಗೆ ಕಳಿಸುತ್ತಿರುವದು.
5. ನೀರಿನ ವ್ಯವಸ್ಥೆ ಹೊಂದಿದ್ದರೂ ಕೆಲವು ಆದರ್ಶ ವಿದ್ಯಾಲಯಗಳು ಕಟ್ಟಡದ ಒಳಗಡೆ ಹಾಗೂ ಹೊರಗಡೆ ಸಾಕಷ್ಟು ಸ್ಥಳಾವಕಾಶವಿದ್ದರೂ ಕೈತೋಟವನ್ನು ಮಾಡದಿರುವದು.
6. ಆದರ್ಶ ವಿದ್ಯಾಲಯಗಳಲ್ಲಿ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿಗಳ ಕೊರತೆ ಇರುವದು.
7. ಇನ್ನೂ ಕೆಲವು ಆದರ್ಶ ವಿದ್ಯಾಲಯಗಳಲ್ಲಿ ಸಮರ್ಪಕವಾಗಿ ಎಲ್ಲ ವಿಷಯಗಳ ವಿಷಯಾಧಾರಿತ ಲ್ಯಾಬ್ ಗಳ ರಚನೆ ಆಗದೇ ಇರುವುದು.
8. ಕೆಲವು ಆದರ್ಶ ವಿದ್ಯಾಲಯಗಳ ವಿಜ್ಞಾನ ಲ್ಯಾಬ್‌ನಲ್ಲಿ ಸಾಕಷ್ಟು ಸಾಮಗ್ರಿಗಳು ಇಲ್ಲದಿರುವದು ಹಾಗೂ ಅವುಗಳನ್ನು ಸಮರ್ಪಕವಾಗಿ ಬಳಸಿಕೊಳ್ಳದಿರುವದು.
9. ಶಾಲಾ ವೇಳೆಗೆ ಸರಿಯಾಗಿ ಸಾರಿಗೆ ವ್ಯವಸ್ಥೆ ಇರಲಾರದ ಕಾರಣ ಕೆಲವು ಕಡೆ ಸಾರಿಗೆ ವ್ಯವಸ್ಥೆಗೆ ಅನುಗುಣವಾಗಿ ಶಾಲಾ ಸಮಯವನ್ನು ಹೊಂದಾಣಿಕೆ ಮಾಡಿಕೊಂಡಿದ್ದು, ಸಮಯ ಹೊಂದಾಣಿಕೆಗಾಗಿ ಊಟದ ವಿರಾಮದ ವೇಳೆಯನ್ನು ಮೊಟಕುಗೊಳಿಸಿರುತ್ತಾರೆ. ಇದರಿಂದ ಮಕ್ಕಳಿಗೆ ವಿರಾಮದ ವೇಳೆಯಲ್ಲಿ ಗೆಳೆಯರೊಂದಿಗೆ ಸಮಯ ಕಳೆಯಲು ದೊರಕದಿರುವದು.
10. ಸನಿವಾಸ ಇರಲಾರದ ಕಾರಣ ದೂರದ ಊರಿಂದ ಬರುವ ಮಕ್ಕಳಿಗೆ ಅದರಲ್ಲೂ ಹೆಣ್ಣು ಮಕ್ಕಳಿಗೆ ತುಂಬಾ ತೊಂದರೆ ಆಗುತ್ತಿರುವದು.

11. ಆದರ್ಶ ವಿದ್ಯಾಲಯ 32 ಕೊಠಡಿಗಳನ್ನು ಹಾಗೂ ವಿಶಾಲವಾದ ಸ್ಥಳವನ್ನು ಹೊಂದಿದ್ದರೂ ಒಳಾಂಗಣ ಮತ್ತು ಹೊರಾಂಗಣ ಕ್ರೀಡೆಗಾಗಿ ಆಟದ ಮೈದಾನ ಇಲ್ಲದಿರುವದು.

12. ವೃತ್ತಿ ಶಿಕ್ಷಣ ಸಾಮಗ್ರಿಗಳನ್ನು ಹೊಂದಿದ್ದರೂ ವೃತ್ತಿ ಶಿಕ್ಷಕರು ಇಲ್ಲದ ಕಾರಣ ಅವುಗಳನ್ನು ಬಳಸದೇ ಇರುವದು.

13. 2019–20 ನೇ ಶೈಕ್ಷಣಿಕ ವರ್ಷದಲ್ಲಿ ಕಂಪ್ಯೂಟರ್ ಲ್ಯಾಬ್ ಮಂಜೂರಾಗಿದ್ದು ಇವು ವರ್ಷಾಂತ್ಯದಲ್ಲಿ ಕಾರ್ಯಾರಂಭ ಮಾಡಿರುವದು.

14. ಆದರ್ಶ ವಿದ್ಯಾಲಯಗಳಲ್ಲಿ ಗರಿಷ್ಠ 400 ವಿದ್ಯಾರ್ಥಿಗಳಿಗೆ ದಾಖಲಾತಿಗೆ ಅವಕಾಶವಿದ್ದು ಪೂರ್ಣ ಪ್ರಮಾಣ ದಲ್ಲಿ ದಾಖಲಾತಿ ಆಗದೇ ಇರುವದು.

15. ಆದರ್ಶ ವಿದ್ಯಾಲಯಗಳಲ್ಲಿ ಗರಿಷ್ಠ ಪ್ರಮಾಣದಲ್ಲಿ ಕನ್ನಡ ಮಾಧ್ಯಮದಿಂದ ಬಂದಂತಹ ವಿದ್ಯಾರ್ಥಿಗಳು ಇದ್ದು ಅವರು ಇಂಗ್ಲೀಷ ಭಾಷೆಯಲ್ಲಿ ಉತ್ತಮ ಕಲಿಕೆಯನ್ನು ಹೊಂದಿರುವದು.

16. ಕೆಲವು ಆದರ್ಶ ವಿದ್ಯಾಲಯಗಳು ತಾಲೂಕು ಕೇಂದ್ರದಿಂದ 5 ಕಿ.ಮೀ. ವ್ಯಾಪ್ತಿಕ್ಕಿಂತಲೂ ದೂರದಲ್ಲಿ ಇರುವದು.

### 5.5 ಶಿಫಾರಸ್ಸುಗಳು / ಸಲಹೆಗಳು :

1. ಆದರ್ಶ ಶಾಲೆಗಳು ವಿಶಾಲವಾದ 32 ಕೊಠಡಿಗಳನ್ನು ಒಳಗೊಂಡ ಕಟ್ಟಡವನ್ನು ಹೊಂದಿರುವದು. ಈ ಕೊಠಡಿಗಳನ್ನು ಪ್ರತಿ ವಿಷಯದ ಲ್ಯಾಬ್‌ಗಳಿಗಾಗಿ, ಒಳಾಂಗಣ ಕ್ರೀಡೆಗಾಗಿ, ಸಹಪಠ್ಯ ಚಟುವಟಿಕೆಗಾಗಿ ಹಾಗೂ ಇತರ ಸೃಜನಾತ್ಮಕ ಚಟುವಟಿಕೆಗಳಿಗಾಗಿ ಬಳಸಿಕೊಳ್ಳುವದು.
2. ಸ್ಥಳೀಯ ಚುನಾಯಿತ ಪ್ರತಿನಿಧಿಗಳು, ದಾನಿಗಳು, ಸಂಘ ಸಂಸ್ಥೆಗಳು ಅಥವಾ ಕೆ.ಕೆ.ಆರ್.ಡಿ.ಬಿಯನ್ನು ಸಂಪರ್ಕಿಸಿ ಶಾಲಾ ಕಂಪೌಂಡವನ್ನು ಕಟ್ಟಿಸಲು ಪ್ರಯತ್ನಿಸುವುದು.
3. ವಿಶಾಲವಾದ ಕಟ್ಟಡವನ್ನು ಹೊಂದಿರುವ ಆದರ್ಶ ವಿದ್ಯಾಲಯಗಳು ಸ್ವಚ್ಛತೆ , ಕಛೇರಿ ಕೆಲಸ ಮತ್ತು ಇತರ ಕಾರ್ಯಗಳ ಉತ್ತಮ ನಿರ್ವಹಣೆಗೆ ಸೇವಕರ ಅವಶ್ಯಕತೆ ಬಹಳಷ್ಟಿದ್ದು ಪ್ರತಿ ಆದರ್ಶ ವಿದ್ಯಾಲಯಕ್ಕೆ ಸುಮಾರು 3 ಖಾಯಂ ಸೇವಕರನ್ನು ನೇಮಿಸುವುದು.
4. ಮೂಲಭೂತ ಸೌಕರ್ಯಗಳನ್ನು ಶಾಲೆಯ ಅಗತ್ಯಕ್ಕೆ ತಕ್ಕಂತೆ, ಶಾಲಾ ಸ್ವಚ್ಛತೆ ಮತ್ತು ಸೌಂದರ್ಯೀಕರಣಕ್ಕೆ ಉಪಯುಕ್ತಕಾರಿಯಾಗಿ ಹಾಗೂ ಸಮರ್ಪಕವಾಗಿ ಬಳಸಿಕೊಳ್ಳುವುದು.
5. ಆದರ್ಶ ವಿದ್ಯಾಲಯಗಳು ವಿದ್ಯಾರ್ಥಿಗಳ ಆರೋಗ್ಯದ ದೃಷ್ಟಿಯಿಂದ ಗಂಡ ವಿದ್ಯಾರ್ಥಿಗಳಿಗೂ ಶೌಚಾಲಯ ವನ್ನು ಬಳಸಲು ಅವಕಾಶವನ್ನು ಮಾಡಿಕೊಡುವದು.
6. ಆದರ್ಶ ಶಾಲೆಯಲ್ಲಿ ನೀರಿನ ವ್ಯವಸ್ಥೆಯಿದ್ದು ಕೇವಲ ಅಗತ್ಯ ಕಾರ್ಯಗಳಿಗೆ ಮಾತ್ರ ಅದನ್ನು ಬಳಸಿಕೊಳ್ಳದೇ ಶಾಲೆಯಲ್ಲಿ ಕೈತೋಟವನ್ನು ಮಾಡಲು ಬಳಸಿಕೊಳ್ಳುವುದು.
7. ಆದರ್ಶ ವಿದ್ಯಾಲಯಗಳಲ್ಲಿ ಆಟದ ಮೈದಾನವನ್ನು ನಿರ್ಮಿಸಿ ದೈಹಿಕ ಶಿಕ್ಷಕರು ವಿದ್ಯಾರ್ಥಿಗಳಿಗೆ ಕ್ರೀಡಾ ಚಟುವಟಿಕೆ ಗಳಲ್ಲಿ ಇನ್ನೂ ಉತ್ತಮವಾಗಿ ತರಬೇತಿ ಕೊಡುವದು.
8. ಗ್ರಂಥಾಲಯಗಳಲ್ಲಿ ಮಕ್ಕಳಲ್ಲಿ ಜ್ಞಾನ ದಾಹವನ್ನು ಹೆಚ್ಚಿಸುವಂಥಹ , ಅವರಲ್ಲಿ ಸಂಶೋಧನಾ ಪ್ರವೃತ್ತಿ ಜಾಗೃತ ಗೊಳಿಸುವಂಥಹ ಮತ್ತು ಅವರಿಗೆ ಆನಂದವುಂಟು ಮಾಡುವಂಥಹ ವಿವಿಧ ವಿಷಯಗಳ ಪುಸ್ತಕಗಳ ಸಂಗ್ರಹ ಹೆಚ್ಚಿಗೆ ಮಾಡುವುದು.
9. ಮಕ್ಕಳ ಶೈಕ್ಷಣಿಕ ಪ್ರಗತಿಗೆ ಪೂರ್ಣ ಪ್ರಮಾಣದ ಶಿಕ್ಷಕರ ಅವಶ್ಯಕತೆ ಇದ್ದು ಕೊರತೆ ಇರುವ ಶಿಕ್ಷಕರನ್ನು ಅಥವಾ ಶಿಕ್ಷಕರ ಖಾಲಿ ಹುದ್ದೆಗಳನ್ನು ಭರ್ತಿ ಮಾಡುವದು.
10. ಆದರ್ಶ ವಿದ್ಯಾಲಯಗಳಲ್ಲಿ ಎಲ್ಲ ಕಾರ್ಯಗಳು Online ಮುಖಾಂತರ ಇರುವುದರಿಂದ ಹಾಗೂ ಕೆಲಸದ

ಒತ್ತಡ ಇರುವುದರಿಂದ ಬೋಧಕೇತರ ಸಿಬ್ಬಂದಿಯ ಖಾಲಿ ಹುದ್ದೆಗಳನ್ನು ಭರ್ತಿ ಮಾಡುವದು.

11. ಎಲ್ಲ ವಿಷಯಗಳ ಲ್ಯಾಬ್‌ಗಳನ್ನು ರಚಿಸಿ ಪ್ರಯೋಗಕ್ಕೆ ಮತ್ತು ಚಟುವಟಿಕೆಗಳಿಗೆ ಅವಶ್ಯಕ ಸಾಮಗ್ರಿಗಳನ್ನು, ಕಲಿಕೋಪಕರಣಗಳನ್ನು ಅಗತ್ಯತೆಗೆ ಅನುಗುಣವಾಗಿ ಸಂಗ್ರಹಿಸಿ ಅವುಗಳನ್ನು ಸೃಜನಾತ್ಮಕವಾಗಿ ನಾವಿನ್ಯವಾಗಿ ಮಕ್ಕಳಲ್ಲಿ ಹುಡುಕುವಂಥ / ಸಂಶೋಧನಾ ಪ್ರವೃತ್ತಿ ಮೂಡಿ ಸುವಂಥ ಚಟುವಟಿಕೆಗಳನ್ನು ಅಳವಡಿಸಿಕೊಂಡು ಬಳಸಿಕೊಳ್ಳುವುದು.

12. ವಿಜ್ಞಾನ ಲ್ಯಾಬ್‌ನಲ್ಲಿ ಅವಶ್ಯಕ ಪ್ರಯೋಗದ ಸಾಮಗ್ರಿಗಳನ್ನು ಲಭ್ಯ ಅನುದಾನದಲ್ಲಿ ಪೂರೈಸಿ ಪ್ರಯೋಗಗಳನ್ನು ಮಾಡುವ ಮೂಲಕ ಬೋಧನೆ ಮತ್ತು ಕಲಿಕೆಯನ್ನು ಇನ್ನೂ ಉತ್ತಮ ಗೊಳಿಸುವುದು.

13. ಆದರ್ಶ ವಿದ್ಯಾಲಯಗಳು ತಮ್ಮಲ್ಲಿ ಲಭ್ಯ ಅನುದಾನದಲ್ಲಿ ಹಾಗೂ ಇಲಾಖೆಯ ಮಾರ್ಗದರ್ಶನ ಪಡೆದು ವೃತ್ತಿ ಶಿಕ್ಷಣ ಶಿಕ್ಷಕರನ್ನು ನಿಯೋಜನೆ ಮಾಡಿಕೊಂಡು ತಮ್ಮಲ್ಲಿ ಹೊಂದಿರುವ ಹೊಲಿಗೆ ಯಂತ್ರ, ಸಂಗೀತ ವಾದ್ಯಗಳು ಮತ್ತು ತೋಟಗಾರಿಕೆ ಸಾಮಗ್ರಿಗಳನ್ನು ಸಮರ್ಪಕವಾಗಿ ಬಳಸಿಕೊಂಡು ಮಕ್ಕಳಿಗೆ ವೃತ್ತಿ ಶಿಕ್ಷಣವನ್ನು ಬೋಧನೆ ಮಾಡುವದು.

14. ಆದರ್ಶ ವಿದ್ಯಾಲಯಗಳು ಸನಿವಾಸ ಇರಲಾರದ್ದು ವಿದ್ಯಾರ್ಥಿಗಳಿಗೆ ವಿಶೇಷವಾಗಿ ಹೆಣ್ಣು ವಿದ್ಯಾರ್ಥಿನಿಯರಿಗೆ ದೂರದ ಗ್ರಾಮಗಳಿಂದ ಪ್ರತಿದಿನ ಬಂದು ಹೋಗಬೇಕಾದರಿಂದ ಹಾಗೂ ಇನ್ನೂ ಅನೇಕ ಗ್ರಾಮಗಳಿಗೆ ಸರಿಯಾಗಿ ರಸ್ತೆ ಮತ್ತು ಸಾರಿಗೆ ವ್ಯವಸ್ಥೆ ಇರದ ಕಾರಣ ಪ್ರಯಾಣದಲ್ಲಿ ದೈಹಿಕ ಆಯಾಸವಾಗುತ್ತಿದ್ದು ಇದು ಅವರ ಕಲಿಕೆ ಮೇಲೆ ಪರಿಣಾಮ ಬೀರುವದು. ಪ್ರಯುಕ್ತ ಆದರ್ಶ ವಿದ್ಯಾಲಯಗಳನ್ನು ಸನಿವಾಸ ಮಾಡಿದರೆ ವಿದ್ಯಾರ್ಥಿ/ ವಿದ್ಯಾರ್ಥಿನೀಯರಿಗೆ ಅನುಕೂಲವಾಗುವುದು.

## 5.6 ಉಪಸಂಹಾರ :

ಗ್ರಾಮೀಣ ಪ್ರದೇಶದ ಬಡ ಪಾಲಕರಿಗೆ ನಗರ ಪ್ರದೇಶದ ಪಾಲಕರಂತೆ ಹಣ ಖರ್ಚು ಮಾಡಿ ಆಂಗ್ಲ ಮಾಧ್ಯಮದಲ್ಲಿ ತಮ್ಮ ಮಕ್ಕಳಿಗೆ ಶಿಕ್ಷಣ ನೀಡಲು ಆಗಲಾರದ್ದು. ಇದರಿಂದ ಅನೇಕ ಬಡ ಪ್ರತಿಭಾವಂತ ಮಕ್ಕಳಿಗೆ ಉನ್ನತ ಶಿಕ್ಷಣ ದೊರಕಲು ಅವರು ಬದುಕಿನಲ್ಲಿ ಪ್ರಗತಿ ಸಾಧಿಸಲು ಆಗುತ್ತಿಲ್ಲ. ಸರ್ಕಾರ ಈ ದಿಶೆಯಲ್ಲಿ ಗ್ರಾಮೀಣ ಬಡ ಪ್ರತಿಭಾವಂತ ವಿದ್ಯಾರ್ಥಿಗಳು ಕೂಡಾ ಆಂಗ್ಲ ಮಾಧ್ಯಮದಲ್ಲಿ ಶಿಕ್ಷಣ ಪಡೆದು ಅವರೂ ಸಹ ಉನ್ನತ ವ್ಯಾಸಂಗ ಮಾಡಿ ಉಜ್ವಲ ಭವಿಷ್ಯ ಹೊಂದಬೇಕು ಎಂಬ ಉದ್ದೇಶದೊಂದಿಗೆ ಆದರ್ಶ ವಿದ್ಯಾಲಯಗಳನ್ನು ಪ್ರಾರಂಭಿಸಿರುತ್ತದೆ.

ಪ್ರೌಢ ಶಿಕ್ಷಣದ ಸಾರ್ವತ್ರೀಕರಣಕ್ಕಾಗಿ ಸಪ್ಟೆಂಬರ್ 2004 ರಲ್ಲಿ ಸ್ಥಾಪನೆಯಾದ ಕೇಂದ್ರ ಶಿಕ್ಷಣ ಸಲಹಾ ಮಂಡಳಿ (ಸಿಎಬಿಇ – ಸೇಂಟ್ರಲ್ ಅಡ್ವೈಸರಿ ಬೋರ್ಡ ಆಫ್ ಎಜುಕೇಷನ್)ಯ ಸಪ್ಟೆಂಬರ್ 2005 ರ ವರದಿ ಹಾಗೂ ಯೋಜನಾ ಆಯೋಗ ಕೇಂದ್ರೀಯ ವಿದ್ಯಾಲಯಗಳಲ್ಲಿರುವ ಗುಣಮಟ್ಟಕ್ಕೆ ಅನುಗುಣವಾದ ಮೂಲ ಸೌಕರ್ಯ ಹಾಗೂ ಸೌಲಭ್ಯಗಳನ್ನು, ನಿರ್ದಿಷ್ಟ ಶಿಕ್ಷಕ–ವಿದ್ಯಾರ್ಥಿ ಅನುಪಾತವನ್ನು, ಕಂಪ್ಯೂಟರ್, ಮಾಹಿತಿ ತಂತ್ರಜ್ಞಾನ, ಉತ್ತಮ ಫಲಿತಾಂಶವನ್ನು, ವಿದ್ಯಾರ್ಥಿಗಳ ಬೌದ್ಧಿಕ ಬೆಳವಣಿಗೆಗೆ ಪೂರಕವಾದ ಪಠ್ಯಕ್ರಮ ಮತ್ತು ಶೈಕ್ಷಣಿಕ ವಾತಾವರಣವನ್ನು ಹೊಂದಿ ತನ್ನ ಕಾರ್ಯಕ್ಷೇತ್ರದ ವ್ಯಾಪ್ತಿಯಲ್ಲಿ ಬೇರೆ ಶಾಲೆಗಳಿಗೆ ಆದರ್ಶ ವಿದ್ಯಾಲಯಗಳು ಮಾದರಿಯಾಗಬೇಕು ಎಂದು ಶಿಫಾರಸ್ಸು ಮಾಡಿರುತ್ತವೆ.

ಮಕ್ಕಳಿಗೆ ಸಮಗ್ರ ಶಿಕ್ಷಣ ನೀಡುವುದರೊಂದಿಗೆ ಅವರು ಸರಿಯಾದ ಆಯ್ಕೆ ಮಾಡಿ ಉನ್ನತ ಶೈಕ್ಷಣಿಕ ಮತ್ತು ವೈಯಕ್ತಿಕ ಶ್ರೇಷ್ಠತೆಯನ್ನು ಸಾಧಿಸುವಂತೆ ಮಾಡುವುದು ಮಾದರಿ ಶಾಲೆಗಳ ದೃಷ್ಟಿಯಾಗಿದೆ. ಹಾಗೂ ಪ್ರತಿಭಾವಂತ ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳನ್ನು ಗುರುತಿಸಿ ಅವರಿಗೆ ಗುಣಮಟ್ಟದ ಶಿಕ್ಷಣವನ್ನು ನೀಡುವ ಗುರಿ ಹೊಂದಿದೆ.

ಈ ಶಾಲೆಗಳು ಕೇಂದ್ರೀಯ ವಿದ್ಯಾಲಯ ಮಾದರಿ ಸಿ.ಬಿ.ಎಸ್.ಇ ಪಠ್ಯಕ್ರಮ ಅಳವಡಿಸುವ ಜೊತೆಗೆ ಮಗುವಿನ ಬೌದ್ಧಿಕ ವಿಕಸನಕ್ಕೆ ಒತ್ತು ನೀಡುವ ಅನೇಕ ಕಾರ್ಯ ತಂತ್ರಗಳನ್ನು ಒಳಗೊಂಡು ಸೂಕ್ತ ಕಟ್ಟಡ, ಊಟ ವ್ಯವಸ್ಥೆಯೊಂದಿಗೆ ಗುಣಮಟ್ಟದ ಶಿಕ್ಷಣ ನೀಡುವ ಉದ್ದೇಶಗಳನ್ನು ಹೊಂದಿವೆ. ಅದರಲ್ಲೂ ಗ್ರಾಮೀಣ ಪ್ರತಿಭಾವಂತ ವಿದ್ಯಾರ್ಥಿ, ವಿದ್ಯಾರ್ಥಿನಿಯರಿಗೆ ಆಂಗ್ಲ ಮಾಧ್ಯಮದಲ್ಲಿ ಉಚಿತ ಶಿಕ್ಷಣ ಒದಗಿಸಿ ಅವರನ್ನು ಕೂಡ ಉನ್ನತ ವ್ಯಾಸಂಗದತ್ತ ಕೊಂಡೊಯ್ಯುವುದು ಮುಖ್ಯವಾಗಿದೆ.

ಸರ್ಕಾರಿ, ಅನುದಾನಿತ, ಅನುದಾನರಹಿತ ಶಾಲೆಗಳ 5ನೇ ತರಗತಿಯ ವಿದ್ಯಾರ್ಥಿ ಆಯಾ ತಾಲೂಕ ಹಂತದಲ್ಲಿ ಅರ್ಜಿ ಹಾಕಲು ಅವಕಾಶ ಕಲ್ಪಿಸಲಾಗಿರುತ್ತದೆ. ಇವರಿಗೆ ಸ್ಪರ್ಧಾ ಪರೀಕ್ಷೆ ಮೂಲಕ ಅಯ್ಕೆ

ಮಾಡಲಾಗುವದು. ಶಾಲೆಗಳು ಕೇಂದ್ರೀಯ ವಿದ್ಯಾಲಯ ಮಾದರಿ ಯಲ್ಲಿದ್ದು ಪೂರ್ಣ ಪ್ರಮಾಣದ ಸೌಲಭ್ಯಗಳಾದ ಅವಶ್ಯಕ ತರಗತಿ ಕೊಠಡಿಗಳು, ಪ್ರಯೋಗಾಲಯ, ಗ್ರಂಥಾಲಯ, ಕಂಪ್ಯೂಟರ ಲ್ಯಾಬ್, ಪದವಿ ಹಾಗೂ ಸ್ನಾತಕೋತ್ತರ ಪದವಿಯೊಂದಿಗೆ ತರಬೇತಿ ಪಡೆದ ಶಿಕ್ಷಕರನ್ನೊಳಗೊಂಡಿರುತ್ತದೆ.

ಶೈಕ್ಷಣಿಕವಾಗಿ ಹಿಂದುಳಿದ ಆಯ್ದ ಬ್ಲಾಕಗಳಿಗೆ ಮಾತ್ರ ಈ ಶಾಲೆ ಸೀಮಿತವಾಗಿದ್ದು ಆಯ್ಕೆಯಲ್ಲಿ ಆಯಾ ತಾಲೂಕಿನ ಮಕ್ಕಳಿಗೆ ಪ್ರಥಮ ಆದ್ಯತೆ ನೀಡಲಾಗುವದು. ಈ ಶಾಲೆಗಳ ವಿದ್ಯಾರ್ಥಿಗಳಿಗೆ ಉಚಿತ ಪಠ್ಯಪುಸ್ತಕ, ಸಮವಸ್ತ್ರ, ಮಧ್ಯಾಹ್ನದ ಬಿಸಿಯೂಟವನ್ನು ಸಹ ಪೂರೈಸ ಲಾಗುತ್ತಿದೆ. ಈ ಶಾಲೆಗಳ ವಿದ್ಯಾರ್ಥಿಗಳು ಕನ್ನಡ ಮಾಧ್ಯಮದಿಂದ ಆಯ್ಕೆಯಾಗಿ ಬಂದಂಥವರು. ಅಂಥ ವಿದ್ಯಾರ್ಥಿಗಳ ಬೋಧನೆಯಲ್ಲಿ ಇಂಗ್ಲೀಷ್ ಮಾಧ್ಯಮದ ಮೂಲಕ ಕಲಿಕೆ ಅಷ್ಟು ಸುಲಭವೇನಲ್ಲ. ಇಲ್ಲಿ ಚಟುವಟಿಕೆ ಆಧಾರಿತ ಬೋಧನೆಗೆ ಒತ್ತು ನೀಡಲಾಗಿದೆ. ಅಲ್ಲದೇ ಮಕ್ಕಳ ಸರ್ವಾಂಗೀಣ ವ್ಯಕ್ತಿತ್ವ ರೂಪಿಸುವಲ್ಲಿ ಆರ್.ಎಮ್.ಎಸ್,ಎ ಚಟುವಟಿಕೆಗಳನ್ನು ಕೂಡ ಶಾಲೆಗಳಲ್ಲಿ ರಾಜ್ಯ ಸರ್ಕಾರದವರು ಅಳವಡಿಸುವ ಮೂಲಕ ಗುಣಾತ್ಮಕ ಶಿಕ್ಷಣಕ್ಕೆ ಒತ್ತು ನೀಡಿದೆ.

# ಅಧ್ಯಾಯ : 6 ಉಲ್ಲೇಖಗಳು

## 6.1 ಆಧಾರ ಗ್ರಂಥ ಸೂಚಿ :

**1**. ಕರ್ನಾಟಕ ಸರ್ಕಾರದ ಶಿಕ್ಷಣ ಇಲಾಖೆಯ ವೆಬ್‌ಸೈಟ್ (Department Of Public Intruction) ನಲ್ಲಿ ದೊರೆತ್ತಿರುವ ಮಾಹಿತಿಗಳು,

ಅ) **ಸರ್ವ ಶಿಕ್ಷಾ ಅಭಿಯಾನ ಮತ್ತು ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಾ ಅಭಿಯಾನ ಕರ್ನಾಟಕ** ವೆಬ್ ಪೇಜ್‌ನಲ್ಲಿ **:**

ಶಿರೋನಾಮೆ **: " VIDYA VAHINI – Adarsha Vidyalaya Application – List Of Adarsh Vidyalas** "

ಆ) **ಸರ್ವ ಶಿಕ್ಷಾ ಅಭಿಯಾನ ಮತ್ತು ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಾ ಅಭಿಯಾನ ಕರ್ನಾಟಕ** ವೆಬ್ ಪೇಜ್‌ನಲ್ಲಿ **:**

ಶಿರೋನಾಮೆ **: "ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಾ ಅಭಿಯಾನ– ಆದರ್ಶ ವಿದ್ಯಾಲಯಗಳು"**

**2**. ಅಂತರ್ ಜಾಲದ Google App ನಲ್ಲಿ ದೊರೆತ್ತಿರುವ ಮಾಹಿತಿಗಳು,

ಅ) https://kannadamma.net ವೆಬ್ ಪೇಜ್‌ನಲ್ಲಿ ದಿನಾಂಕ : **27/ಮಾರ್ಚ/2012** ರಂದು ಪೋಸ್ಟವಾದ **Rajeev Topannavar** ಇವರ ಲೇಖನ : **" ಗ್ರಾಮೀಣ ಆಂಗ್ಲ ಮಾಧ್ಯಮ ಶಿಕ್ಷಣಕ್ಕೆ ಆದರ್ಶ ವಿದ್ಯಾಲಯ "**

ಆ) **" ಆದರ್ಶ ವಿದ್ಯಾಲಯ ಮಾದರಿ ಶಾಲೆ ಕರ್ನಾಟಕ "**

**3**. **ಮಾನ್ಯ ಸಹನಿರ್ದೇಶಕರು, ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ – ಕರ್ನಾಟಕ ,** ರಾಜ್ಯ ಯೋಜನಾ ನಿರ್ದೇಶಕರ ಕಛೇರಿ, ಬೆಂಗಳೂರು ಇವರು **ದಿನಾಂಕ : 16–04–2010** ರಂದು ಹೊರಡಿಸಿದ ಜ್ಞಾಪನ ಪತ್ರದ ಸಂಖ್ಯೆ : **RMSA/Model Schools/1/2010-11** –

ವಿಷಯ: **"ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನದಡಿಯಲ್ಲಿ ಮಾಡೆಲ್ ಶಾಲೆಗಳನ್ನು ಪ್ರಾರಂಭಿಸುವ ಬಗ್ಗೆ"**

## 6.2 ಅನುಬಂಧಗಳು :

### ಅ) ಪ್ರಶ್ನಾವಳಿ :

### I. ಮುದ್ರಿತ ಚೆಕ್‌ಲಿಸ್ಟ್ ಮಾದರಿ ಪ್ರಶ್ನಾವಳಿ :

### i. ಮುಖ್ಯ ಶಿಕ್ಷಕರಿಂದ ಪಡೆದ ದತ್ತಾಂಶ :



**-: ಮುಖ್ಯ ಶಿಕ್ಷಕರಿಗೆ ಪ್ರಶ್ನೆಗಳು :-**

| ಕ್ರ. ಸಂ | ಪ್ರಶ್ನೆಗಳು | ಇಲ್ಲ | ಹೌದು | ಭಾಗಶ: |
|---|---|---|---|---|
| 1 | ನಿಮ್ಮ ಆದರ್ಶ ವಿದ್ಯಾಲಯಕ್ಕೆ ಸ್ವಂತ ಹಾಗೂ ಪೂರ್ಣ ಪ್ರಮಾಣದ ಕಟ್ಟಡ ಇದೆಯೇ ? | | ✓ | |
| 2 | ನೀರಿನ ಸ್ವಂತ ಮೂಲ ಇದೆಯೇ ? | | | ✓ |
| 3 | ಮಕ್ಕಳ ಸಂಖ್ಯೆಗೆ ಅನುಗುಣವಾಗಿ ಶೌಚಾಲಯ ಇದೆಯೇ ? | | ✓ | |
| 4 | ಕುರ್ಚಿ, ಟೇಬಲ, ಅಲಮಾರಾ ಇತ್ಯಾದಿ ಪೀಠೋಪಕರಣಗಳು ಅವಶ್ಯಕತೆಗೆ ಅನುಗುಣವಾಗಿ ಇವೆಯೇ ? | | | ✓ |
| 5 | ಅವಶ್ಯಕ ಪ್ರಯೋಗಾಲಯ ಸಾಮಗ್ರಿಗಳು, ಸಲಕರಣೆಗಳು ಹಾಗೂ ರಾಸಾಯನಿಕಗಳು ಲಭ್ಯ ಇವೆಯೇ ? | | | ✓ |
| 6 | ಕಲಿಕೋಪಕರಣಗಳನ್ನು ಸಮರ್ಪಕವಾಗಿ ಬಳಕೆ ಮಾಡಿಕೊಳ್ಳಲಾಗುತ್ತಿದೆಯೇ ? | | ✓ | |
| 7 | ಸುಸಜ್ಜಿತವಾದ ಒಳಾಂಗಣ ಹಾಗೂ ಹೊರಾಂಗಣ ಕ್ರೀಡಾ ಸೌಕರ್ಯ ಇದೆಯೇ ? | | | ✓ |
| 8 | ಆಂಗ್ಲ ಮಾಧ್ಯಮದಲ್ಲಿ ಬೋಧಿಸುವ ಶಿಕ್ಷಕರ ನೇಮಕಾತಿ ಆಗಿದೆಯೇ ? | | ✓ | |
| 9 | ರೋಸ್ಟರ ಪ್ರಕಾರ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿಗಳ ನೇಮಕಾತಿ ಆಗಿದೆಯೇ ? | | | ✓ |
| 10 | ಗ್ರಾಮೀಣ ಪ್ರತಿಭಾವಂತ ವಿದ್ಯಾರ್ಥಿಗಳಲ್ಲದೆ ಇತರ ಭಾಗದ ವಿದ್ಯಾರ್ಥಿಗಳಿಗೂ ದಾಖಲಾತಿ ನೀಡಲಾಗಿದೆಯೇ ? | | | ✓ |
| 11 | ನೀಡಿರುವ ಅನುದಾನವನ್ನು ಸಮರ್ಪಕವಾಗಿ ಬಳಸಲು ಎಸ್.ಡಿ.ಎಮ್.ಸಿ ಸಹಕರಿಸುವದೇ ? | | ✓ | |
| 12 | ವೃತ್ತಿ ಶಿಕ್ಷಣ ಸಾಮಗ್ರಿಗಳು ಪೂರೈಕೆ ಆಗಿವೆಯೇ ? | ✓ | | |
| 13 | ವಿಷಯಾಧಾರಿತ ಲ್ಯಾಬ್‌ಗಳ ರಚನೆ ಮಾಡಲಾಗಿದೆಯೇ ? | | ✓ | |
| 14 | ಪ್ರತಿ ತರಗತಿಗೆ 80 ರಂತೆ ಗರಿಷ್ಟ 400 ಮಕ್ಕಳ ದಾಖಲಾತಿ ಆಗಿರುವದೇ ? | | | ✓ |
| 15 | ಎಸ್.ಎಸ್.ಎಲ್.ಸಿ ಪರೀಕ್ಷೆಯ ಫಲಿತಾಂಶದಲ್ಲಿ ಪ್ರಗತಿ ಆಗಿರುತ್ತದೆಯೇ ? | | ✓ | |

ಸಹಿ ಮತ್ತು ಶೀಲು : [illegible]

ಹೆಸರು : [illegible]

ಫೋನ ನಂಬರ್ : 9900518767

ಇ ಮೇಲ್ ವಿಳಾಸ : avvmsaaland@gmail.com

HEAD MASTER
Govt. Adarsha Vidyalaya (RMSA)
English Medium School
ALAND-585302, Dist. Kalaburagi

## ii. ಸಹ ಶಿಕ್ಷಕರಿಂದ ಪಡೆದ ದತ್ತಾಂಶ :

(2)

2019-20ನೇ ಸಾಲಿನ T E ಯೋಜನೆಯ ಸಂಶೋಧನೆ

-: ಶಿಕ್ಷಕರಿಗೆ ಪ್ರಶ್ನೆಗಳು :-

| ಕ್ರ. ಸಂ | ಪ್ರಶ್ನೆಗಳು | ಇಲ್ಲ | ಹೌದು | ಭಾಗಶ: |
|---|---|---|---|---|
| 1 | ನೀರಿನ ವ್ಯವಸ್ಥೆ ಇದೆಯೇ ? | | ✓ | |
| 2 | ಹೆಣ್ಣು ಮತ್ತು ಗಂಡು ಮಕ್ಕಳಿಗೆ ಪ್ರತ್ಯೇಕ ಶೌಚಾಲಯ ಇದೆಯೇ? | | ✓ | |
| 3 | ಸಾಕಷ್ಟು ಗಿಡಮರಗಳನ್ನು ಹಚ್ಚಿ ಬೆಳೆಸಿ ಶಾಲಾ ಪರಿಸರ ಹಸಿರಾಗಿರುವದೇ ? | | ✓ | |
| 4 | ವಿಜ್ಞಾನ ಲ್ಯಾಬ್‌ನಲ್ಲಿನ ಸಲಕರಣೆಗಳು ಬಳಕೆಗೆ ಯೋಗ್ಯ ಆಗಿವೆಯೇ ? | | ✓ | |
| 5 | ವಿಷಯಾಧಾರಿತ ಕಲಿಕೋಪಕರಣಗಳು ಸಾಕಷ್ಟು ಸಂಖ್ಯೆಯಲ್ಲಿ ಇವೆಯೇ ? | | | ✓ |
| 6 | ದೈಹಿಕ ಶಿಕ್ಷಣ ಸಾಮಗ್ರಿಗಳು/ಕ್ರೀಡಾ ಸಾಮಗ್ರಿಗಳು ಸಾಕಷ್ಟು ಸಂಖ್ಯೆಯಲ್ಲಿ ಇವೆಯೇ ? | | | ✓ |
| 7 | ಆಂಗ್ಲ ಮಾಧ್ಯಮ ಇರದ ಶಿಕ್ಷಕರಿಗೆ ಆಂಗ್ಲ (ಇಂಗ್ಲಿಷ) ತರಬೇತಿ ನೀಡಲಾಗಿದೆಯೇ ? | ✓ | | |
| 8 | ಗ್ರಾಮೀಣ ಪ್ರತಿಭಾವಂತ ವಿದ್ಯಾರ್ಥಿಗಳಲ್ಲದೆ ನಗರ ವಿದ್ಯಾರ್ಥಿಗಳಿಗೂ ದಾಖಲಾತಿ ನೀಡಲಾಗಿದೆಯೇ ? | | ✓ | |
| 9 | ವಿದ್ಯಾರ್ಥಿಗಳಿಗೆ ಸನಿವಾಸ ಇರಲಾರದ್ದು ಅವರ ಶಿಕ್ಷಣದ ಮೇಲೆ ಪರಿಣಾಮ ಬೀರುತ್ತಿದೆಯೇ ? | | | ✓ |
| 10 | ಕೊಠಡಿಗಳಲ್ಲಿಯ ಫ್ಯಾನ & ವಿದ್ಯುತ್ ದ್ವೀಪಗಳು ಸರಿಯಾಗಿ ಕಾರ್ಯನಿರ್ವಹಿಸುತ್ತವೆಯೇ ? | | ✓ | |
| 11 | ವೃತಿ ಶಿಕ್ಷಣದ ಸಾಮಗ್ರಿಗಳು ಅವಶ್ಯಕತೆಯಷ್ಟು ಇವೆಯೇ ? | | | ✓ |
| 12 | ಗ್ರಂಥಾಲಯದ ವಾತಾವರಣ ವಿದ್ಯಾರ್ಥಿಗಳಲ್ಲಿ ಅನ್ವೇಷಣೆಗೆ ಸಹಾಯಕವಾಗುವಂತೆ ಇದೆಯೇ ? | | ✓ | |
| 13 | ಪಠ್ಯ ಬೋಧನೆಯಲ್ಲಿ ಕಂಪ್ಯೂಟರ್ ತಂತ್ರಜ್ಞಾನವನ್ನು ಬಳಸುತ್ತಿರಾ ? | | ✓ | |
| 14 | ಪ್ರೋಜೆಕ್ಟರ್, ಪ್ರಿಂಟರ್, ಇಂಟರ್‌ನೆಟ್ ಕನೆಕ್ಷನ್ ಇದೆಯೇ ? | | ✓ | |
| 15 | ವಿಷಯಾಧಾರಿತ ಲ್ಯಾಬ್ ಗಳು ಕಾರ್ಯನಿರ್ವಹಿಸುತ್ತಿವೆಯೇ ? | | ✓ | |

ಶಿಕ್ಷಕರ ಸಹಿ : [signature]

ಹೆಸರು : Prakash. S. Hatti

ಶಾಲೆಯ ಹೆಸರು : Govt AVEMS (RMSA) Atanoor.

ಫೋನ ನಂಬರ್ : 9632411913

Subject :- Science (CBZ).

## iii. ವಿದ್ಯಾರ್ಥಿಗಳಿಂದ ಪಡೆದ ದತ್ತಾಂಶ :

2019-20ನೇ ಸಾಲಿನ T E ಯೋಜನೆಯ ಸಂಶೋಧನೆ

1

–: ವಿದ್ಯಾಥಿಗಳಿಗೆ ಪ್ರಶ್ನೆಗಳು :–

| ಕ್ರ. ಸಂ | ಪ್ರಶ್ನೆಗಳು | ಇಲ್ಲ | ಹೌದು | ಭಾಗಶ: |
|---|---|---|---|---|
| 1 | ನಿಮ್ಮ ಆದರ್ಶ ವಿದ್ಯಾಲಯಕ್ಕೆ ಕಂಪೌಂಡ ಇದೆಯೇ ? | ✓ | | |
| 2 | ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಇದೆಯೇ ? | | ✓ | |
| 3 | ಶಾಲೆಯ ಶೌಚಾಲಯವನ್ನು ಬಳಸುತ್ತಿದ್ದಿರಾ ? | | | ✓ |
| 4 | ವಿಜ್ಞಾನ ಲ್ಯಾಬ್‌ನ್ನು ಕಲಿಕೆಗಾಗಿ ಬಳಸಲಾಗುತ್ತಿದೆಯಾ ? | | | ✓ |
| 5 | ಮ್ಯಾಪ್, ಗ್ಲೋಬ್, ಚಾರ್ಟ್ಸ್ ಇತ್ಯಾದಿ ಸಮಾಜ ವಿಜ್ಞಾನ ವಿಷಯಕ್ಕೆ ಸಂಬಂಧಿಸಿದ ಕಲಿಕೋಪಕರಣಗಳು ಇವೆಯೇ ? | | | ✓ |
| 6 | ಕ್ರೀಡೆ ಮತ್ತು ಒಳಾಂಗಣ(ಸಹಪಠ್ಯ) ಚಟುವಟಿಕೆಗಳು ನಡೆಯುತ್ತವೆಯೇ ? | | ✓ | |
| 7 | ವಿಷಯಾಧಾರಿತ ಶಿಕ್ಷಕರು ಇದ್ದಾರೆಯೇ ? | | ✓ | |
| 8 | ಶಿಕ್ಷಕರು ಆಂಗ್ಲ ಮಾಧ್ಯಮದಲ್ಲಿ ಬೋಧಿಸುವರೇ ? | | ✓ | |
| 9 | ಉಚಿತ ಪಠ್ಯಪುಸ್ತಕ, ಸಮವಸ್ತ್ರ, ಮಧ್ಯಾಹ್ನದ ಬಿಸಿಯೂಟವನ್ನು ಪೂರೈಸಲಾಗುತ್ತಿದೆಯೇ ? | | ✓ | |
| 10 | ಸರಿಯಾದ ಸಮಯಕ್ಕೆ ಶಾಲೆಗೆ ಪ್ರತಿದಿನ ಬಂದು ಹೋಗಲು ಸಾರಿಗೆ ಸೌಲಭ್ಯ ಇದೆಯೇ ? | | ✓ | |
| 11 | ವೃತ್ತಿ ಶಿಕ್ಷಣದ ಸಾಮಗ್ರಿಗಳ ಬಳಕೆ ಆಗುತ್ತಿದೆಯೇ ? | | ✓ | |
| 12 | ಗ್ರಂಥಾಲಯದಲ್ಲಿಯ ಪುಸ್ತಕಗಳನ್ನು ಬಳಸಲು/ಓದಲು ಕೊಡಲಾಗುತ್ತಿದೆಯೇ ? | | | ✓ |
| 13 | ಮಕ್ಕಳಿಗೆ, ಶಿಕ್ಷಕರಿಗೆ ಮತ್ತು ಸಿಬ್ಬಂದಿಗೆ ಎಲ್ಲರಿಗೂ ಆಸನ ವ್ಯವಸ್ಥೆ ಇದೆಯೇ ? | | ✓ | |
| 14 | ಶಿಕ್ಷಕರು ತಮ್ಮ ವಿಷಯ ಬೋಧನೆಯಲ್ಲಿ ಕಂಪ್ಯೂಟರ್ ತಂತ್ರಜ್ಞಾನವನ್ನು ಬಳಸುವರೇ ? | | ✓ | |
| 15 | ವಿದ್ಯುತ್ ವ್ಯವಸ್ಥೆ ಇದೆಯೇ ? | | ✓ | |

ವಿದ್ಯಾರ್ಥಿಯ ಸಹಿ : Atadkal

ಹೆಸರು : ಮಹಾಲಕ್ಷ್ಮಿ

ತರಗತಿ : 10 ನೇ

ಶಾಲೆಯ ಹೆಸರು : ಆದರ್ಶ ವಿದ್ಯಾಲಯ ಚಿಂಚೋಳಿ ತಾ।। ಸೇಡಂ

## iv. ಪಾಲಕರಿಂದ ಪಡೆದ ದತ್ತಾಂಶ :

2019-20ನೇ ಸಾಲಿನ T E ಯೋಜನೆಯ ಸಂಶೋಧನೆ

(2)

**–: ಪಾಲಕರಿಗೆ ಪ್ರಶ್ನೆಗಳು :–**

| ಕ್ರ. ಸಂ | ಪ್ರಶ್ನೆಗಳು | ಇಲ್ಲ | ಹೌದು | ಭಾಗಶ: |
|---|---|---|---|---|
| 1 | ಸರ್ಕಾರದ ಯೋಜನೆಯಂತೆ 32 ಸುಸಜ್ಜಿತವಾದ ಕೊಠಡಿಗಳು ಇವೆಯೇ ? | | ✓ | |
| 2 | ನೀರಿನ ಸ್ವಂತ ಮೂಲ ಇದೆಯೇ ? | | ✓ | |
| 3 | ಹೆಣ್ಣು ಮತ್ತು ಗಂಡು ಮಕ್ಕಳಿಗೆ ಪ್ರತ್ಯೇಕ ಶೌಚಾಲಯ ಇದೆಯೇ? | | ✓ | |
| 4 | ಪೀಠೋಪಕರಣಗಳು ಬಳಸಲು ಯೋಗ್ಯವಾಗಿವೆಯೇ ? | | ✓ | |
| 5 | ವಿಷಯಾಧಾರಿತ ಲ್ಯಾಬ್‌ಗಳಲ್ಲಿ ಅವಶ್ಯಕ ಸಾಮಗ್ರಿಗಳು, ಸಲಕರಣೆಗಳು ಇತ್ಯಾದಿ ಅವಶ್ಯಕತೆಯಷ್ಟು ಇವೆಯೇ ? | | ✓ | |
| 6 | ಒಳಾಂಗಣ(ಸಹಪಠ್ಯ) ಹಾಗೂ ಹೊರಾಂಗಣ ಕ್ರೀಡಾ ಆಯೋಜನೆಗೆ ಸೌಕರ್ಯಗಳಿವೆಯೇ ? | | | ✓ |
| 7 | ಶಿಕ್ಷಕರು ಸಮರ್ಪಣಾ ಮನೋಭಾವದಿಂದ ಕೆಲಸ ಮಾಡುವರೇ ? | | ✓ | |
| 8 | ವಿದ್ಯಾರ್ಥಿಗಳಿಗೆ ಉಚಿತ ಪಠ್ಯಪುಸ್ತಕ, ಸಮವಸ್ತ್ರ, ಮಧ್ಯಾಹ್ನದ ಬಿಸಿಯೂಟವನ್ನು ಪೂರೈಸಲಾಗುತ್ತಿದೆಯೇ ? | | ✓ | |
| 9 | ವಿದ್ಯಾರ್ಥಿ ಮತ್ತು ಶಿಕ್ಷಕ, ಸಿಬ್ಬಂದಿ ಬರಲು ಸಾರಿಗೆ ವ್ಯವಸ್ಥೆ ಇದೆಯೇ? | ✓ | | |
| 10 | ನೀಡಿರುವ ಅನುದಾನವನ್ನು ಸಮರ್ಪಕವಾಗಿ ಬಳಸಲಾಗುತ್ತಿದೆಯೇ ? | | ✓ | |
| 11 | ಸುಸಜ್ಜಿತವಾದ ಕಂಪ್ಯೂಟರ್ ಲ್ಯಾಬ್ ಇದೆಯೇ ? | | ✓ | |
| 12 | ವೃತ್ತಿ ಶಿಕ್ಷಣ ಸಾಮಗ್ರಿಗಳನ್ನು ಸಮರ್ಪಕವಾಗಿ ಬಳಸಲಾಗುತ್ತಿದೆಯೇ? | | | ✓ |
| 13 | ಮೂಲಭೂತ ಸೌಕರ್ಯಗಳು ಉತ್ತಮವಾಗಿವೆಯೇ ? | | | ✓ |
| 14 | ವಿದ್ಯಾರ್ಥಿಗಳ ಆಯ್ಕೆಯಲ್ಲಿ ನಿಮ್ಮ ತಾಲೂಕಿನ ಮಕ್ಕಳಿಗೆ ಪ್ರಥಮ ಆದ್ಯತೆ ನೀಡಲಾಗಿದೆಯೇ ? | | ✓ | |
| 15 | ಆದರ್ಶ ವಿದ್ಯಾಲಯ ತಾಲೂಕು ಕೇಂದ್ರದಲ್ಲಿ ಅಥವಾ ತಾಲೂಕು ಕೇಂದ್ರದಿಂದ 5 ಕಿ.ಮೀ. ವ್ಯಾಪ್ತಿಯೊಳಗಿದೆಯೇ ? | | ✓ | |

ಸಹಿ ಮತ್ತು ಹೆಸರು : [signature] [illegible]

ವಿಳಾಸ : [illegible]

ಫೋನ ನಂಬರ್ : 9900113631

ಸಹಾಯಕರ ಹೆಸರು & ವಿಳಾಸ : —

ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ ಕಮಲಾಪಪೂರ, ಜಿ:ಕಲಬುರಗಿ

# II. ಲಿಖಿತ ಉತ್ತರ ಬಯಸುವ ಸರ್ವೇ ಮಾದರಿ ಪ್ರಶ್ನಾವಳಿ :

## i. ಮುಖ್ಯ ಶಿಕ್ಷಕರಿಂದ ಪಡೆದ ದತ್ತಾಂಶ :

2019-20ನೇ ಸಾಲಿನ T E ಯೋಜನೆಯ ಸಂಶೋಧನೆ

-: ಮುಖ್ಯ ಶಿಕ್ಷಕರ ಪ್ರಶ್ನೆಗಳು :-

ಕರ್ನಾಟಕ ಸರಕಾರ
ಸಾರ್ವಜನಿಕ ಶಿಕ್ಷಣ ಇಲಾಖೆ, ಕಲಬುರಗಿ

ಮುಖ್ಯ ಶಿಕ್ಷಕರ ಹೆಸರು: [illegible] ಆರ್ — ಫೋನ ಸಂಖ್ಯೆ:- 9945482894
ಶಾಲೆಯ ಹೆಸರು:- ಆದರ್ಶ ವಿದ್ಯಾಲಯ [illegible] — ಡೈಸ್ ಸಂಖ್ಯೆ:- 290[illegible]408526
ಸೇವೆಗೆ ಸೇರಿದ ದಿನಾಂಕ:- 24-10-1997 — ಈ ಶಾಲೆಗೆ ಬಂದ ದಿನಾಂಕ: 01-10-2018
ನೇಮಕಾತಿಯಾದ ವಿಷಯ:- [illegible] — ಬೋಧಿಸುವ ವಿಷಯ : [illegible] ವಿಜ್ಞಾನ
ವಯಸ್ಸು (ವರ್ಷಗಳಲ್ಲಿ): 52 ವರ್ಷ

ಆದರ್ಶ ಶಾಲೆಗಳ ವಸ್ತುಸ್ಥಿತಿ ತಿಳಿದುಕೊಳ್ಳಲು ಪ್ರಶ್ನೆಗಳನ್ನು ನೀಡಲಾಗಿದೆ. ಅವುಗಳಿಗೆ ನಿಮ್ಮ ಅಭಿಪ್ರಾಯ ನೀಡುವ ಮೂಲಕ ಉತ್ತರಿಸಿ. [ ಅಭಿಪ್ರಾಯ = ಅಭಿ]

1. ಆದರ್ಶ ಶಾಲೆಗಳನ್ನು ಯಾವ ಉದ್ದೇಶಕ್ಕಾಗಿ ಆರಂಭಿಸಲಾಗಿದೆಯೋ ಆ ಉದ್ದೇಶಗಳು ಎಷ್ಟರ ಮಟ್ಟಿಗೆ ಈಡೇರಿವೆ?

ಅಭಿ :
* [illegible]
* 6 ನೇ [illegible]
* [illegible]
*

2. ಮೂಲಭೂತ ಸೌಕರ್ಯಗಳು ಪೂರೈಕೆ ಆಗಿವೆಯೋ ?

ಅಭಿ : ಆಗಿದೆ,

3. ಅವುಗಳನ್ನು ಹೇಗೆ ಬಳಸಿಕೊಳ್ಳಲಾಗುತ್ತಿದೆ ?

ಅಭಿ :
* [illegible]
* [illegible]
* [illegible]

4. 2014-15 ರಿಂದ 2018-19 ರವರೆಗೆ ಎಸ್.ಎಸ್.ಎಲ್.ಸಿ ಪರೀಕ್ಷೆಯ ಫಲಿತಾಂಶದಲ್ಲಿ ಪ್ರಗತಿಯಾಗಿದೆಯಾ ? ಫಲಿತಾಂಶದೊಂದಿಗೆ ತಿಳಿಸಿ.

ಅಭಿ :

| ವರ್ಷ | ಪರೀಕ್ಷೆಗೆ ಕುಳಿತವರು | | | ಪರೀಕ್ಷೆ ಪಾಸಾದವರು | | | ಪ್ರತಿಶತ ಫಲಿತಾಂಶ |
|---|---|---|---|---|---|---|---|
| | ಗಂಡು | ಹೆಣ್ಣು | ಒಟ್ಟು | ಗಂಡು | ಹೆಣ್ಣು | ಒಟ್ಟು | |
| 2014–15 | 48 | 18 | 66 | 04 | 18 | 61 | 92.42 |
| 2015–16 | 41 | 23 | 64 | 37 | 21 | 58 | 90.62 |
| 2016–17 | 35 | 21 | 56 | 32 | 21 | 53 | 94.64 |
| 2017–18 | 31 | 12 | 43 | 26 | 12 | 38 | 88.37 |
| 2018–19 | 30 | 09 | 39 | 28 | 09 | 37 | 94.87 |

ಮುಖ್ಯ ಶಿಕ್ಷಕರ ಸಹಿ ಮತ್ತು ಶೀಲ
Head Master
Govt. Adarsh Vidyalaya
Centre Sponsored Scheme RMSA
[illegible]nalli Tq. & Dist. Kalaburagi South

ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ ಕಮಲಾಪಪೂರ, ಜಿ:ಕಲಬುರಗಿ

## ii. ಸಹ ಶಿಕ್ಷಕರಿಂದ ಪಡೆದ ದತ್ತಾಂಶ :

2019-20ನೇ ಸಾಲಿನ T E ಯೋಜನೆಯ ಸಂಶೋಧನೆ

(2)

-: ಶಿಕ್ಷಕರ ಪ್ರಶ್ನೆಗಳು :-

**ಕರ್ನಾಟಕ ಸರಕಾರ**

**ಸಾರ್ವಜನಿಕ ಶಿಕ್ಷಣ ಇಲಾಖೆ, ಕಲಬುರಗಿ**

**ಶಿಕ್ಷಕರ ಹೆಸರು:** Prashanth kumar.S **ಫೋನ ಸಂಖ್ಯೆ:-** 7795137172

**ಶಾಲೆಯ ಹೆಸರು:-** Adarsha vidyalaya RMSA channur **ಡೈಸ್ ಸಂಖ್ಯೆ:-** 29040619304

**ಸೇವೆಗೆ ಸೇರಿದ ದಿನಾಂಕ:-** 01-06-2013 **ಈ ಶಾಲೆಗೆ ಬಂದ ದಿನಾಂಕ:-** 01-06-2013

**ನೇಮಕಾತಿಯಾದ ವಿಷಯ:-** PCM [english] **ಬೋಧಿಸುವ ವಿಷಯ :-** Maths

**ವಯಸ್ಸು (ವರ್ಷಗಳಲ್ಲಿ):** 32

**ಆದರ್ಶ ಶಾಲೆಗಳ ವಸ್ತುಸ್ಥಿತಿ ತಿಳಿದುಕೊಳ್ಳಲು ಪ್ರಶ್ನೆಗಳನ್ನು ನೀಡಲಾಗಿದೆ. ಅವುಗಳಿಗೆ ನಿಮ್ಮ ಅಭಿಪ್ರಾಯ ನೀಡುವ ಮೂಲಕ ಉತ್ತರಿಸಿ. [ ಅಭಿಪ್ರಾಯ = ಅಭಿ]**

| | |
|---|---|
| **1.** | ವಿಷಯವಾರು ಲ್ಯಾಬ್‌ಗಳ ರಚನೆ ಮಾಡಲಾಗಿದೆಯೇ ? |
| **ಅಭಿ :** | ರಚನೆ ಮಾಡಲಾಗಿದೆ. |
| **2.** | ಅವುಗಳನ್ನು ಹೇಗೆ ಅರ್ಥಪೂರ್ಣವಾಗಿ ಬಳಸಿಕೊಳ್ಳಲಾಗುತ್ತಿದೆ ? |
| **ಅಭಿ :** | ವಿಜ್ಞಾನ ಪ್ರಯೋಗಾಲಯವು ವಿದ್ಯಾರ್ಥಿಗಳಿಗೆ ಪ್ರಯೋಗಗಳನ್ನು ಮಾಡಿ ತೋರಿಸಲು ಬಳಸುತ್ತೇವೆ. ಗಣಿತ ಪ್ರಯೋಗಾಲಯದಲ್ಲಿ [illegible] ಚಟುವಟಿಕೆಗಳನ್ನು ಮಾಡಿಸಲಾಗುತ್ತಿದೆ. ಸಮಾಜದ ಪ್ರಯೋಗಾಲಯವು ನಕ್ಷೆಗಳು ತಯಾರಿ ಹಾಗೂ ಇತರೆ ಚಟುವಟಿಕೆಗಳನ್ನು ನಡೆಸಲಾಗುತ್ತಿದೆ. |
| **3.** | ಎಷ್ಟು ಪ್ರಕಾರದ ವೃತಿ ಶಿಕ್ಷಣ ನೀಡಲಾಗುತ್ತಿದೆ ? |
| **ಅಭಿ :** | ಇಲ್ಲ [ಶಿಕ್ಷಕರ ನೇಮಕಾತಿ ಯಾಗಿರುವುದಿಲ್ಲ] |
| **4.** | ಅವುಗಳಿಗೆ ಸಂಬಂಧಿಸಿದ ಸಾಮಗ್ರಿಗಳ ಪೂರೈಕೆ ಎಷ್ಟರ ಮಟ್ಟಿಗೆಯಾಗಿದ್ದು ಅವುಗಳನ್ನು ಬಳಸಲಾಗುತ್ತಿದೆಯೇ ? |
| **ಅಭಿ :** | ಭಾಗಶಃ ಪೂರೈಕೆಯಾಗಿದೆ.<br>→ ಹೊಲಿಗೆ ಯಂತ್ರಗಳು (10) ಇವೆ.<br>→ ಗಾಳಿ ಬದ್ದನಿಕವನ್ನು ನಿರ್ಮಿಸಲು ಬೇಕಾದ ಸಾಮಗ್ರಿಗಳು ಇವೆ<br>→ ಸಂಗೀತಕ್ಕೆ ಸಂಬಂಧಿಸಿದ ಸಾಮಗ್ರಿಗಳಿವೆ |
| **5.** | ಮೂಲಭೂತ ಸೌಕರ್ಯಗಳು ಪೂರೈಕೆ ಆಗಿವೆಯೇ ? |
| **ಅಭಿ :** | ಆಗಿವೆ |
| **6.** | ಅವುಗಳನ್ನು ಹೇಗೆ ಬಳಸಿಕೊಳ್ಳಲಾಗುತ್ತಿದೆ ? |
| **ಅಭಿ :** | ಸಮರ್ಪಕವಾಗಿ ಬಳಸಿಕೊಳ್ಳಲಾಗುತ್ತಿದೆ. |

Prashanth
(Prashanth kumar.S)
ಶಿಕ್ಷಕರ ಸಹಿ ಮತ್ತು ಹೆಸರು

ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ ಕಮಲಾಪಪೂರ, ಜಿ:ಕಲಬುರಗಿ

**ಆ) ಫೋಟೋಗಳು :**



**ಸರ್ಕಾರಿ ಆದರ್ಶ ವಿದ್ಯಾಲಯ ಆಳಂದ ಶಾಲೆಯ 32 ಕೊಠಡಿಗಳನೊಳಗೊಂಡ ಕಟ್ಟಡ.**



**ಸರ್ಕಾರಿ ಆದರ್ಶ ವಿದ್ಯಾಲಯ ಬಿಬ್ಬಳ್ಳಿ ತಾ॥ ಸೇಡಂ ಶಾಲೆಯ 32 ಕೊಠಡಿಗಳನ್ನೊಳ ಗೊಂಡ ಕಟ್ಟಡದ ಫೋಟೋ.**



**ವಿಶಾಲವಾದ ಕಟ್ಟಡವನ್ನು ಹೊಂದಿರುವ ಆದರ್ಶ ವಿದ್ಯಾಲಯ ಬಿಬ್ಬಳ್ಳಿ ತಾ॥ ಸೇಡಂ ಕಂಪೌಂಡ ಇಲ್ಲದಿರುವ ಫೋಟೋ.**




**ಸರ್ಕಾರಿ ಆದರ್ಶ ವಿದ್ಯಾಲಯ ಅತನೂರ ತಾ॥ ಅಫಜಲಪೂರ ಶಾಲೆ ಕಂಪೌಂಡ ಹೊಂದಿಲ್ಲದಿರುವ ಫೋಟೋ.**



**ಕನ್ನಡ ಮಾಧ್ಯಮದಿಂದ ಬಂದಂಥಹ ವಿದ್ಯಾರ್ಥಿಗಳು ಇಂಗ್ಲಿಷ ಭಾಷೆಯಲ್ಲಿಯ ಕಲಿಕೆಯನ್ನು ಕುರಿತು ಸರ್ಕಾರಿ ಆದರ್ಶ ವಿದ್ಯಾಲಯ ಭೀಮಳ್ಳಿ ತಾ॥ ಕಲಬುರಗಿ ದಕ್ಷಿಣ ವಲಯ ಮಕ್ಕಳೊಂದಿಗೆ ಚರ್ಚಿಸುತ್ತಿರುವ ಫೋಟೋ.**



**ಮಕ್ಕಳ ಕಲಿಕೆಯನ್ನು ಕುರಿತು ಮಕ್ಕಳೊಂದಿಗೆ ಚರ್ಚಿಸುತ್ತಿರು ಸರ್ಕಾರಿ ಆದರ್ಶ ವಿದ್ಯಾಲಯ ಬಿಬ್ಬಳ್ಳಿ ತಾ॥ ಸೇಡಂ ಶಾಲೆಯ ಫೋಟೋ.**



**ವಿದ್ಯಾರ್ಥಿಗಳ ಕಲಿಕೆಯನ್ನು ಕುರಿತು ಸರ್ಕಾರಿ ಆದರ್ಶವಿದ್ಯಾಲಯ ಅತನೂರ ತಾ: ಅಫಜಲಪೂರಲ್ಲಿ ಮಕ್ಕಳೊಂದಿಗೆ ಚರ್ಚಿಸುತ್ತಿರುವ ಫೋಟೋಗಳು.**





**ಸರ್ಕಾರಿ ಆದರ್ಶ ವಿದ್ಯಾಲಯ ಆಳಂದ ಶಾಲೆಯ ಗಣಿತ ವಿಷಯ ಲ್ಯಾಬ್ ಹಾಗೂ ಒಳಗೊಂಡ ಕಲಿಕೋಪಕರಣಗಳ ಫೋಟೋ.**




**ಸರ್ಕಾರಿ ಆದರ್ಶ ವಿದ್ಯಾಲಯ ಅತನೂರ ತಾ॥ ಅಫಜಲಪೂರ ಶಾಲೆಯ ವಿಜ್ಞಾನ ಲ್ಯಾಬ್ ವೀಕ್ಷಿಸುತ್ತಿದ್ದು ಶಿಕ್ಷಕರೊಂದಿಗೆ ಲ್ಯಾಬ್ ಕುರಿತು ಮಾಹಿತಿ ಪಡೆಯುತ್ತಿರುವ ಪೋಟೋ.**



**ಸರ್ಕಾರಿ ಆದರ್ಶ ವಿದ್ಯಾಲಯ ಆಳಂದ ಶಾಲೆಯ ವಿಜ್ಞಾನ ಲ್ಯಾಬ್ ಫೋಟೋ.**



ಸರ್ಕಾರಿ ಆದರ್ಶ ವಿದ್ಯಾಲಯ ಭೀಮಳ್ಳಿ ತಾ॥ ಕಲಬುರಗಿ ದಕ್ಷಿಣ ವಲಯ ಶಾಲೆಯ ಕನ್ನಡ ವಿಷಯ ಲ್ಯಾಬ್ ಫೋಟೋ.




ಸರ್ಕಾರಿ ಆದರ್ಶ ವಿದ್ಯಾಲಯ ಆಳಂದ ಶಾಲೆಯ ಸಮಾಜ ವಿಜ್ಞಾನ ಲ್ಯಾಬ್ ಪೋಟೋ.




**ಸರ್ಕಾರಿ ಆದರ್ಶ ವಿದ್ಯಾಲಯ ಆಳಂದ ಶಾಲೆಯ ಪ್ರೋಜೆಕ್ಟರ್ ಮತ್ತು ಲ್ಯಾಪ್‌ಟಾಪ್ ಒಳಗೊಂಡ ಸ್ಮಾರ್ಟ ಕ್ಲಾಸ್ ಕೋಣೆ ಫೋಟೋ.**



**ಸರ್ಕಾರಿ ಆದರ್ಶ ವಿದ್ಯಾಲಯ ಭೀಮಳ್ಳಿ ತಾ॥ ಕಲಬುರಗಿ ದಕ್ಷಿಣ ವಲಯ ಪ್ರೋಜೆಕ್ಟರ್, ಲ್ಯಾಪ್ ಟಾಪ್ ಒಳಗೊಂಡ ತರಗತಿ ಕೋಣೆ ಫೋಟೋ.**



**2019–20ನೇ ಸಾಲಿನಲ್ಲಿ ಕಂಪ್ಯೂಟರ ಲ್ಯಾಬ್ ಮಂಜೂರಾಗಿದ್ದು ಎಲ್ಲ ಸಾಮಗ್ರಿಗಳೊಂದಿಗೆ ಕಂಪ್ಯೂಟ್ ಲ್ಯಾಬ್ ಸಿದ್ಧವಾದ ಸರ್ಕಾರಿ ಆದರ್ಶ ವಿದ್ಯಾಲಯ ಭೀಮಳ್ಳಿ ತಾ॥ಕಲಬುರಗಿ ದಕ್ಷಿಣ ವಲಯ ಶಾಲೆಯ ಘೋಟೋ.**



**2019–20ನೇ ಸಾಲಿನಲ್ಲಿ ಕಂಪ್ಯೂಟರ ಲ್ಯಾಬ್ ಮಂಜೂರಾಗಿದ್ದು ಸಾಮಗ್ರಿಗಳು ಸರಬರಾಜು ಆಗುತ್ತಿದ್ದು ಕಂಪ್ಯೂಟರ ಲ್ಯಾಬ್ ಪ್ರಗತಿಯಲ್ಲಿರುವ ಸರ್ಕಾರಿ ಆದರ್ಶ ವಿದ್ಯಾಲಯ ಚೆನ್ನೂರ, ತಾ: ಜೇವರ್ಗಿಯ ಘೋಟೋ.**




**ಮಕ್ಕಳಿಗೆ ಕುಳಿತುಕೊಳ್ಳಲು ಆಸನ ವ್ಯವಸ್ಥೆ ಇರುವ ಫೋಟೋ.**




**ಮೂಲಭೂತ ವ್ಯವಸ್ಥೆ ಹೊಂದಿದ ಮುಖ್ಯ ಶಿಕ್ಷಕರ ಕೋಣೆಯ ಫೋಟೋ.**



**ಆಸನ ವ್ಯವಸ್ಥೆ ಹಾಗೂ ಇತರ ಮೂಲಭೂತ ಸೌಕರ್ಯ ಹೊಂದಿದ ಶಿಕ್ಷಕರ ಕೋಣೆ ಪೋಟೋ.**



**ಆಸನ ವ್ಯವಸ್ಥೆ ಹೊಂದಿದ ಸಿಬ್ಬಂದಿಯ ಕೋಣೆ ಫೋಟೋ.**



**ಕೋಣೆಗಳಲ್ಲಿ ಫ್ಯಾನ್ ಮತ್ತು ಟ್ಯೂಬ್ ಲೈಟ್ ಹೊಂದಿರುವ ಫೋಟೋ.**



**ಆದರ್ಶ ವಿದ್ಯಾಲಯದಲ್ಲಿ ಸಿಸಿ ಕ್ಯಾಮರಾ ಹೊಂದಿದ್ದು ಮುಖ್ಯ ಶಿಕ್ಷಕರ ಕೋಣೆಯಲ್ಲಿ ಅವುಗಳನ್ನು ವೀಕ್ಷಿಸುವ ಕಂಪ್ಯೂಟರ್ ವ್ಯವಸ್ಥೆ ಹೊಂದಿರುವ ಫೋಟೋ.**



**ಸರ್ಕಾರಿ ಆದರ್ಶ ವಿದ್ಯಾಲಯ ಬಿಬಳ್ಳಿ ತಾ॥ ಸೇಡಂ ಶಾಲೆಯ ಮಕ್ಕಳಿಗೆ ನೀರಿನ ವ್ಯವಸ್ಥೆ ಮಾಡಿರುವ ಪೋಟೋ.**




**ನೀರಿನ ವ್ಯವಸ್ಥೆ ಹೊಂದಿದ್ದು ಮಕ್ಕಳಿಗೆ ಕೂಡಿಯಲು ಮತ್ತು ಶಾಲೆಯ ಹೂದೋಟಕ್ಕೆ ಬಳಕೆ ಮಾಡುವ ಸರ್ಕಾರಿ ಆದರ್ಶ ವಿದ್ಯಾಲಯ ಭೀಮಳ್ಳಿ ತಾ: ಕಲಬುರಗಿ ದಕ್ಷಿಣ ವಲಯ ಫೋಟೋ.**



**ಶಾಲಾ ಆವರಣದಲ್ಲಿ ಹೋದೋಟ ಹೊಂದಿದ ಸರ್ಕಾರಿ ಆದರ್ಶ ವಿದ್ಯಾಲಯ ಪೋಲಕಪಳ್ಳಿ ತಾ: ಚಿಂಚೋಳಿ ಫೋಟೋ.**



**ಶಾಲಾ ಆವರಣದಲ್ಲಿ ಹೋದೋಟ ಹೊಂದಿದ ಸರ್ಕಾರಿ ಆದರ್ಶ ವಿದ್ಯಾಲಯ ಬಿಬ್ಬಳ್ಳಿ ತಾ: ಸೇಡಂ ಫೋಟೋ.**



**ಸರ್ಕಾರಿ ಆದರ್ಶ ವಿದ್ಯಾಲಯ ಚಿತ್ತಾಪೂರ ಶಾಲೆಯ ಶೌಚಾಲಯ ಫೋಟೋ.**



**ಸರ್ಕಾರಿ ಆದರ್ಶ ವಿದ್ಯಾಲಯ ಪೋಲಕಪಳ್ಳಿ ತಾ॥ ಚಿಂಚೋಳಿ ಶಾಲೆಯ ಶೌಚಾಲಯ ಹಾಗೂ ಅದು ಹೊಂದಿದ ನೀರಿನ ವ್ಯವಸ್ಥೆಯ ಫೋಟೋ.**



ಮುಖ್ಯ ಶಿಕ್ಷಕರೊಂದಿಗೆ ಕ್ರೀಡಾ ಸಾಮಗ್ರಿಗಳನ್ನು ವೀಕ್ಷಿಸುತ್ತಿರುವ ಸರ್ಕಾರಿ ಆದರ್ಶ ವಿದ್ಯಾಲಯ ಆಳಂದ ಶಾಲೆಯ ಫೋಟೋ.



ಕ್ರೀಡಾ ಸಾಮಗ್ರಿಗಳನ್ನು ಹೊಂದಿರುವ ಪೋಲಕಪಳ್ಳಿ ಆದರ್ಶ ವಿದ್ಯಾಲಯ ಫೋಟೋ.






**ವ್ಯವಸ್ಥಿತವಾದ ಒಳಾಂಗಣ ಮತ್ತು ಹೊರಾಂಗಣ ಪೂರ್ಣ ಪ್ರಮಾಣದ ಆಟದ ಮೈದಾನ ಹೊಂದಿಲ್ಲದಿರುವ ಆದರ್ಶ ವಿದ್ಯಾಲಯಗಳ ಪೋಟೋಗಳು.**



**ಸರ್ಕಾರಿ ಆದರ್ಶ ವಿದ್ಯಾಲಯ ಚೆನ್ನೂರು, ತಾ: ಜೇವರ್ಗಿಯ ವಿಶಾಲವಾದ ಕೋಣೆಯಲ್ಲಿ ಮಕ್ಕಳಿಗೆ ಕುಳಿತುಕೊಂಡು ಓದಲು ಅನುಕೂಲವಾಗುವಂತೆ ವ್ಯವಸ್ಥಿತವಾದ ಆಸನಗಳನ್ನು ಒಳಗೊಂಡ ಗ್ರಂಥಾಲಯ ಕೋಣೆಯ ಫೋಟೋ.**



**ಸರ್ಕಾರಿ ಆದರ್ಶ ವಿದ್ಯಾಲಯ ಪೋಲಕಪಳ್ಳಿ ತಾ॥ ಚಿಂಚೋಳಿ ಶಾಲೆಯ ವಿಶಾಲವಾದ ಗ್ರಂಥಾಲಯ ಕೋಣೆಯಲ್ಲಿ ಮಕ್ಕಳು ಕುಳಿತುಕೊಂಡು ಓದುತ್ತಿರುವ ಫೋಟೋ.**



**ಸರ್ಕಾರಿ ಆದರ್ಶ ವಿದ್ಯಾಲಯ ಪೋಲಕಪಳ್ಳಿ ತಾ॥ ಕಲಬುರಗಿ ಶಾಲೆಯಲ್ಲಿ ವೃತ್ತಿ ಶಿಕ್ಷಣಗಾಗಿ ಖರೀದಿಸಿಟ್ಟಿರುವ ಹೋಲಿಗೆ ಮಷಿನಗಳ ಫೋಟೋ.**



**ಸರ್ಕಾರಿ ಆದರ್ಶ ವಿದ್ಯಾಲಯ ಪೋಲಕಪಳ್ಳಿ ತಾ॥ ಕಲಬುರಗಿ ಶಾಲೆಯಲ್ಲಿ ವೃತ್ತಿ ಶಿಕ್ಷಣಗಾಗಿ ಖರೀದಿಸಿಟ್ಟಿರುವ ಸಂಗೀತ ವಾದ್ಯಗಳ ಫೋಟೋ.**




**ಸರ್ಕಾರಿ ಆದರ್ಶ ವಿದ್ಯಾಲಯ ಅತನೂರ ತಾ॥ ಅಫಜಲಪೂರ ಶಾಲೆಗೆ ಸಂದರ್ಶಿಸಿದಾಗ ಶಿಕ್ಷಕರು ಮತ್ತು ಸಿಬ್ಬಂದಿಯೊಂದಿಗೆ ಚರ್ಚಿಸುವಾಗಿನ ಫೋಟೋ.**



**ಆದರ್ಶ ವಿದ್ಯಾಲಯಗಳು ಬಿಸಿಯೂಟದ ವ್ಯವಸ್ಥೆ ಹೊಂದಿರುವ ಫೋಟೋ.**